ರಂಜನ ಬೋಧನೆ ಪ್ರಚೋದನೆ
ಪತ್ರಿಕೆ
ಲಂಕೇಶ್
30 ಜುಲೈ 2014 ಪುಟ 20 ರೂ. 15/-



ಬುದ್ಧ ಮತ್ತು ಧರ್ಮ

ನಯನಾ ಕೃಷ್ಣ ಪಾಪಿಷ್ಠೆ ಆಗಿದ್ದು ಹೇಗೆ?



ಚೆಡ್ಡಿ ವೈದಿಕನ ಪಾಕ್ ಪ್ರಲಾಪ



ಗೋವಾ ಬೀದಿ ಪಾಲಾದ ಕನ್ನಡಿಗರು

ಇಸ್ರೇಲ್ ಯುದ್ಧವಲ್ಲ ಕೊಲೆ!



ಮಂಡ್ಯ ಮೊಬೈಲ್ ಬಿಚ್ಚಿಟ್ಟ ಕೊಲೆ ರಹಸ್ಯ

ಅಂಚಿನಿಂದ....



ಡಾ.ವಾಸು ಎಚ್.ವಿ.

ಮೋದಿ ಸರ್ಕಾರ್‌ನ ಮೊದಲ ಬಜೆಟ್: ಆರ್ಥಿಕ ವಿಶ್ಲೇಷಣೆ ಜಾಸ್ತಿ ಬೇಕಿ
ಜೇಟ್ಲಿ ನೀರು ಕುಡಿದದ್ದು ಯಾಕೆ ಗೊತ್ತಾ

ಈ ಅರುಣ್ ಜೇಟ್ಲಿ ಎಂಬ ಸುಪ್ರೀಂ ಕೋರ್ಟ್‌ನ ಮಾಜಿ ವಕೀಲ ಅಮೃತಸರ ಲೋಕಸಭಾ ಕ್ಷೇತ್ರದಲ್ಲಿ ಹೀನಾಯ ವಾಗಿ ಸೋತರೂ, ಮೋದಿ ಆತನನ್ನು ಮಂತ್ರಿ ಮಾಡಿ ರಕ್ಷಣೆ ಹಾಗೂ ಹಣಕಾಸಿನಂತಹ ಎರಡು ಪ್ರಮುಖ ಖಾತೆಗಳನ್ನು ಕೊಟ್ಟಿದ್ದು ಸುಮ್ಮನೇ ಅಲ್ಲ. ಸಾಮಾನ್ಯವಾಗಿ ರಾಜ್ಯಸಭೆಯಲ್ಲೇ ಕುಕ್ಕರಿಸುತ್ತಿದ್ದ ಜೇಟ್ಲಿಯನ್ನು ಎಳ್ಕೊಂಡು ಹೋಗಿ ಲೋಕಸಭೆಗೆ ನಿಲ್ಲಿಸಿದ್ದಕ್ಕೆ, ಮಹತ್ವದ ಖಾತೆಗಳನ್ನು ನೀಡಿದ್ದಕ್ಕೆ ಹಲವು ಕಾರಣಗಳಿವೆ. ಅವಕ್ಕೆಲ್ಲಾ ಇದು ಸಮಯವಲ್ಲ.

ಆದರೆ ಈ ಜೇಟ್ಲಿ ಎಂಬ ಸೂಪರ್‌ಮ್ಯಾನ್ ಲೋಕಸಭೆ ಯಲ್ಲಿ ಮೋದಿ ಸರ್ಕಾರದ ಮೊದಲ ಬಜೆಟ್ ಮಂಡಿಸು ವಾಗ ಸುಸ್ತಾದರು. ನೀರನ್ನು ಕೇಳಿ ಕುಡಿದರು. ಸ್ಪೀಕರ್‌ರತ್ತ ದೈನ್ಯದ ನೋಟ ಬೀರಿ ಬಿಡುವು ಕೇಳಿದರು. ಬ್ರೇಕ್‌ಕೆ ಬಾದ್, ಎದ್ದು ನಿಲ್ಲಲಿಲ್ಲ. ಹಿಂದಿನ ಸರ್ಕಾರದ ವಯೋವೃದ್ಧ ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿ ಸೇರಿದಂತೆ ಇಲ್ಲಿಯವರೆಗೆ ಯಾರೂ ಕೂತು ಬಜೆಟ್ ಓದಿರಲಿಲ್ಲ. ಜೇಟ್ಲಿ ಕುಳಿತೇ ಬಜೆಟ್ ಪ್ರತಿಯನ್ನು ಓದಿ ಮುಗಿಸಿದರು. ಪಾಪ ವ್ಯಕ್ತಿ ಎಂತಹವನೇ ಆದರೂ, ಆತನ ಅನಾರೋಗ್ಯವನ್ನು ನಾವು ಆಡಿಕೊಳ್ಳಬಾರದು, ಅಲ್ಲವೇ? ಪ್ರಶ್ನೆ ಅದಲ್ಲ, ಮೋದಿಯ ಸರ್ಕಾರದಲ್ಲಿ ಯಾವುದೂ (ಬಾಬಾ ರಾಮ್‌ದೇವ್‌ನ ಸ್ನೇಹಿತ ಡಾ.ವೈದಿಕ್‌ರ ಪಾಕಿಸ್ತಾನದ ಉಗ್ರಗಾಮಿ ಸೈಯ್ಯದ್ ಹಫೀಜ್‌ನ ಭೇಟಿಯೂ ಸೇರಿದಂತೆ) ಕಾರ್ಯಕಾರಣ ಸಂಬಂಧ ಇಲ್ಲದೇ ನಡೆಯುತ್ತಿಲ್ಲ. ಬಜೆಟ್ಟಿಗೂ ಜೇಟ್ಲಿಯ ಸುಸ್ತಿಗೂ ಸಂಬಂಧವಿದೆ.


ಈ ಬಜೆಟ್‌ಗೆ ಬಂದಿರುವ ಪ್ರತಿಕ್ರಿಯೆಗಳೇ ಅದನ್ನು ಸಾಬೀತುಪಡಿಸುತ್ತವೆ. ಇಂದಿನ (ಜುಲೈ 16) ಪ್ರಜಾವಾಣಿ ಯಲ್ಲಿ ಈ ಕುರಿತು ಬರೆದಿರುವ ಕ್ಯಾ.ಜಿ.ಆರ್.ಗೋಪಿನಾಥ್ ತಮ್ಮ ನಿರಾಸೆಯನ್ನು ವ್ಯಕ್ತಪಡಿಸಿದ್ದಾರೆ. ನವಉದಾರವಾದಿ ಆರ್ಥಿಕತೆಯ ಹರಿಕಾರರಾದ ರೇಗನ್ ಮತ್ತು ಥ್ಯಾಚರ್‌ರನ್ನು ಹೊಗಳಿ, ಈ ದೇಶವನ್ನು ಮತ್ತಷ್ಟು ಕಾರ್ಪೊರೇಟ್‌ಮಯ ಮಾಡಲು ಏನೇನು ಮಾಡಬೇಕಿತ್ತು ಎಂಬುದನ್ನು ಗೋಪಿನಾಥ್ ವಿವರಿಸಿದ್ದಾರೆ. ಈ ಮಾಜಿ ಏರ್‌ಲೈನ್ಸ್ ಒಡೆಯ, ಮಾಜಿ ಆಮ್ ಆದ್ಮಿ ಈಗ ಮೋದಿಯ ಬಗೆಗಿನ ಭ್ರಮನಿರಸನವನ್ನು ತೋಡಿಕೊಳ್ಳುತ್ತಾ, ಮೋದಿಯ ಮಾಜಿ ಬೆಂಬಲಿಗನಾಗಿಬಿಡ ಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಇದೇ ನಿರಾಸೆ ಇನ್ನೂ ಕೆಲವು ಪಕ್ಕಾ ಕಾರ್ಪೊರೇಟ್ ಆರ್ಥಿಕ ತಜ್ಞರಿಗೂ ಆಗಿದೆ. ಯುಪಿಎ ಅರ್ಥ ಸಚಿವ ಚಿದಂಬರಂ, ಇದು ತಮ್ಮ ಬಜೆಟ್‌ನ ಮುಂದುವರಿಕೆ ಎಂದು ಹೇಳಿರುವುದಕ್ಕೆ ಅರ್ಥವಿದೆ. ಚಿದಂಬರಂ ಬಜೆಟ್‌ಗೆ ಕೇಸರಿ ಬಣ್ಣ ಬಳಿಯಲಾಗಿದೆ ಅಷ್ಟೇ ಎಂದೂ ಕೆಲವರು ಹೇಳಿದ್ದಾರೆ.

ಹಾಗೆ ನೋಡಿದರೆ ಜೇಟ್ಲಿ, ಚಿದಂಬರಂರ ಮುಂದುವರಿಕೆ ಸಹ ಆಗಿದ್ದಾರೆ. ಇಬ್ಬರೂ ವಕೀಲರೇ. ಚಿದಂಬರಂ ವೇದಾಂತ ಕಂಪೆನಿಗೆ ವಕೀಲರಾಗಿದ್ದರೆ, ಜೇಟ್ಲಿ ವೊಡಾಫೋನ್ ಕಂಪೆನಿಯ ವಕೀಲರಾಗಿದ್ದರು. ಹಾಗಾಗಿಯೇ ವೊಡಾಫೋನ್ ಪರವಾಗಿ ನೀತಿ ರೂಪಿಸುವ ಕೆಲಸವನ್ನು ನೇರವಾಗಿ ತಾವೇ ಮಾಡದೇ, ತಮ್ಮ ಸಹಾಯಕ ಮಂತ್ರಿಣಿ ನಿರ್ಮಲಾ ಸೀತಾರಾಮನ್ ಕೈನಲ್ಲಿ ಮಾಡಿಸಲು ಫೈಲನ್ನು ಹಸ್ತಾಂತರಿಸಿದ್ದಾರೆ.

ಇರಲಿ, ಬಜೆಟ್‌ನಲ್ಲಿ ಅವರು 'ಬಹಳ ದೊಡ್ಡ ಬದಲಾವಣೆ'ಗಳನ್ನು ತಂದಿಲ್ಲವೆಂಬುದು 'ಭಾರೀ ಕೊಡುಗೆ' ಗಳನ್ನು ನಿರೀಕ್ಷಿಸಿದ್ದ ಕಾರ್ಪೊರೇಟ್ ವಲಯದ ಗೊಣಗು. (ಜೇಟ್ಲಿಯ ಬಜೆಟ್ ಭಾಷಣ ಮುಂದುವರೆಯುತ್ತಿದ್ದಂತೆ ಸೆನ್ಸೆಕ್ಸ್ ಮತ್ತು ನಿಫ್ಟಿಗಳು ಇಳಿಕೆ ಕಂಡವು! '800 ಪಾಯಿಂಟ್ ಮೇಲ್' ಇದ್ದದ್ದು '78 ಪಾಯಿಂಟ್ ಕೆಳಗೆ' ಆಯಿತು) ಆದರೆ ಚಿದಂಬರಂಗಿಂತ ಚೆನ್ನಾಗಿ ಈ ವಲಯವನ್ನು ಸಂತುಷ್ಟಿಗೊಳಿಸುವ ಪ್ರಯತ್ನವಂತೂ ನಡೆದಿದೆ. ಯುಪಿಎ-1 ಹಲವು ಕಾರಣಗಳಿಂದ ಸಂಪೂರ್ಣ ಕಾರ್ಪೊರೇಟ್ ಗುಲಾಮಗಿರಿ ಮಾಡಲು ಸ್ವಲ್ಪ ಹಿಂದೇಟು ಹಾಕಿತ್ತು, ಯುಪಿಎ-2ರ ಹೊತ್ತಿಗೆ, ಕಾರ್ಪೊರೇಟ್ ಪರ ನೀತಿಯಲ್ಲಿ ನಾಲ್ಕು ಹೆಜ್ಜೆ ಮುಂದಕ್ಕೆ ಸಾಗಿತ್ತು. ಮೋದಿ ಸರ್ಕಾರ್‌ನ ಜೇಟ್ಲಿ ಇನ್ನೂ ಎಂಟು ಹೆಜ್ಜೆ ಮುಂದೆ ಸಾಗಿದ್ದಾರೆ. 16 ಹೆಜ್ಜೆ ನಿರೀಕ್ಷೆ ಮಾಡಿದ್ದವರಿಗೆ ಸಹಜವಾಗಿಯೇ ನಿರಾಸೆಯಾಗಿದೆ.

ಎಂಟು ಹೆಜ್ಜೆ ಮುಂದೆ ಅಂದರೆ? ಅಂದರೆ ಮತ್ತಷ್ಟು ಬೆಲೆ ಏರಿಕೆ, ಮತ್ತಷ್ಟು ಸಬ್ಸಿಡಿ ಕಡಿತ, ಜನಸಾಮಾನ್ಯರಿಗೆ ಮಗದಷ್ಟು ಹೊರೆ (ಬಾಕ್ಸ್ ನೋಡಿ). ಮೋದಿ ಪ್ರಚಾರದ ರೀತಿಯು ಸಾಮಾನ್ಯ ಜನರು ಮತ್ತು ಕಾರ್ಪೊರೇಟ್ ವಲಯ ಎರಡೂ ಕಡೆ ಭಾರೀ ನಿರೀಕ್ಷೆಗಳನ್ನು ಹುಟ್ಟಿಸಿತ್ತು. ಅವನ್ನು ಪೂರೈಸುವುದು ಸಾಧ್ಯವಾಗುವುದಿಲ್ಲ ಎಂಬುದು ಬಜೆಟ್ ಮಂಡನೆಗೆ ಮುಂಚೆಯೇ, ಮೋದಿ-ಜೇಟ್ಲಿ ಇಬ್ಬರಿಗೂ ಗೊತ್ತಿತ್ತು. ಹಾಗಾಗಿಯೇ ಜನರು ಕೆಲವು ಹೊರೆಗಳನ್ನು ತಡೆದುಕೊಳ್ಳಬೇಕಾಗುತ್ತದೆ ಎಂಬ ಸೂಚನೆಗಳನ್ನು ಅವರು ಮೊದಲೇ ನೀಡಿದ್ದರು. ಸದಾ ಆನಂದ ಗೌಡರೂ, ಅಭೂತಪೂರ್ವ ರೀತಿಯಲ್ಲಿ ರೈಲು ದರ ಏರಿಕೆಯನ್ನು ಮಾಡಿದ್ದುದೂ ಈ ಸೂಚನೆಯನ್ನು ಮತ್ತಷ್ಟು ಬಲವಾಗಿಸಿತ್ತು.

ಬೆಲೆ ಏರಿಕೆಯ ಕುರಿತು ಚುನಾವಣಾಪೂರ್ವದಲ್ಲಿ ಸಾಕಷ್ಟು ಮಾತನಾಡಿದ್ದ ಮೋದಿ, ಅಧಿಕಾರಕ್ಕೆ ಏರಿದ



ನಂತರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಏರುತ್ತಲೇ ಹೋದದ್ದನ್ನು ನೋಡುತ್ತಾ ಹೋದರು. ಏನೂ ಮಾಡಲಿಲ್ಲ, ಸಬ್ಸಿಡಿ ಸಹಿತ ಅಡಿಗೆ ಅನಿಲದ ಬೆಲೆಯನ್ನು ಎರಡು ಪಟ್ಟು ಹೆಚ್ಚಿಸುವ ತೀರ್ಮಾನವನ್ನು ಜಾರಿಗೆ ತರದೇ ಕೂತಿದ್ದಾರೆ. ಅದು ಯಾವಾಗ ಅಪ್ಪಳಿಸುತ್ತದೋ ಗೊತ್ತಿಲ್ಲ. ಈರುಳ್ಳಿ ಬೆಲೆ ಏರಿಕೆಯು ಬಹಳ ಹಿಂದೆ ದೆಹಲಿಯ ಬಿಜೆಪಿ ಸರ್ಕಾರ(ಸುಷ್ಮಾ ಸ್ವರಾಜ್ ಮುಖ್ಯಮಂತ್ರಿ ಯಾಗಿದ್ದಾಗ)ವು ಚುನಾವಣೆಯಲ್ಲಿ ಸೋಲಲ್ಪಪ್ಪಲು ಕಾರಣವಾಗಿತ್ತು. ಈಗ ಚುನಾವಣೆಯಲ್ಲಿ ಗೆದ್ದ ಮೇಲೆ ಈರುಳ್ಳಿ ಬೆಲೆಯನ್ನು ಹಿಡಿದಿಡಲು ಬಿಜೆಪಿಗೆ ಸಾಧ್ಯವಾಗುತ್ತಿಲ್ಲ. ರೈತರಿಗೆ ಕೋಟ್ಯಾಂತರ ಬಾಕಿ ಉಳಿಸಿ ಕೊಂಡಿರುವ ಸಕ್ಕರೆ ಕಾರ್ಖಾನೆಗಳು ಬಲ ಪಡೆದುಕೊಳ್ಳಲಿ ಎಂಬ 'ಸದುದ್ದೇಶ'ದಿಂದ, ಸಕ್ಕರೆಯ ಮೇಲಿನ ಆಮದು ಸುಂಕವನ್ನು 15%ನಿಂದ 40%ಗೆ ಕೇಂದ್ರ ಸರ್ಕಾರವು ಏರಿಸಿತು. ಅದರ ಪರಿಣಾಮವಾಗಿ ಸಕ್ಕರೆ ಬೆಲೆಯೂ ಏರಿತು.

ದೇಶದ ಎಲ್ಲಾ ಜನರಿಗೂ ಸ್ವರ್ಗವನ್ನೇ ಖಾತರಿಗೊಳಿಸು ವುದಾಗಿ ಮೋದಿ ಚುನಾವಣಾ ಪ್ರಚಾರದಲ್ಲಿ ಹೇಳಿದ್ದರು. ಅವರ 'ಅಚ್ಛೇ ದಿನ್' (ಒಳ್ಳೆಯ ದಿನಗಳ)ನ ಭರವಸೆ ಈಗ ಲೇವಡಿಗೊಳಗಾಗುತ್ತಿರುವುದು ಅದೇ ಕಾರಣಕ್ಕೆ. ಅಂಬಾನಿಗೂ, ಜನಸಾಮಾನ್ಯರಿಗೂ ಇಬ್ಬರಿಗೂ ಏಕಕಾಲದಲ್ಲಿ ಒಳಿತನ್ನು ಬಯಸುವುದು ಸಾಧ್ಯವಿಲ್ಲ. ಈ ವೈರುಧ್ಯವನ್ನು ಬಗೆಹರಿಸುವ ಉದ್ದೇಶವೇನೂ ಮೋದಿಗಿರಲಿಲ್ಲ. ಆದರೆ ಜನಸಾಮಾನ್ಯರ ವಿರೋಧವನ್ನು ಒಮ್ಮೆಲೇ ಕಟ್ಟಿಕೊಳ್ಳಲು ಬೇಕಾದಷ್ಟು ಅಮಲನ್ನು ಇನ್ನೂ ಕುಡಿಸದೇ ಕೆಟ್ಟದಿನಗಳನ್ನು ಜನರ ಮೇಲೆ ಹೇರಲಾಗದು. ಎಲ್ಲಕ್ಕಿಂತ ಮುಖ್ಯವಾಗಿ ಸದ್ಯದಲ್ಲೇ ಮಹಾರಾಷ್ಟ್ರ ರಾಜ್ಯ ಚುನಾವಣೆಗೆ ಹೋಗಲಿದೆ. ಹಾಗಾಗಿಯೇ ಮುಂಬೈ ಲೋಕಲ್ ಟ್ರೇನ್‌ಗೆ ಅನ್ವಯಿಸುವ ಹಾಗೆ ಸ್ಥಳೀಯ ರೈಲು ಪ್ರಯಾಣದರವನ್ನು ರೈಲ್ವೇ ಇಲಾಖೆಯು ಇಳಿಸಿದ್ದು.

ರೈತರಿಗೆ ಅವರ ಬೆಳೆಗಳ ಮೇಲೆ ಕನಿಷ್ಠ 50% ಲಾಭದ ಖಾತರಿಯನ್ನು ಮೋದಿ ಮಹಾಶಯರು ನೀಡಿದ್ದರು. ಅದರ ಕುರಿತು ಈ ಬಜೆಟ್‌ನಲ್ಲಿ ಏನೇನೂ ಇಲ್ಲ, ಏನೆಂದರೆ ಏನೂ..! ಅಷ್ಟು ಖಾತರಿ ನೀಡುವುದರ ಅರ್ಥ, ಅಷ್ಟರ ಮಟ್ಟಿಗೆ ಆಹಾರ ಪದಾರ್ಥಗಳ ಬೆಲೆ ಏರಿಕೆ ಎಂದು ಮಾತ್ರ. ಏಕೆಂದರೆ ಉತ್ಪಾದನಾ ವೆಚ್ಚವನ್ನು ಇಳಿಸಿ, ಲಾಭದ ಖಾತರಿ ಮಾಡಬೇಕೆಂದರೆ ಬೀಜ, ಗೊಬ್ಬರಕ್ಕೆ ಸಬ್ಸಿಡಿ ಹೆಚ್ಚಿಸಬೇಕು. ಈ ಬಜೆಟ್‌ನಲ್ಲಿ ಗೊಬ್ಬರಕ್ಕೆ ನೀಡುವ ಸಬ್ಸಿಡಿಯನ್ನು ಕಡಿತಗೊಳಿಸಿಲ್ಲ, ಹಾಗಂತ, ಅದು ರೈತರ ಲಾಭವನ್ನು ಹೆಚ್ಚಿಸುವ ಪ್ರಮಾಣಕ್ಕೆ ಏರಿಯೂ ಇಲ್ಲ. ಮೇಲಾಗಿ ಮಾನ್‌ಸೂನ್ ದೇಶದ ಬಹುಭಾಗದಲ್ಲಿ ವಾಡಿಕೆಗಿಂತ ಶೇ.45ರಷ್ಟು ಕಡಿಮೆಯಾಗಿದೆ. ಈ ಅಂಶವು, ಮಾರುಕಟ್ಟೆಯ ಮೇಲೆ ಪರಿಣಾಮ ಬೀರಬೇಕಿರುವುದು ಮುಂದಿನ ಕಟಾವಿನ ಹೊತ್ತಿಗಲ್ಲವೇ ಎಂಬ ಸಾಮಾನ್ಯ ಜ್ಞಾನವನ್ನು ಮೀರಿ ವ್ಯಾಪಾರಿಗಳು ವರ್ತಿಸುತ್ತಾರೆ. ಮೋದಿಯ ಪರವಾಗಿ ಪರಂಪರಾನುಗತವಾಗಿ ನಿಂತಿರುವ ಇಂತಹ ವ್ಯಾಪಾರಿಗಳು ಮುಂದಿನ ಕಟಾವಿನ ಕೊರತೆಯನ್ನು ಲಾಭ ಮಾಡಿಕೊಳ್ಳಲು, ಈಗಿನಿಂದಲೇ ಸ್ಟಾಕ್ ಮಾಡಲಾರಂಭಿ ಸುತ್ತಾರೆ. ಇದನ್ನು ತಡೆಯುವ ಯಾವ ಉಪಾಯವೂ ಈ ಸರ್ಕಾರದ ಹತ್ತಿರ ಇಲ್ಲ; ಇರಲು ಸಾಧ್ಯವಿಲ್ಲ.

ಕಳೆದ ನಾಲ್ಕು ವರ್ಷಗಳ ಸಂಚಯಿತ ಹಣದುಬ್ಬರ (cumulative inflation) ಶೇ.50ರಷ್ಟು. ಅಂದರೆ, ನಗರ ಮತ್ತು ಗ್ರಾಮೀಣ ಭಾಗದ ಜನಸಾಮಾನ್ಯರ 'ನೈಜ ಆದಾಯ' ಸಂಪೂರ್ಣ ಇಳಿದುಹೋಗಿದೆ. ಇದನ್ನು ತುಂಬಿಕೊಡುವ ಯಾವ ಒಂದು ಯೋಜನೆಯೂ ಈ ಬಜೆಟ್‌ನಲ್ಲಿ ಇಲ್ಲ. ತಲಾ ನೂರು ಕೋಟಿ ವೆಚ್ಚದ 29 ಯೋಜನೆಗಳನ್ನು ಜೇಟ್ಲಿ ಘೋಷಿಸಿದ್ದಾರೆ. ಕೇಂದ್ರ ಸರ್ಕಾರವು ಯೋಜನೆಯೊಂದಕ್ಕೆ 100 ಕೋಟಿ ನೀಡುತ್ತದೆ ಎಂದರೆ, ಅದರರ್ಥ ಅದು ಯೋಜನೆಯಲ್ಲ, ಘೋಷಣೆ ಮಾತ್ರ ಎಂದು. ಅಥವಾ ಹೆಚ್ಚೆಂದರೆ ಅಧ್ಯಯನವಾಗಿರುತ್ತದೆ. ಹಲವು ಸಾರಿ, ಯಾವುದಾದರೂ ಒಂದು ಯೋಜನೆಯನ್ನು ಪ್ರಕಟಿಸಬೇಕು, ಆದರೆ ಜಾರಿ ಮಾಡಬಾರದು. ಜಾರಿ ಮಾಡಲು ಅಸಾಧ್ಯ ಎನ್ನುವ ಒಂದು ವರದಿ ತಯಾರಿಸಿಕೊಳ್ಳಬೇಕು ಎಂದರೆ 100 ಕೋಟಿಯ ಯೋಜನೆಯನ್ನು ಪ್ರಕಟಿಸುತ್ತದೆ. ಅದೇ ಈಗಲೂ ಆಗಿರುವುದು.

ಈ ಪರಿಸ್ಥಿತಿಯನ್ನು ಎದುರಿಸಲು ಅವರ ಮುಂದೆ ಸೀಮಿತ ಆಯ್ಕೆಗಳಿದ್ದವು. ಒಂದು, ದೇಶದ ಬಲಿಷ್ಠ ಜನನಾಯಕ ಮೋದಿಯು ಜನರಿಗೆ ಎಲ್ಲವನ್ನೂ ಎದುರಿಸಿ ಮನವರಿಕೆ ಮಾಡಿಕೊಡುವುದು. ಚುನಾವಣೆಗೆ ಮುಂಚಿನ ಆ ಆತ್ಮವಿಶ್ವಾಸ ಕುಸಿದು ಹೋಗಿರುವುದರಿಂದ ಮೋದಿ ಈಗ ಸಾರ್ವಜನಿಕ ಭಾಷಣಗಳನ್ನು ಕಡಿಮೆ ಮಾಡಿದ್ದಾರೆ. ಹಾಗಾಗಿ ಅದು ಸಾಧ್ಯವಿಲ್ಲ. ಎರಡು, ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಕೋಮು ಉನ್ಮಾದವನ್ನೋ, ಯುದ್ಧವನ್ನೋ ಮಾಡುವುದು. ಪಾಕಿಸ್ತಾನವೂ ಸೇರಿದಂತೆ ಎಲ್ಲೆಡೆ ಆರ್ಥಿಕ ಆಸಕ್ತಿಗಳನ್ನು ಹೊಂದಿರುವ ಉದ್ದಿಮೆಪತಿಗಳ ಹಿಂಡಿಗೆ ಅದು ಈಗಲೇ ಬೇಕಿಲ್ಲ. ಈ ಘಟ್ಟದಲ್ಲಿ ಬದಲಿಗೆ 'ಶಾಂತಿ'ಯನ್ನು ಸ್ಥಾಪಿಸಿ, ಬಲಾಢ್ಯ ಭಾರತದ ಪೋಸು ನೀಡುವುದು ಮಾತ್ರ ಅವರ ಹಿತಾಸಕ್ತಿಗೆ ಪೂರಕವಾಗಿರುತ್ತದೆ ಎಂಬ ಅಭಿಪ್ರಾಯಕ್ಕೆ ಬಂದಂತಿದೆ. ಆದ್ದರಿಂದ ಒಟ್ಟಾರೆ ಆರ್ಥಿಕತೆಯ ಪುನಶ್ಚೇತನಕ್ಕೆ ಕನಿಷ್ಠ ಎರಡು ವರ್ಷಗಳಾದರೂ ಬೇಕು. ಇಷ್ಟು ಬೇಗ ಸಾಧ್ಯವಿಲ್ಲ, ನಮ್ಮ ಮೇಲೆ ಮಾತ್ರ ಯಾಕೆ ಇಷ್ಟೊ[...] ಒತ್ತಡ ಹಾಕುತ್ತೀರಿ? 60 ವರ್ಷ ಆಳಿದ ಕಾಂಗ್ರೆಸ್ಸ[...] ಕೇಳಿ ಎಂದು ತಿಪ್ಪೆ ಸಾರಿಸಲು ಹೊರಟಿದ್ದಾರೆ.

ಬದಲಾವಣೆಗಾಗಿ ಮತ ಎಂದು ಮೋದಿ ಹಾ[...] ಬಿಜೆಪಿ ಕೇಳಿದ್ದರು. ಜನರೂ ಬದಲಾವಣೆಯನ್ನೇ ಬಯಸಿ ಓಟು ಹಾಕಿದ್ದರು. ಬೆಲೆ ಏರಿಕೆಯಿಂದ ಬದಲಾವಣೆ, ಭ್ರಷ್ಟಾಚಾರದಿಂದ ಬದಲಾವಣೆ, ನಿರ್ಣಾಯಕವಾದ ತೀರ್ಮಾನಗಳನ್ನು ತೆಗೆದುಕೊಳ್ಳ[...] ಲಾಗದ ಹಿಂದಿನ ಪ್ರಧಾನಿಯಿಂದ ಬದಲಾವಣೆ, ನಿಧಾನಗತಿಯ ಬೆಳವಣಿಗೆಯ ಆರ್ಥಿಕತೆಯಿಂದ ಬದಲಾವಣೆ. ಈ ಬಜೆಟ್ ಅಂತಹ ಬದಲಾವಣೆ[...] ಮೊದಲ ಹೆಜ್ಜೆಯಾಗಬಹುದೆಂಬ ನಿರೀಕ್ಷೆ ಈ ದೇ[...] ಜನರಲ್ಲಿ (ಕನಿಷ್ಠ ಮೋದಿಗೆ ವೋಟು ಹಾಕಿದ ಶೇ.[...] ಜನರಲ್ಲಿ) ಇದ್ದರೆ, ಅದು ಸಹಜ. ಅಂತಹ ಬದಲಾವಣೆಯನ್ನು ಜೇಟ್ಲಿ ಬಜೆಟ್ ನೀಡಲಾಗಿಲ್ಲ.

ಏಕೆ ನೀಡಲಾಗಿಲ್ಲ? ಏಕೆಂದರೆ ಅಂಬಾನಿ-ಅದಾನಿಗಳ ಲಾಭವನ್ನೂ ಹೆಚ್ಚಿಸಿ, ಜನಸಾಮಾನ್ಯರಿ[...] ಸ್ವರ್ಗವನ್ನು ನೀಡುವ ಪರಸ್ಪರ ವಿರುದ್ಧವಾದ ಎರ[...] ಸಂಗತಿಗಳನ್ನು ಏಕಕಾಲದಲ್ಲಿ ಸಾಧಿಸಬೇಕಾದ ಅಸಂಗತವಾದ ವಿಚಾರ. ಇದನ್ನು ಮಣಿಶಂಕರ್ ಅಯ್ಯರ್, ಮೋದಿ ಅಧಿಕಾರಕ್ಕೇರಿದ ಆರಂಭದಲ್ಲೇ[...] ಬರೆದಿದ್ದರು. 'ರಾಜಕಾರಣದಲ್ಲಿ ನೀವು ಇವರ ಪರ[...] ಅಥವಾ ಅವರ ಪರವೋ ಎಂಬ ಆಯ್ಕೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಎರಡೂ ಸಹ ಒಮ್ಮೆಗ[...] ಅಸಾಧ್ಯ' ಎಂದು.

ಮೋದಿಯ ಆಯ್ಕೆ, ಜೇಟ್ಲಿಯ ಆಯ್ಕೆ ಸ್ಪಷ್ಟ[...] ಅವರು ಅವರ ಪರವೇ. ಆದರೆ ಇಷ್ಟು ಬೇಗ ಸಂಪೂರ್ಣವಾಗಿ ಬೆತ್ತಲಾಗುವುದಕ್ಕೆ ಬೇಕಾದ ಸಿದ್[...] ಇನ್ನೂ ಮಾಡಿಕೊಂಡಿಲ್ಲ. ಏನೇ ಮಾಡಿದರೂ ಈ[...] ನಿರೀಕ್ಷೆಯ ಭಾರವನ್ನು ಅವರು ಹೊರುವುದು ಸಾಧ್ಯವೇ ಇರಲಿಲ್ಲ. ಹಾಗಾಗಿ ಬಜೆಟ್ ಪ್ರಕ್ರಿಯೆಯ[...] ಸಾಕಷ್ಟು ನೀರು ಕುಡಿಯಬೇಕಾಗಿ ಬಂದಿತು. ನೀರ[...] ಕುಡಿದರೆ ದಣಿವಾರಲಿಲ್ಲ; ಬದಲಿಗೆ ಹೆಚ್ಚಾಯಿತು. ಎದ್ದು ನಿಂತಿದ್ದ ಜೇಟ್ಲಿ, ಕುಸಿದು ಕುಳಿತರು.

ಟ್ವೀಟ್‌ಗಳಲ್ಲಿ ಬಳಸುವ ಪದಗಳನ್ನು ಬಳಸಿ, ಮೋದಿ ಬಜೆಟ್‌ಅನ್ನು ಹೊಗಳಲು ಪ್ರಯತ್ನಪಟ್ಟ[...] ಇದು ಜನ್‌ಶಕ್ತಿ ಔರ್ ಜನ್‌ಭಾಗೀದಾರಿಕಾ ಬಜೆ[...] ಎಂದು ಮೊದಲು ಹೇಳಿದರು. ವಾಸ್ತವದಲ್ಲಿ ಅಂತಹದ್ದೇನೂ ಬಜೆಟ್‌ನಲ್ಲಿ ಇರಲಿಲ್ಲ. ತನ್ನ ಪದ[...] ತನಗೇ ನಂಬಿಕೆ ಬರದೇ, ಇದಿನ್ನೂ ಆರಂಭವೆಂದ[...] ಹೇಳಲು 'ಇದು ಅರುಣೋದಯದ ಬಜೆಟ್' ಎಂದರು. ಮತ್ತೆ ಅಯ್ಯರ್ ಅವರ ಮಾತಲ್ಲೇ ಹೇಳುವುದಾದರೆ, ಇದು ಅರುಣೋದಯವಲ್ಲ, ಕೇವಲ ಅರುಣ್ ಜೇಟ್ಲಿ.

ಈ ಬಜೆಟ್ ಕುರಿತು ಕೆಲವು ಅಂಕಿಗಳು - ಅಂಶಗಳು

- ಸಾರ್ವಜನಿಕ ಉದ್ದಿಮೆಗಳನ್ನು (PSU) ಖಾಸಗಿಯವರ ಕೈಗೆ ಹಾಕುವ ಕೆಲಸ ಮುಂದುವರೆಸಲಿದ್ದಾರೆ. ಈ ವರ್ಷ 43,000 ಕೋ[...] ರೂ.ಗಳಷ್ಟು ಮೌಲ್ಯದ ಖಾಸಗೀಕರಣದ ಯೋಜನೆಯನ್ನು ಜೇಟ್ಲಿ ಮಂಡಿಸಿದ್ದಾರೆ.
- ವಿದೇಶೀ ನೇರ ಹೂಡಿಕೆ: ರಕ್ಷಣೆ, ವಿಮೆ[...] ಈ-ಕಾಮರ್ಸ್‌ನಲ್ಲಿ ಶೇ.49ಕ್ಕೆ ಏರಿಕೆ.
- ಕಾಂಗ್ರೆಸ್ ಪಕ್ಷವು, ಬಡವರನ್ನು ಕನಿಷ್ಠ 'ಮೈಂಟೇನ್' ಮಾಡಲು ತಂದಿದ್ದ ಎರಡು ಯೋಜನೆಗಳಾದ ನರೇಗಾ (ಗ್ರಾಮೀಣ ಉದ್ಯೋ[...] ಖಾತರಿ) ಮತ್ತು ಆಹಾರ ಭದ್ರತಾ ಕಾಯ್ದೆಗಳ ಕು[...] ಬಜೆಟ್ ಹೆಚ್ಚೇನೂ ಮಾತಾಡಿಲ್ಲ. ಹಣದುಬ್ಬರ ಹೆಚ್ಚಾದಾಗ, ಇವುಗಳಿಗೆ ಮಾಡುವ ಖರ್ಚಿನ ಪ್ರಮಾಣವೂ ಏರಬೇಕಲ್ಲವೇ? ಯುಪಿಯ ಸರ್ಕಾ[...] ಕಾಲದಿಂದಲೂ ನರೇಗಾಕ್ಕೆ ನಿಗದಿ ಪಡಿಸಿದ ಹಣ[...] ಪ್ರಮಾಣ ಏರುತ್ತಿಲ್ಲ. ಈ ಸರ್ಕಾರವೂ ಏರಿಸಿಲ್ಲ.
- ಸಾಮಾಜಿಕ ವೆಚ್ಚ (ವಿವಿಧ ಜನ ಕಲ್ಯಾಣ ಯೋಜನೆಗಳಿಗೆ) 2013-14ರಲ್ಲಿ 10.8% ಇ[...] 2014-15ರಲ್ಲಿ 4.42%ಗೆ ಇಳಿಕೆ.
- ಮೂಲಭೂತ ಸೌಕರ್ಯ ನಿರ್ಮಾಣ: ರ[...] ರಸ್ತೆ, ಬಂದರು ಇತ್ಯಾದಿಗಳಲ್ಲಿ ಖಾಸಗಿ-ಸಾರ್ವಜ[...] ಸಹಭಾಗಿತ್ವ (ಪಿಪಿಪಿ) ಕ್ಕೆ ಪ್ರೋತ್ಸಾಹ. ಭ್ರಷ್ಟಾಚ[...] ಗಂಗೋತ್ರಿಗಳಲ್ಲಿ ಈ ಪಿಪಿಪಿಯೂ ಒಂದು ಮುಖ್ಯವಾದ ಕ್ಷೇತ್ರ.

ಇದು ಯುದ್ಧವಲ್ಲ, ಬರ್ಬರ ಕೊಲೆಗಳು

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಕಳೆದ ಹತ್ತು ದಿನಗಳಿಂದ ಇಸ್ರೇಲ್ ಸೈನ್ಯ ಪ್ಯಾಲೆಸ್ಟೇನಿಯರ ಗಾಜಾ ಸ್ಟ್ರಿಪ್ ಮೇಲೆ ನಿರಂತರ ದಾಳಿ ನಡೆಸುತ್ತಿದ್ದು ಈಗಾಗಲೇ ಇನ್ನೂರಕ್ಕೂ ಹೆಚ್ಚು ಮುಸಲ್ಮಾನರು ಸತ್ತಿದ್ದಾರೆ. ಸತ್ತವರಲ್ಲಿ ಬೆರಳೆಣಿಕೆಯಷ್ಟು ಜನ ಮಾತ್ರ ಹಮಾಸ್ ಸಂಘಟನೆಯ ಯೋಧರಾಗಿದ್ದು ಶೇ 80ರಷ್ಟು ಅಮಾಯಕರು, ಮಹಿಳೆಯರು ಮತ್ತು ಮಕ್ಕಳೇ ಆಗಿದ್ದಾರೆ. ಇಲ್ಲಿಯತನಕ ಇಸ್ರೇಲ್ ಸೈನ್ಯಕ್ಕೆ ಬಲಿಯಾದವರಲ್ಲಿ ... ವರ್ಷ ವಯಸ್ಸಿನ ಮುದುಕಿ ಮತ್ತು ಐದು ವರ್ಷ ವಯಸ್ಸಿನ ಬಾಲಕಿಯೂ ಸೇರಿದ್ದಾರೆ.

ಇಸ್ರೇಲ್ ಮತ್ತು ಪ್ಯಾಲೆಸ್ಟೇನ್ ನಡುವಿನ ಯುದ್ಧ ... ಶತಮಾನದಿಂದ ಮುಂದುವರೆದಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. 'ಇತ್ತೀಚಿನ ಆಸ್ಫೋಟ ಯುದ್ಧದ ಒಂದು ಅಧ್ಯಾಯ' ಎಂದು ಇಸ್ರೇಲ್ ಪರ ಇರುವವರು ವಾದಿಸುತ್ತಿದ್ದಾರೆ. ಆದರೆ ಅಮಾಯಕರ ಮೇಲೆ, ಮನೆಗಳ ಮೇಲೆ, ಶಾಲೆ ಮತ್ತು ಆಸ್ಪತ್ರೆಗಳ ಮೇಲೆ ಬಾಂಬ್ ದಾಳಿ ಮಾಡುವುದು ಯಾವ ರೀತಿಯಲ್ಲಿ ಯುದ್ಧವಾಗುತ್ತದೆ ಎಂದು ಖ್ಯಾತ ಚಿಂತಕ ನೋಮ್ ಚಾಮ್‌ಸ್ಕಿ ತರಹದ ಮಾನವ ಹಕ್ಕುಗಳ ಹೋರಾಟಗಾರರು ಪ್ರಶ್ನಿಸುತ್ತಿದ್ದಾರೆ.

ಇಸ್ರೇಲ್ 1948ರಲ್ಲಿ ಒಂದು ರಾಷ್ಟ್ರವಾಗಿ ಸ್ಥಾಪನೆ ಆದಾಗಿನಿಂದಲೂ ಪ್ಯಾಲೆಸ್ಟೇನಿಯರ ವಿರುದ್ಧ ಅಮಾನುಷವಾದ ಆಕ್ರಮಣಕಾರಿ ಪ್ರವೃತ್ತಿಯನ್ನು ತೋರುತ್ತಾ ಬಂದಿದೆ. ಹಂತಹಂತವಾಗಿ ಪ್ಯಾಲೆಸ್ಟೇನ್ ದೇಶದ ಭೂಮಿಯನ್ನೆಲ್ಲ ಕಬಳಿಸಿರುವ ಇಸ್ರೇಲ್ (ಈ ಪುಟದಲ್ಲಿರುವ ಪ್ಯಾಲೆಸ್ಟೇನಿನ ಭೂಪಟವನ್ನು ನೋಡಿ) ಈಗ ಸ್ಥಳೀಯರು ತಮ್ಮ ಭೂಮಿಯಲ್ಲೇ ನಿರಾಶ್ರಿತರಾಗಿ ಬದುಕುವಂತೆ ಮಾಡಿದೆ. ವಿಶ್ವಸಂಸ್ಥೆಯೇ ಎಲ್ಲಾ ಆರು ಮಿಲಿನಲ್ ಪ್ಯಾಲೆಸ್ಟೇನಿಯರು 'ನಿರಾಶ್ರಿತರು' ಎಂದು ಘೋಷಿಸಿದೆ. ತಮ್ಮ ನೆಲ-ನೆಲೆ ಕಳೆದುಕೊಂಡ ಪ್ಯಾಲೆಸ್ಟೇನಿಯರು ಈಗ ತಮ್ಮ ದೇಶವಾಗಿ ಉಳಿದಿರುವ ಚೂರುಪಾರು ಪ್ರದೇಶಗಳಲ್ಲಿ ಕಿಕ್ಕಿರಿದು ಜೀವಿಸುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ ಇವತ್ತು ಜಗತ್ತಿನಲ್ಲಿ ಅತಿಹೆಚ್ಚು ಜನಸಾಂದ್ರತೆಯನ್ನು ಹೊಂದಿರುವ ಪ್ರದೇಶಗಳಲ್ಲಿ ಗಾಜಾ ಸ್ಟ್ರಿಪ್ ಒಂದು. ಕೇವಲ ... ಕಿಲೋಮೀಟರ್ ಉದ್ದ ಮತ್ತು 6-12 ಕಿಲೋಮೀಟರ್ ಅಗಲ ಇರುವ ಗಾಜಾ ಪ್ರದೇಶದಲ್ಲಿ ಸುಮಾರು ಎರಡು ಮಿಲಿಯನ್ ಜನ ವಾಸಿಸುತ್ತಿದ್ದಾರೆ.

ಒಂದು ಕಡೆ ಈಜಿಪ್ಟ್ ಗಡಿ, ಮತ್ತೊಂದು ಕಡೆ ವೈರಿ ಇಸ್ರೇಲ್ ದೇಶ, ಮಗದೊಂದು ಕಡೆ ಸಮುದ್ರದಿಂದ ಆವರಿಸಲ್ಪಟ್ಟಿರುವ ಗಾಜಾ ಪ್ರದೇಶವನ್ನು ಹಲವರು 'ತೆರೆದಿರುವ ಜೈಲು' ಎಂದೇ ಬಣ್ಣಿಸುತ್ತಾರೆ. ಇಂತಹ ಗಾಜಾ ಪ್ರದೇಶದ ಮೇಲೆಯೇ ಈಗ ಇಸ್ರೇಲ್ ಬಾಂಬ್ ದಾಳಿಗಳನ್ನು ನಡೆಸಿ ಅಮಾಯಕರನ್ನು ಕೊಂದು ಹಾಕುತ್ತಿದೆ.

ಎರಡು ದಿನಗಳ ಹಿಂದೆ ಒಂದು ದುರ್ಘಟನೆ ನಡೆಯಿತು. ಇಸ್ರೇಲ್ ದಾಳಿ ಪ್ರಾರಂಭವಾದಾಗಿನಿಂದ ಭೀತಿಯಿಂದ ಮನೆಯಲ್ಲೇ ಕೂಡಲ್ಪಟ್ಟಿದ್ದ ಒಂದೇ ಕುಟುಂಬದ ಏಳು ಬಾಲಕರು ಆಟವಾಡಲೆಂದು ಸಮುದ್ರದ ದಡಕ್ಕೆ ಹೋದರು. ಬಾಲಕರು ಇಸ್ರೇಲ್ ಸೈನಿಕರ ಕಣ್ಣಿಗೆ ಬಿದ್ದಿದ್ದೇ ತಡ, ಅವರ ಮೇಲೆಯೇ ಬಾಂಬ್ ಹಾರಿಸಿದರು. ಗಾಳಿಯನ್ನು ಸೀಳಿಕೊಂಡು ಬರುತ್ತಿದ್ದ ಬಾಂಬ್ ಬಗ್ಗೆ ಗೊತ್ತಾಗಿದ್ದೇ ತಡ ಆ ಚಿಕ್ಕ ಹುಡುಗರು ಓಡಲಾರಂಭಿಸಿದರು. 'ವೈರಿ ಸೈನ್ಯ'ದ ಈ ಬಾಲಕರನ್ನು ಬಿಟ್ಟುಬಿಡಲು ಇಸ್ರೇಲ್ ಸೈನಿಕರಿಗೆ ಮನಸ್ಸಾಗಲಿಲ್ಲ. ಅವರು ಮತ್ತೆ ಗುರಿ ಇಟ್ಟು ಇನ್ನೊಂದು ಬಾಂಬ್‌ಅನ್ನು ಹಾರಿಸಿದರು. ಬೀಚ್ ಹತ್ತಿರದಲ್ಲೇ ಇರುವ, ಹೆಚ್ಚಿನ ಪತ್ರಕರ್ತರು ಬೀಡು ಬಿಟ್ಟಿರುವ ಅಲ್-ದಯಿರಾ ಹೋಟೆಲ್ ಕಡೆ ಮಕ್ಕಳು ಧಾವಿಸುತ್ತಿರುವುದನ್ನು ಕೆಲವು ಮಾಧ್ಯಮದವರು ಗಮನಿಸಿದರು. ಅವರಲ್ಲಿ ಒಬ್ಬರು ಆ ಪ್ರಕರಣವನ್ನು ಹೀಗೆ ವಿವರಿಸಿದ್ದಾರೆ: "ಅವರೆಲ್ಲ ನಮ್ಮಿಂದ ಕೇವಲ 200 ಮೀಟರ್ ದೂರವಿದ್ದರು. ಆಗ ಎರಡನೆ ಬಾಂಬ್ ಅಪ್ಪಳಿಸಿತು. ನಮ್ಮಲ್ಲಿ ಕೆಲವರು 'ಅಯ್ಯೋ ಅವರೆಲ್ಲ ಮಕ್ಕಳು' ಎಂದು ಚೀರಿದರು. ಬಾಂಬ್‌ನಿಂದಾಗಿ ಎದ್ದಿದ್ದ ಧೂಳು ಮರೆಯಾದಾಗ ನೋಡಿದೆವು: ಕೇವಲ ನಲವತ್ತು ಸೆಕೆಂಡುಗಳಲ್ಲಿ ನಾಲ್ಕು ಬಾಲಕರು ಹೆಣವಾಗಿದ್ದರು. ಅವರೆಲ್ಲರ ವಯಸ್ಸು ಏಳರಿಂದ ಹನ್ನೊಂದು ಮಾತ್ರ."

ಇಸ್ರೇಲ್ ದೇಶ ಪ್ಯಾಲೆಸ್ಟೇನಿಯರ ಮೇಲೆ ಇಂತಹ ಗೂಂಡಾಗಿರಿ ನಡೆಸುತ್ತಿದ್ದರೂ ಇಲ್ಲಿಯತನಕ ಯಾವ ದೇಶದ ಸರ್ಕಾರವೂ ಪ್ಯಾಲೆಸ್ಟೇನಿಯರ ನೆರವಿಗೆ ಧಾವಿಸಿಲ್ಲ. ಇಸ್ರೇಲ್ ಸರ್ಕಾರವನ್ನು ಖಂಡಿಸಿಲ್ಲ. ಅದರಲ್ಲೂ ಎಲ್ಲ ವಿಷಯದಲ್ಲೂ ಇಸ್ರೇಲ್ ಪರ ನಿಲ್ಲುವ ಜಗತ್ತಿನ 'ದೊಡ್ಡಣ್ಣ' ಅಮೆರಿಕ ಇಸ್ರೇಲ್ ಸರ್ಕಾರ 'ಜವಾಬ್ದಾರಿಯುತವಾಗಿ ವರ್ತಿಸುತ್ತಿದೆ' ಎಂದು ಪ್ರಶಂಸಿಸಿದೆ! ಇನ್ನು ಮುಸಲ್ಮಾನರ ಬಗ್ಗೆ ಇಸ್ರೇಲ್ ದೇಶದ ಯಹೂದಿಯರು ಹೊಂದಿರುವ ಅಭಿಪ್ರಾಯವನ್ನೇ ಹೊಂದಿರುವ ಬಿಜೆಪಿ ನೇತೃತ್ವದ ಭಾರತದ ಸರ್ಕಾರ ಅಮಾಯಕ ಮುಸಲ್ಮಾನರ ಪರ ಬಾಯಿ ತೆರೆಯುವ ಸಾಧ್ಯತೆಯೇ ಇಲ್ಲ. (ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರದಲ್ಲಿದ್ದರೂ ಇದಕ್ಕಿಂತ ಹೆಚ್ಚನ್ನು ನಿರೀಕ್ಷಿಸಲಾಗುತ್ತಿರಲಿಲ್ಲ ಎಂಬುದು ಬೇರೆ ಮಾತು.) ಮೊನ್ನೆ ಗಾಜಾ ಮೇಲೆ ನಡೆಯುತ್ತಿರುವ ದಾಳಿಯನ್ನು ಕುರಿತು ಸಂಸತ್ತಿನಲ್ಲಿ ಚರ್ಚಿಸಬೇಕು ಎಂದು ಕೆಲವರು ಪ್ರಸ್ತಾಪಿಸಿದಾಗ ಅದನ್ನು ತಡೆಹಿಡಿಯಲಾಯಿತು. ಇದಕ್ಕೆ ಮುಖ್ಯ ಕಾರಣ ಇವತ್ತು ಇಸ್ರೇಲ್ ದೇಶದಿಂದ ಯುದ್ಧಾಸ್ತ್ರಗಳನ್ನು ಖರೀದಿಸುವ 'ಗ್ರಾಹಕ' ದೇಶವಾಗಿದೆ ನಮ್ಮ ಭಾರತ.

ಈ ಹಿಂದೆ ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿ ಜಾರಿಯಲ್ಲಿದ್ದಾಗ ಇತರೆ ಕೆಲವು ದೇಶಗಳಂತೆ ಭಾರತವೂ ಅದನ್ನು ಖಂಡಿಸಿತ್ತಲ್ಲದೆ ಆ ದೇಶದೊಂದಿಗೆ ಯಾವುದೇ ವ್ಯವಹಾರವನ್ನು ಇಟ್ಟುಕೊಳ್ಳದೆ ತನ್ನ ದೃಢ ನೈತಿಕ ನಿಲುವನ್ನು ವ್ಯಕ್ತಪಡಿಸಿತ್ತು. ಆದರೀಗಿನ ಜಾಗತಿಕ ಯುಗದಲ್ಲಿ ಅಂತಹ ನೈತಿಕ ಶಕ್ತಿಯನ್ನು ಭಾರತ ಕಳೆದುಕೊಂಡಿದೆ.

ಏಳು ದಶಕಗಳ ಹಿಂದೆ ಭಾರತವೂ ವಿದೇಶಿ ಆಡಳಿತ ಅಡಿ ತತ್ತರಿಸಿತ್ತು. ಆಗ ಭಾರತೀಯರು ಶಸ್ತ್ರಾಸ್ತ್ರ ಮತ್ತು ಅಹಿಂಸಾತ್ಮಕ ಹೋರಾಟಗಳನ್ನು ಮಾಡಿ ಸ್ವಾತಂತ್ರ್ಯ ಪಡೆದರು. ಈಗ ಪ್ಯಾಲೆಸ್ಟೇನಿಯರೂ ವಿದೇಶಿ ದೌರ್ಜನ್ಯದಡಿ ಸಿಲುಕಿದ್ದಾರೆ. ತಮ್ಮ ಸ್ವಾತಂತ್ರ್ಯಕ್ಕೆ ಸ್ವಾಭಿಮಾನಯುತ ಬದುಕಿಗೆ ಕಾತರಿಸುತ್ತಿದ್ದಾರೆ. ತಮ್ಮ ದೇಶದ ಸ್ವಾಯತ್ತತೆಗೆ ಮತ್ತು ಮಕ್ಕಳ ಭವಿಷ್ಯಕ್ಕೆ ಹೋರಾಡುತ್ತಿದ್ದಾರೆ. ಅಂತಹವರ ಪರ ಭಾರತೀಯರು ನಿಲ್ಲಬೇಕಲ್ಲವೇ?


ಭಾರತದ ಮತ್ತು ಇತರೆ ದೇಶಗಳ ಸರ್ಕಾರಗಳು ತೆಪ್ಪಗಿದ್ದರೂ ಅದೆಷ್ಟೋ ಸಾಮಾನ್ಯ ಜನ ಪ್ಯಾಲೆಸ್ಟೇನಿಯರ ಪರ ಪ್ರತಿಭಟನೆಗಳನ್ನು ಮಾಡಿದ್ದಾರೆ. ಇವತ್ತು ಗುರುವಾರ ಸಂಜೆ ಬೆಂಗಳೂರಿನಲ್ಲೂ ಇಸ್ರೇಲ್ ವಿರುದ್ಧ ಒಂದು ಬೃಹತ್ ಪ್ರತಿಭಟನೆ ನಡೆಯಿತು. ನೋಮ್ ಚಾಮ್‌ಸ್ಕಿ ತರಹದವರಲ್ಲದೆ ಬಹುತೇಕರೂ ಪ್ಯಾಲೆಸ್ಟೇನಿಯರ ಪರ ನಿಂತಿದ್ದಾರೆ. ಅಂತಹವರಲ್ಲಿ ಗೆರಾಲ್ಡ್ ಕೌಫ್‌ಮನ್ ಎಂಬ ಬ್ರಿಟಿಷ್ ಸಂಸದ ಪ್ರಮುಖರು. ಅಂದಹಾಗೆ ಈ ಕೌಫ್‌ಮನ್ ಓರ್ವ ಯಹೂದಿ. ಇವರ ಕುಟುಂಬವನ್ನು ನಾಝಿಗಳು ಪೋಲೆಂಡ್ ದೇಶದಿಂದ ಪರಾರಿ ಆಗುವಂತೆ ನೋಡಿಕೊಂಡಿದ್ದರು.

ಇಂತಹ ಕೌಫ್‌ಮನ್ ಬ್ರಿಟನ್ ಸಂಸತ್ತಿನಲ್ಲಿ ಹೀಗೆ ಹೇಳಿದರು: "ನನ್ನ ಅಜ್ಜಿಯ ಆರೋಗ್ಯ ಚೆನ್ನಾಗಿರಲಿಲ್ಲವಾದ್ದರಿಂದ ಅವರು ಹಾಸಿಗೆಯಲ್ಲಿ ಮಲಗಿದ್ದರು. ಆಕೆಯ ಮನೆಗೆ ನುಗ್ಗಿದ ನಾಝಿಗಳು ಗುಂಡಿಟ್ಟು ಆಕೆಯನ್ನು ಹಾಸಿಗೆಯಲ್ಲೇ ಕೊಂದು ಹಾಕಿದರು. ನನ್ನ ಅಜ್ಜಿ ತನ್ನ ಪ್ರಾಣ ಕಳೆದು ಕೊಂಡಿದ್ದು ಇವತ್ತು ಇಸ್ರೇಲಿ ಸೈನಿಕರು ಪ್ಯಾಲೆಸ್ಟೇನ್‌ನಲ್ಲಿರುವ ಅಜ್ಜಿಯರನ್ನು ಅಮಾನುಷವಾಗಿ ಕೊಂದು ಹಾಕಲು ಪರವಾನಗಿ ಕೊಡುವುದಕ್ಕಲ್ಲ. ಜರ್ಮನಿಯಲ್ಲಿ ನಡೆದ ಯಹೂದಿಯರ ಮಾರಣಹೋಮವನ್ನೇ ಇವತ್ತಿಗೂ ಇಸ್ರೇಲ್ ತನ್ನ ಅಮಾನುಷತನವನ್ನು ಸಮರ್ಥಿಸಿಕೊಳ್ಳಲು ಉಪಯೋಗಿಸಿಕೊಳ್ಳುತ್ತಿದೆ. ತಾನು ಕೊಂದಿರುವವರೆಲ್ಲ ವೈರಿ ಪಡೆಯ ಉಗ್ರರು ಎಂದು ಇಸ್ರೇಲ್ ಹೇಳುತ್ತಿರುವುದು ಸರಿಯಲ್ಲ. ಯಾಕೆಂದರೆ ಅದೇ ಮಾತನ್ನು ನಾಝಿಗಳು ಯಹೂದಿಯರ ಬಗ್ಗೆ ಹೇಳಿದ್ದರು..."

ಇಸ್ರೇಲ್‌ನಲ್ಲಿ ಈಗ ನಡೆಯುತ್ತಿರುವ ಅಮಾಯಕರ ಕೊಲೆಗಳ ಬಗ್ಗೆ ಹೆಚ್ಚು ಪದಗಳ ಅಗತ್ಯವಿಲ್ಲ. ಯಾಕೆಂದರೆ ಇಲ್ಲಿರುವ ಪ್ರತಿಯೊಂದು ಚಿತ್ರವೂ ಇದು ಯುದ್ಧವಲ್ಲ, ಬದಲಾಗಿ ಬರ್ಬರ ಕೊಲೆ ಎಂಬುದನ್ನು ಸಾರಿಸಾರಿ ಹೇಳುತ್ತವೆ...


ಇಸ್ರೇಲ್ ದೇಶದ ಈ ಕೃತ್ಯವನ್ನು ಖಂಡಿಸುವುದು ಪ್ರತಿಯೊಬ್ಬ ಮಾನವತಾವಾದಿಯ ಕರ್ತವ್ಯವಾಗಿದೆ... •





ಡಾನ್ ಆಂಡರ್ಸನ್ ಇನ್ನಿಲ್ಲ





ಖ್ಯಾತ ಬೇಟೆಗಾರ ಕೆನ್ನೆತ್ ಆಂಡರ್ಸನ್ ಅವರ ಏಕೈಕ ಪುತ್ರರಾಗಿದ್ದ ಡಾನ್ ಆಂಡರ್ಸನ್ ಐದು ದಿನಗಳ ಹಿಂದೆ ಕೊನೆಯುಸಿರೆಳೆದರು. ತಂದೆ ಜೊತೆ ಕಾಡುಮೇಡುಗಳನ್ನು ಅಲೆದಿದ್ದ, ಸಾಕಷ್ಟು ಕರಡಿ, ಹುಲಿ, ಮತ್ತು ಇತರೆ ಕಾಡುಪ್ರಾಣಿಗಳನ್ನು - ಅದು ಕಾನೂನುಬಾಹಿರ ಆಗುವ ಮುನ್ನ - ಬೇಟೆ ಆಡಿದ್ದ ಡಾನ್ ಕೂಡ ಅರಣ್ಯಪ್ರೇಮಿ ಆಗಿದ್ದರು.

ಪೂರ್ಣಚಂದ್ರ ತೇಜಸ್ವಿ ತರಹದ ಲೇಖಕರು ಕೆನ್ನೆತ್ ಆಂಡರ್ಸನ್ ಅವರ ಕೃತಿಗಳನ್ನು ಕನ್ನಡಿಗರಿಗೆ ಪರಿಚಯಿಸಿದ್ದರು. ಆದರೆ ಭಾರತಕ್ಕೆ ಸ್ವತಂತ್ರ ಬಂದನಂತರವೂ ಕೆನ್ನೆತ್ ತಮ್ಮ ಮೂಲ ದೇಶವಾದ ಸ್ಕಾಟ್‌ಲ್ಯಾಂಡಿಗೆ ಹೋಗದೆ ಇಲ್ಲಿಯೇ ಇದ್ದು ಕೊನೆಗೆ ಕ್ಯಾನ್ಸರ್‌ಗೆ ಬಲಿಯಾಗಿದ್ದರು ಎಂಬುದು ನಮಗೆ ಗೊತ್ತಿರಲಿಲ್ಲ. ಮಾತ್ರವಲ್ಲ, ಅವರ ಕುಟುಂಬಸ್ಥರು ಎಲ್ಲಿ ನೆಲೆಸಿದ್ದಾರೆ ಎಂಬುದೂ ಹೆಚ್ಚಿನವರಿಗೆ ಗೊತ್ತಿರಲಿಲ್ಲ. ಆದರೆ ಒಮ್ಮೆ ಇಂಟರ್‌ನೆಟ್‌ನಲ್ಲಿ ಹುಡುಕುತ್ತಿದ್ದಾಗ ಕೆನ್ನೆತ್ ಅವರ ಸಮಾಧಿ ಬೆಂಗಳೂರಿನ ಹೊಸೂರು ರಸ್ತೆಯ ಸ್ಮಶಾನದಲ್ಲಿರುವುದು ಗೊತ್ತಾಯಿತು. ಹಾಗೆಯೇ ಹುಡುಕುತ್ತಾ ಹೋದಂತೆ ಅವರ ಪುತ್ರ ಡಾನ್ ಅವರು ಬೆಂಗಳೂರಿನಲ್ಲೇ ವಾಸಿಸುತ್ತಿದ್ದಾರೆ ಎಂದೂ ನಮ್ಮ ತಂಡಕ್ಕೆ ಸುಳಿವು ಸಿಕ್ಕಿತು.

ಬಹಳ ಅಂತರ್ಮುಖಿಯಾಗಿದ್ದ ಡಾನ್ ಕೆಲವೇ ಮಿತ್ರರೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದು ಹೊಸಬರನ್ನು ಭೇಟಿ ಆಗಲು ಇಷ್ಟ ಪಡುತ್ತಿರಲಿಲ್ಲ. ಆದರೂ ಅದು ಹೇಗೋ ಅವರ ಸಂಪರ್ಕ ಗಳಿಸಿ ಅವರನ್ನು ಭೇಟಿ ಆಗಿದ್ದೆವು. ಹೊಸಬರನ್ನು ಭೇಟಿ ಆಗಲು ಡಾನ್ ಹಿಂಜರಿಯುತ್ತಿದ್ದಕ್ಕೆ ಕಾರಣ ಅವರ ಬದುಕಿನ ಪರಿಸ್ಥಿತಿ. ತಂದೆ ಮತ್ತು ತಾಯಿಯನ್ನು ಕಳೆದುಕೊಂಡ ನಂತರ ಅವಿವಾಹಿತ ಡಾನ್ ಏಕಾಂಗಿ ಆಗಿದ್ದರು. ಅವರ ಸಹೋದರಿ ದೂರದ ಆಸ್ಟ್ರೇಲಿಯಾದಲ್ಲಿ ವಾಸಿಸುತ್ತಿದ್ದರು. ಬಿನ್ನಿಮಿಲ್‌ನಲ್ಲಿ ಮ್ಯಾನೇಜರ್ ಆಗಿ ದಶಕಗಳ ಕಾಲ ದುಡಿದಿದ್ದ ಡಾನ್ ಅವರಿಗೆ ವ್ಯವಹಾರಜ್ಞಾನ ಇರಲಿಲ್ಲ. ಅಷ್ಟೇ ಅಲ್ಲ, ತನ್ನ ತಂದೆ ಕೆನ್ನೆತ್ ಎಲ್ಲೆಲ್ಲಿ ಆಸ್ತಿ ಮಾಡಿಟ್ಟಿದ್ದಾರೆ ಎಂಬುದರ ಬಗ್ಗೆ ಅರಿವೂ ಇರಲಿಲ್ಲ. ಇದ್ದ ಒಂದಿಷ್ಟು ಆಸ್ತಿಯನ್ನೆಲ್ಲ ಕಳೆದುಕೊಂಡಿದ್ದ ಡಾನ್ ಕೊನೆಗೆ ತಲೆ ಮೇಲೊಂದು ಸ್ವಂತದ ಸೂರೂ ಇಲ್ಲದೆ ಒಂದು ಪುಟ್ಟ ಕೊಠಡಿಯಲ್ಲಿ ವಾಸಿಸುತ್ತಿದ್ದರು. ತಂದೆ ಮತ್ತು ತನ್ನ ಅಭಿಮಾನಿಗಳ ನೆರವನ್ನೇ ಆಶ್ರಯಿಸಿದ್ದರು.

ಕಷ್ಟ ಕಾಲದಲ್ಲಿ ತನ್ನೊಂದಿಗೆ ನಿಂತಿದ್ದ ಯುವಕನೊಬ್ಬನಿಗೆ ತಮ್ಮ ತಂದೆಯ ಪುಸ್ತಕದ ಮೇಲಿನ ಹಕ್ಕುಗಳನ್ನೆಲ್ಲ ನೀಡಿದ್ದರು. ಮಾತ್ರವಲ್ಲ ತನ್ನ ಬದುಕಿನ ವಿವರಗಳನ್ನು ಆತನೊಂದಿಗೆ ಹಂಚಿಕೊಂಡು ಆತನೇ ತನ್ನ ಸಾಹಸಗಳ ಬಗ್ಗೆ ಪುಸ್ತಕವನ್ನು ಬರೆಯಬೇಕೆಂದು ಆಶಿಸಿದ್ದರು.

80 ವರ್ಷ ದಾಟಿದ್ದ ಡಾನ್ ಅವರಿಗೆ ವೃದ್ಧಾಪ್ಯ ಮತ್ತು ಅನಾರೋಗ್ಯ ಕಾಡುತ್ತಿದ್ದವು. ಆದರೂ ಅವರು ಕಾಡು ಸುತ್ತಾಡುವುದನ್ನು ನಿಲ್ಲಿಸಿರಲಿಲ್ಲ. ಒಮ್ಮೆ ಡಾನ್ ಅವರೊಂದಿಗೆ ಕಾಡೊಂದಕ್ಕೆ ಹೋಗುವ ಅವಕಾಶ ಸಿಕ್ಕಿತ್ತು. ಆದರೆ ಬೇರೆ ಒತ್ತಡಗಳಿದ್ದರಿಂದ ನಾನು ಅವರೊಂದಿಗೆ ಹೋಗಲಾಗಿರಲಿಲ್ಲ. ನನ್ನ ಬದಲಿಗೆ ಹೋದ ಗೆಳತಿ ರೀಟಾ ರೀನಿ ಆ ಪ್ರಯಾಣದ ಬಗ್ಗೆ ಬರೆದದ್ದನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದೆವು.


"ಸ್ವಾತಂತ್ರ್ಯ ನಂತರ ನಿಮ್ಮ ಕುಟುಂಬ ಯಾಕೆ ಸ್ಕಾಟ್‌ಲ್ಯಾಂಡಿಗೆ ಹೋಗಲಿಲ್ಲ?" ಎಂದು ಕೇಳಿದ್ದಕ್ಕೆ ಡಾನ್ "ಯಾಕೆ ಹೋಗಬೇಕು? ನಾನು ಭಾರತೀಯ" ಎಂದು ಉತ್ತರಿಸಿದ್ದರು. ತಮ್ಮ ದೇಹದ ಮೇಲಿದ್ದ ಹತ್ತಾರು ಗಾಯಗಳ ಕಲೆಗಳನ್ನು ತೋರಿಸಿ "ಇದ್ಯಾವುದನ್ನೂ ಪ್ರಾಣಿಗಳು ಮಾಡಲಿಲ್ಲ, ಬದಲಾಗಿ ವೈದ್ಯರು ಮಾಡಿದ್ದು" ಎಂದು ತಮಾಷೆ ಮಾಡುತ್ತಿದ್ದರು.

ಇಳಿವಯಸ್ಸಿನಲ್ಲೂ ಜೀವನೋತ್ಸಾಹ ಹೊಂದಿದ್ದ, ಅರಣ್ಯಗಳ ಬಗ್ಗೆ ಅಪಾರ ಜ್ಞಾನ ಮತ್ತು ಕಾಳಜಿಯನ್ನು ಹೊಂದಿದ್ದ ಹತ್ತಾರು ಸಾಹಸಗಳ ಗಣಿಯಾಗಿದ್ದ ಡಾನ್ ಈಗ ಮೌನವಾಗಿದ್ದಾರೆ.

ಅವರಿಗೆ ಪ್ರೀತಿಯ ನಮನಗಳು...

• ಗೌರಿ

ವೇದ ಪ್ರತಾಪ್ ವೈದಿಕ್: ಪಾಕ್ ಉಗ್ರನಲ್ಲಿಗೆ ಮೋದಿಯ ಟ್ರ್ಯಾಕ್ 2 ದೂತ! ಅಥವಾ ಟ್ರ್ಯಾಕ್ 1?



ಭಾರತದ ಒಬ್ಬ ಹಿರಿಯ ಪತ್ರಕರ್ತ ಪಾಕಿಸ್ತಾನಕ್ಕೆ 'ಶಾಂತಿ'ಯ ಉದ್ದೇಶದ ಒಂದು ಪ್ರವಾಸಕ್ಕೆ ಹೋಗಿ, ಅದರ ಜೊತೆಗೆ ಆ ದೇಶದಲ್ಲಿ ನೆಲೆಸಿರುವ ಸೈಯ್ಯದ್ ಹಫೀಜ್ ಎಂಬ ಉಗ್ರರ ನಾಯಕನನ್ನು ಸಂದರ್ಶನ ಮಾಡಿ ಬಂದರೆ ಅಂತಹದ್ದೇನು ತಪ್ಪು? ಅದಕ್ಕೆ ಕಾಂಗ್ರೆಸ್ಸಿನವರಾಗಲೀ, ಮಿಕ್ಕವರಾಗಲೀ ಯಾಕೆ ಅಷ್ಟೊಂದು ಕೂಗಾಡಬೇಕು?

ಈ ದೇಶದ ಆರೆಸ್ಸೆಸ್ಸಿಗರು, ಬಿಜೆಪಿ ಮತ್ತು ಅವರ ಬಾಲಬಡುಕ ಮಾಧ್ಯಮಗಳು ಎಂತಹ ಆಷಾಢಭೂತಿಗಳು ಎಂಬುದಕ್ಕೆ ಇದಕ್ಕಿಂತ ದೊಡ್ಡ ನಿದರ್ಶನ ಬೇಕಿಲ್ಲ, ಏಕೆಂದರೆ ಈ ಪತ್ರಕರ್ತರ ಹೆಸರು ವೇದ ಪ್ರತಾಪ್ ವೈದಿಕ್. ಆತ ಆರೆಸ್ಸೆಸ್‌ನ ಸಮೀಪವರ್ತಿ.

ಈ ಆಷಾಢಭೂತಿತನದ ಕೆಲವು ಸ್ಯಾಂಪಲ್‌ಗಳನ್ನು ನೋಡೋಣ.

ದೂರದಿಂದ ಏಕೆ? ಮೊದಲು ನಮ್ಮ ಕನ್ನಡಪ್ರಭದಿಂದ ಶುರು ಮಾಡೋಣ. ಪಾಕಿಸ್ತಾನಕ್ಕೆ ಸಂಬಂಧಿಸಿದ ಎಲ್ಲವನ್ನೂ ಪದಗಳಿಂದ ಏನಾದರೂ ಸುಟ್ಟುಬಿಡಲು ಸಾಧ್ಯವಿದ್ದರೆ, ಅಂತಹ ಎಲ್ಲಾ ಪದಗಳೂ ಕನ್ನಡಪ್ರಭದಲ್ಲಿ ಬಳಕೆಯಾಗಿರುವುದು ಎಲ್ಲರಿಗೂ ಗೊತ್ತು. ಪದೇ ಪದೇ ಮುಂಬೈ ಸ್ಫೋಟ, ಕಾಶ್ಮೀರ, ಮುಸಲ್ಮಾನರ ಕುರಿತಾಗಿ ಶಬ್ದಕೋಶದಲ್ಲಿರುವ ಕಠಿಣ ಶಬ್ದಗಳನ್ನೆಲ್ಲಾ ಬಳಸಿ ವಾಚಾಮಗೋಚರ ತೆಗಳಲಾಗುತ್ತದೆ. ಪತ್ರಿಕೋದ್ಯಮದ ಕನಿಷ್ಠ ಘನತೆಯನ್ನೂ ಮೀರಿ ವರ್ತಿಸುವ ಸದರಿ ಪತ್ರಿಕೆಯು ಇಂದು ಒಂದು ಸಂಪಾದಕೀಯ ಬರೆದಿದೆ. ಇಡೀ ಸಂಪಾದಕೀಯದಲ್ಲಿ ಎಲ್ಲೂ ವೈದಿಕ್‌ನ ಈ ಭೇಟಿಯ ಕುರಿತು ತೆಗಳಿಕೆ ಕಾಣುವುದಿಲ್ಲ. ಬದಲಿಗೆ ವೇದ ಪ್ರತಾಪ್ ವೈದಿಕ್‌ರ ಭೇಟಿಯ ಕುರಿತಂತೆ 'ಸದ್ಯದಲ್ಲಿ ಜನರ ಮನಸ್ಸಿನಲ್ಲಿ ಎದ್ದಿರುವ ಹಲವು ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರ ಸಿಕ್ಕಿಲ್ಲ, ಮುಂದೆ ಎಂದಾದರೊಂದು ದಿನ ಸಿಕ್ಕರೂ ಸಿಗಬಹುದು'.

ಇದೇ ದಿನದ, ಇದೇ ಪತ್ರಿಕೆಯ 10ನೇ ಪುಟದಲ್ಲಿ ಇನ್ನೊಂದು ಸುದ್ದಿ ಇದೆ. 'ವೈದಿಕ್ ಬೆಂಬಲಕ್ಕೆ ನಿಂತ ಆರ್‌ಎಸ್‌ಎಸ್' ಎಂಬ ಶೀರ್ಷಿಕೆಯ ಸುದ್ದಿಯಲ್ಲಿ ಆರೆಸ್ಸೆಸ್‌ನ ಮುಖಂಡ ಇಂದ್ರೇಶ್ ಕುಮಾರ್ 'ವೈದಿಕ್ ಒಬ್ಬ ದೇಶಭಕ್ತ, ರಾಷ್ಟ್ರೀಯ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡೇ ಅವರು ಉಗ್ರ ಹಫೀಜ್‌ನನ್ನು ಭೇಟಿಯಾಗಿದ್ದಾರೆ' ಎಂದು ಹೇಳಿರುವ ಸತ್ಯ ಇದೆ. ಅಲ್ಲಿಗೆ ಸುದ್ದಿ ಮುಕ್ತಾಯವಾದರೂ, ಹಿನ್ನೆಲೆಯ ಕುರಿತ ತನ್ನ ವಿವರಣೆಯನ್ನು ಪತ್ರಿಕೆ ಮುಂದುವರೆಸುತ್ತದೆ, '... ಕಾಂಗ್ರೆಸ್ ಮುಖಂಡರಾದ ಸಲ್ಮಾನ್ ಖುರ್ಷಿದ್, ಮಣಿಶಂಕರ್ ಅಯ್ಯರ್ ನಿಯೋಗದಲ್ಲಿ ವೈದಿಕ್ ಇದ್ದರು. ಈ ಬಗ್ಗೆಯೂ ತನಿಖೆಯಾಗಲಿ ಎಂದು ಬಿಜೆಪಿ ಒತ್ತಾಯಿಸಿದೆ'. ಈಗ ಪುಟ 6ರ ಸಂಪಾದಕೀಯಕ್ಕೆ ಹಿಂತಿರುಗೋಣ. ಅಲ್ಲಿ 'ಪಾಕಿಸ್ತಾನದ ಮೇಳದ ಆಹ್ವಾನಿತರ ಆಯ್ಕೆಯಲ್ಲಿ ಅಯ್ಯರ್ ಅವರ ಪಾತ್ರವಿರಲಿಲ್ಲ, ಅಯ್ಯರ್ ವೈಯುಕ್ತಿಕವಾಗಿ ತಮ್ಮ ಅನಿಸಿಕೆಗಳನ್ನು ಸರಕಾರಕ್ಕೆ ಕಳುಹಿಸಿದ್ದಾರೆ. ಆ ಮೇಳದಲ್ಲಿ ವೇದ ಪ್ರತಾಪ್ ವೈದಿಕ್ ಅವರ ಪಾತ್ರದ ವಿವರಗಳು ಗೊತ್ತಿಲ್ಲ. ಸಮ್ಮೇಳನ ಮುಗಿದ ನಂತರ ಭಾರತೀಯ ನಿಯೋಗದ ಬಹುತೇಕ ಸದಸ್ಯರು ಹಿಂದಕ್ಕೆ ಬಂದರೂ ವೈದಿಕ್ ಮಾತ್ರ ಅಲ್ಲೇ ಮೂರು ವಾರಗಳ ಕಾಲ ಉಳಿದಿದ್ದ ಸುದ್ದಿ ಪ್ರಕಟವಾಗಿರುವುದು ಈಗ. ಪತ್ರಕರ್ತರಾಗಿ ಅವರು ಅಲ್ಲಿ ಏನು ಮಾಡುತ್ತಿದ್ದರೋ ಗೊತ್ತಿಲ್ಲ' ಎಂದಿದೆ.

ಸಾಮಾನ್ಯವಾಗಿ, ಇಂತಹ ಸಂಗತಿಗಳಲ್ಲಿ ಈ ಪತ್ರಿಕೆಯ ಸಂಪಾದಕೀಯ, ವರದಿ, ಅಭಿಪ್ರಾಯ, ಓದುಗರ ಪತ್ರ ಎಲ್ಲೂ ಕಾಣದ ಬ್ಯಾಲೆನ್ಸ್ ಇಲ್ಲಿ ಮಾತ್ರ ಕಾಣುತ್ತಿದೆ. ಆದರೆ 6ನೇ ಪುಟದ ಬ್ಯಾಲೆನ್ಸ್ 10ನೇ ಪುಟದಲ್ಲಿ ಮಾಯವಾಗಿ ಮತ್ತೆ ಕಾಂಗ್ರೆಸ್ ನಾಯಕರದ್ದೇ ಏನೋ ಪಾತ್ರವಿರಬಹುದೆಂದು ಸಂಶಯ ಬಿತ್ತುವ ಪ್ರಯತ್ನ ಎದ್ದು ಕಾಣುತ್ತದೆ. ಕನ್ನಡಪ್ರಭದ ಈ ಎಡಬಿಡಂಗಿತನ ಈಗ ಇಡೀ ಬಿಜೆಪಿ ಹಾಗೂ ಅದರ ಪರಿವಾರದ ನಡೆಗಳಲ್ಲಿ ಎಲ್ಲೆಲ್ಲೂ ಕಾಣುತ್ತಿದೆ. ಏಕೆಂದರೆ ಈ ಸಂಗತಿಯ ಗಾಂಭೀರ್ಯ ಅಂಥಾದ್ದಾಗಿದೆ.

ಇದೇ ವೈದಿಕ್ 2012ರ ನವೆಂಬರ್ 21ರಂದು ಸಾರ್ವಜನಿಕವಾಗಿಯೇ ಒಂದು ಸಂಗತಿ ಹೇಳಿದ್ದರು: 'ಮುಂಬೈ ಸ್ಫೋಟದ ಆರೋಪಿ ಅಜ್ಮಲ್ ಕಸಬ್‌ನನ್ನು ಒಂದು ಸಾರ್ವಜನಿಕ ವೃತ್ತದಲ್ಲಿ ಹಿಂಸಿಸಿ ಅಲ್ಲೇ ನೇಣಿಗೇರಿಸಬೇಕು'. ಎಲ್ಲರಿಗೂ ಗೊತ್ತಿರುವ ಸಂಗತಿ ಏನೆಂದರೆ, ಬಡತನದಲ್ಲಿ ಬೆಳೆದಿದ್ದ ಕಸಬ್‌ನನ್ನು ಮುಸ್ಲಿಂ ಮೂಲಭೂತವಾದಿಗಳು ಪ್ರಚೋದಿಸಿ ಅಥವಾ ಆಮಿಷವೊಡ್ಡಿ ಭಾರತದ ಮೇಲೆ ದಾಳಿ ನಡೆಸಲು ಕಳಿಸಿದ್ದರು. ಆ ದಾಳಿಯ 'ಮಾಸ್ಟರ್ ಮೈಂಡ್' ಹಫೀಜ್ ಸೈಯ್ಯದ್ ಎಂಬುದು ಭಾರತದ ಸರ್ಕಾರದ ಅಧಿಕೃತ ಆರೋಪ. ಜೂನ್ 2009ರಲ್ಲೇ ಆತನ ವಿರುದ್ಧ ಕಸಬ್‌ನನ್ನು ವಿಚಾರಣೆಗೊಳಿಸದ ನ್ಯಾಯಾಲಯವೇ ವಾರಂಟ್ ಹೊರಡಿಸಿತ್ತು. ಆತನನ್ನು ಹೆಡೆಮುರಿ ಕಟ್ಟಿ ಎಳೆದು ತಂದು ಕೊಲ್ಲಬೇಕೆಂಬುದು ಸಂಘಪರಿವಾರದ ಇದುವರೆಗಿನ ವಾದ. ಈಗ ಅದೇ ಸಂಘಪರಿವಾರದ ದೂತ ಹಫೀಜ್ ಸೈಯ್ಯದ್‌ನನ್ನು ಭೇಟಿಯಾಗಿ ಬಂದಿರುವುದು 'ರಾಷ್ಟ್ರೀಯ ಹಿತಾಸಕ್ತಿ', 'ಅದರ ಕಾರಣ ಮುಂದೆಂದಾದರೂ ಸಿಗಬಹುದು'.

2008ರ ನವೆಂಬರ್ 26ರಂದು ಮುಂಬೈನಲ್ಲಿ ನಡೆ
ದಾಳಿಯಲ್ಲಿ ಅಧಿಕೃತವಾಗಿ 166 ಜನರು ಸತ್ತಿದ್ದರು. ಅವರ
ಹಿರಿಯ ಪೊಲೀಸ್ ಅಧಿಕಾರಿಗಳಿಂದ ಹಿಡಿದು, ಅಮಾಯ
ಜನರವರೆಗೆ ಹಲವು ರೀತಿಯ ಜನರಿದ್ದರು. ಇದ
ಕಾರಣವಾದ ಪಾಕಿಸ್ತಾನದ ಮೇಲೆ ಯಾಕೆ ಇನ್ನೂ ಯು
ಮಾಡಿಲ್ಲ ಎಂಬ ರೀತಿಯಲ್ಲಿ ದೇಶಾದ್ಯಂತ ಅರಚಾಡಿದವ
ಈಗ್ಯಾಕೆ ಹೀಗೆ? ವೈದಿಕ್‌ರ ಆಪ್ತ ಗುರು ಬಾಬಾ ರಾಮ
ದೇವ್‌ರ ಪ್ರಕಾರ, ಅವರು ಹಫೀಜ್‌ನ ಮನಪರಿವರ್ತ
ಮಾಡಲೆಂದು ಹೋಗಿದ್ದರು. ಆ ಸಂದರ್ಶನದ ನಂ
ವೈದಿಕ್ ಹೇಳುತ್ತಿರುವ ಇನ್ನೊಂದು ಸಂಗತಿಯನ
ನೋಡಿದರೆ ಯಾರ ಮನಪರಿವರ್ತನೆಯಾಗಿದೆಯೆಂ
ತಿಳಿಯುತ್ತದೆ. ವೈದಿಕ್ ಕೇಳುತ್ತಿದ್ದಾರೆ 'ಭಾರತಕ್ಕೂ ಸೇರ
ಪಾಕಿಸ್ತಾನಕ್ಕೂ ಸೇರದ ಸ್ವತಂತ್ರ ಕಾಶ್ಮೀರದ ವಿಚಾರ ಯ
ಈಗ ಮರೆಯಾಗಿ ಹೋಗಿದೆ? ಕಾಶ್ಮೀರ ಸ್ವತಂತ್ರವಾಗಬೇಕ
ಇಷ್ಟು ಕೆಲಸ ಮಾಡಿದ ವ್ಯಕ್ತಿಗಳ ಮೇಲೆ ದೇಶದ್ರೋಹ
ಕೇಸನ್ನು ಯಾಕೆ ಮಾಡಿಲ್ಲ, ಆತನನ್ನೂ ಇನ್ನೂ ಏಕೆ ಬಂಧಿಸ
ಅಥವಾ ಕೊಂದಿಲ್ಲ ಎಂದು ಕನ್ನಡಪ್ರಭದಂತಹ ಯಾ
ಪತ್ರಿಕೆಯೂ ಯಾಕೆ ಕಿರುಚಿಕೊಳ್ಳುತ್ತಿಲ್ಲ?

ಇದನ್ನು ಇನ್ನೊಂದು ನೆಲೆಯಲ್ಲಿ ಸಮರ್ಥಿಸಿಕೊಳ್ಳ
ಯತ್ನವೂ ನಡೆಯುತ್ತಿದೆ. 'ಒಬ್ಬ ಪತ್ರಕರ್ತನಿಗೆ ಆರೋ
ಉಗ್ರನನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಸಂದರ್ಶನ ಮಾಡ
ಹಕ್ಕಿರುವುದಿಲ್ಲವೇ?'. ಯಾವ ರೀತಿಯಲ್ಲೂ ದೇಶದ್ರೋ
ಗಳಲ್ಲದ, ಇದೇ ದೇಶದ ಪ್ರಜೆಗಳಾದ ನಕ್ಸಲೀಯರ
ಭೇಟಿ ಮಾಡಿ ಬಂದು ಲೇಖನ ಬರೆದ ಅರುಂ
ರಾಯ್‌ರ ಬಗ್ಗೆ ಸಂಘಪರಿವಾರ ಹಾಗೂ ಪರಿವಾ
ಮುಖವಾಣಿ ಮಾಧ್ಯಮಗಳು ಇದೇ ನಿಲುವನ್ನು ಹೊ
ದ್ದವೇ? ಇರಲಿ, ವೈದಿಕ್ ಆ ಸಂದರ್ಶನವನ್ನು ಬರೆದಿ
ಕೊಂಡಿಲ್ಲ ಮತ್ತು ರೆಕಾರ್ಡ್ ಮಾಡಿಕೊಂಡಿಲ್ಲ. ಇದ
ಸ್ವತಃ ಅವರೇ ಟಿವಿಗಳಲ್ಲಿ ಹೇಳಿಯಾಗಿದೆ. ಇಷ್ಟು ದಿನಗಳ
ಮೇಲೂ ಎಲ್ಲೂ ಆ ಸಂದರ್ಶನ ಪ್ರಕಟವಾಗಿಲ್ಲ, ಅ
ಮೇಲೆ ಇದು ಸಂದರ್ಶನವಾಗಿರಲಿಲ್ಲ. ಸಂದರ್ಶನದ
ದಿನಗಳವರೆಗೂ ಇಂತಹದೊಂದು ನಡೆದದ್ದರ ಬಗ್ಗೆ ಎ
ಜಾಹೀರು ಪಡಿಸಿರಲಿಲ್ಲ. ನಂತರ ವೈದಿಕ್ ಮತ್ತು ಹಫೀ
ಬಹಳ ಕುಶಾಲಿನಿಂದ ಮಾತಾಡುತ್ತಿದ್ದ ಫೋಟೆ
ಪ್ರಕಟವಾದ ಮೇಲೆಯೇ ಇದು ಹೊರಗೆ ಬಂದಿದ್ದು

ಇಷ್ಟೆಲ್ಲಾ ಮಾಡಿ ಬಂದ ವೈದಿಕ್ ಯಾರು ಎಂಬುದ
ಸ್ವಲ್ಪ ಕೆದಕಿ ನೋಡಬೇಕು ಅಲ್ಲವೇ? ಈತನನ್ನು ಪತ್ರಕ
ಎನ್ನುತ್ತಿರುವುದು ಆತ ಕೆಲವೇ ಸಮಯ ಮಾ
ವರದಿಗಾರಿಕೆ ಮತ್ತು ಬರೆದ ಅಂಕಣಗಳಿಂದ ಆ
ಅದನ್ನು ಹೊರತುಪಡಿಸಿದರೆ ಆತನ ಫುಲ್‌
ಆರೆಸ್ಸೆಸ್‌ಗಾಗಿ ಕೆಲಸ ಮಾಡಿದ್ದು ಅಷ್ಟೇ. ಈ ವ್ಯಕ್ತಿ ದೆಹಲಿ
ವಿವೇಕಾನಂದ ಅಂತರರಾಷ್ಟ್ರೀಯ ಪ್ರತಿಷ್ಠಾನದ ಜೊತೆ ಆ
ಹತ್ತಿರದಿಂದ ಕೆಲಸ ಮಾಡಿದ್ದರು. ಇದೇ ಪ್ರತಿಷ್ಠಾ
ಮತ್ತೊಬ್ಬ ಕಾರ್ಯಕಾರಿಣಿ ಸದಸ್ಯ ಮತ್ತು ಬೆಂಗಳೂ
ಐಐಎಂನ ಪ್ರೊಫೆಸರ್ ವೈದ್ಯನಾಥನ್ ಜೊತೆ ಸ
'ಕಪ್ಪು ಹಣ'ದ ಕುರಿತಾಗಿ ಬಿಜೆಪಿ ಪಕ್ಷಕ್ಕಾಗಿ ವ
ಯೊಂದನ್ನು ತಯಾರಿಸಿಕೊಟ್ಟಿದ್ದರು. ಕಪ್ಪು ಹಣದ ಕುರಿ
ಮತ್ತು ಭ್ರಷ್ಟಾಚಾರದ ವಿರುದ್ಧ ಬಾಬಾ ರಾಮ್‌ದೇವ್‌
ಮುಂದಿಟ್ಟುಕೊಂಡು ಆರೆಸ್ಸೆಸ್ ನಡೆಸಲುದ್ದೇಶಿಸಿದ್ದ 'ಆಂ
ಲನ'ದ ರೂವಾರಿ ಈ ವೈದಿಕ್ ಆಗಿದ್ದರು ಮತ್ತು ಅ
ರೂಪುಗೊಳಿಸುವಲ್ಲಿ ವಿವೇಕಾನಂದ ಇಂಟರ್ ನ್ಯಾಷ
ಫೌಂಡೇಷನ್ ಬಹಳ ವ್ಯವಸ್ಥಿತವಾಗಿ ಕೆಲಸ ಮಾಡಿ

ರಹಸ್ಯವಾಗಿ ಇವರು ಆ ನಿಟ್ಟಿನಲ್ಲಿ ಏನೇನು ಮಾಡಿ
ಎಂಬುದು ಬೇರೆ ಸಂಗತಿ. ಆದರೆ ಅಧಿಕೃತವಾಗಿ
ಸಂಸ್ಥೆಯ ಹೆಸರಿನಲ್ಲಿ ವಿಚಾರ ಸಂಕಿರಣ ಹಾಗೂ ಸಭೆ
ಏರ್ಪಡಿಸಿ, ಅದೇ ಸಭೆಯಲ್ಲೇ ರಾಮ್‌ದೇವ್‌ನ ನೇತೃತ್ವ
ಭ್ರಷ್ಟಾಚಾರದ ವಿರುದ್ಧ ಕೆಲಸ ಮಾಡಲು ನಿಣ
ಮಾಡಿದ್ದರು. ಅಂತಹ ಒಂದು ಸಭೆಗೆ ಅರವಿ
ಕೇಜ್ರಿವಾಲ್ ಹಾಗೂ ಕಿರಣ್ ಬೇಡಿ ಸಹಾ ಹೋಗಿ


ಮೋದಿವಾದಿ ಮಾಧ್ಯಮಗಳ ಹುಸಿತನ

ವೈದಿಕ್ ಹಾಗೂ ಆರೆಸ್ಸೆಸ್ ನಂಟನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ ಎಂದು ಎಲ್ಲರಿಗೂ ಗೊತ್ತು. ಹಾಗಾಗಿ ಬಿಜೆಪಿ ಮತ್ತು ಅದರ ಬಾಯಿಬಡುಕರು ಸಮರ್ಥನೆಗೆ ವಿಚಿತ್ರವಾದ ವಾದ ಮುಂದಿಟ್ಟು ಬಾಯಿಬಡಿದುಕೊಳ್ಳುತ್ತಿದ್ದಾರೆ. ವೈದಿಕ್ ಪಾಕಿಸ್ತಾನಕ್ಕೆ ಹೋಗಿದ್ದದ್ದು ಪ್ರಾದೇಶಿಕ ಶಾಂತಿ ಸಂಸ್ಥೆಯ ಆಹ್ವಾನದ ಮೇರೆಗೆ. ಅದರಲ್ಲಿ ಕಾಂಗ್ರೆಸ್ ನಾಯಕ, ಮಾಜಿ ವಿದೇಶಾಂಗ ಸಚಿವ ಸಲ್ಮಾನ್ ಖುರ್ಷಿದ್ ಇದ್ದರು ಮಾತ್ರವಲ್ಲಾ, ನಿಯೋಗದ ನೇತೃತ್ವವನ್ನು ಕಾಂಗ್ರೆಸ್‌ನ ಇನ್ನೊಬ್ಬ ನಾಯಕ ಮಣಿಶಂಕರ್ ಅಯ್ಯರ್ ವಹಿಸಿದ್ದರು. ಆದ್ದರಿಂದ ಇದು ಕಾಂಗ್ರೆಸ್‌ನ ಆಷಾಢಭೂತಿತನ, ಅದರ ವಿರೋಧಕ್ಕೆ ಅರ್ಥವಿಲ್ಲ ಎಂಬುದು ಅವರ ವಾದ.

ವಾಸ್ತವದಲ್ಲಿ ಈ ನಿಯೋಗದಲ್ಲಿ ಯಾರಿರಬೇಕು ಎಂಬುದನ್ನು ಖುರ್ಷಿದ್‌ರಾಗಲೀ, ಮಣಿ ಶಂಕರ್ ಆಗಲೀ ನಿರ್ಧರಿಸಿರಲಿಲ್ಲ. ಅವರೆಲ್ಲರೂ 3 ದಿನಗಳ ಕಾರ್ಯಕ್ರಮವನ್ನು ಮುಗಿಸಿಕೊಂಡು ವಾಪಸ್ಸು ಬಂದುಬಿಟ್ಟರು. ವೈದಿಕ್ ಹಫೀಜ್‌ರನ್ನು ಭೇಟಿ ಮಾಡಿದ್ದು, ಅದಾದ ಎರಡು ವಾರಗಳ ನಂತರ! ಇದನ್ನು ಎಲ್ಲರೂ ಸ್ಪಷ್ಟಪಡಿಸಿದ್ದಾರೆ. ಈ ಎರಡು ವಾರ ವೈದಿಕ್ ಪಾಕಿಸ್ತಾನದಲ್ಲಿ ಏನು ಮಾಡುತ್ತಿದ್ದರು? ಭಾರತ ಹಾಗೂ ಪಾಕಿಸ್ತಾನ ಸರ್ಕಾರದ ನೆರವು ಮತ್ತು ನಿಗಾ ಇಲ್ಲದೇ ಹಫೀಜ್ ಭೇಟಿ ಸಾಧ್ಯವಾಗುವುದಿಲ್ಲ ಎಂಬುದು ಸಾಮಾನ್ಯ ಜ್ಞಾನ.

ಇದು ಸ್ಪಷ್ಟವಾಗಿದೆ. ಆದರೂ ಮೋದಿವಾದಿಗಳು ಮತ್ತೆ ಮತ್ತೆ ಇದುವರೆಗೆ ಅದನ್ನೇ ಬಡಿದುಕೊಳ್ಳುತ್ತಿದ್ದಾರೆ. ಸುಳ್ಳನ್ನು ಲಕ್ಷ ಸಾರಿ ಹೇಳಿ ಒಬ್ಬ ಕಾರ್ಪೋರೇಟ್ ಸಿಪಾಯಿ, ನರಹಂತಕನನ್ನು ಪ್ರಧಾನಿ ಪಟ್ಟಕ್ಕೆ ಏರಿಸಲು ಸಾಧ್ಯವೆಂದು ಈಗಾಗಲೇ ಸಾಬೀತಾಗಿದೆ. ಹಾಗಿದ್ದ ಮೇಲೆ ಇಂತಹ ಅಪಾಯಕಾರಿ ಕೃತ್ಯಗಳನ್ನು ಮಾಡಿದ ನಂತರ ಸಾವಿರ ಬಾರಿ ಸುಳ್ಳು ಹೇಳಿ ದಿಕ್ಕುತಪ್ಪಿಸುವುದು ಕಷ್ಟವೇನಲ್ಲ ಎಂಬುದು ಅವರ ನಂಬಿಕೆ.





ಸಂಸ್ಥೆಯ ಆವರಣದಲ್ಲೇ ಬಾಬಾ ರಾಮ್‌ದೇವ್, ...ರ್ನ್ನಿರ್ಗನ ಅಧ್ಯಯುರ್ಗಗಳು ಮತ್ತು ಅಣ್ಣಾ ಹಜಾರೆ ತಂಡವು ...ಟಿಯಾಗಿ ಜಂಟಿ ಚಟುವಟಿಕೆ ನಡೆಸುವ ಕುರಿತು ...ಮಾಲೋಚನೆ ನಡೆಸಿದ್ದರು. ಆದರೆ ಆ ನಂತರ ಹಜಾರೆ ...ಂಡ ಮತ್ತು ರಾಮ್‌ದೇವ್‌ನ ತಂಡ ಪ್ರತ್ಯೇಕ ...ರ್ಯಾಚರಣೆಗಳನ್ನು ನಡೆಸಿದ್ದವು.

ಈ ಸಂಸ್ಥೆಯಲ್ಲಿ ಕೇಂದ್ರ ಗುಪ್ತಚರ ಇಲಾಖೆಯ ...ಲವಾರು ಮಾಜಿ ಅಧಿಕಾರಿಗಳು, 'ರಾ'ದ ಮಾಜಿ ...ಧಿಕಾರಿಗಳು, ಮಾಜಿ ಐಎಎಸ್ ಅಧಿಕಾರಿಗಳು ಮತ್ತು ...ಬಲಪಂಥೀಯ ಚಿಂತಕರುಗಳು ಇದ್ದಾರೆ. ಅವರಲ್ಲೇ ಮೂರು ...ವರು ಈಗ ಈ ದೇಶದ ಅತ್ಯುನ್ನತ ಸ್ಥಾನಗಳಿಗೆ ...ೀದಿಯಿಂದ ನಿಯೋಜಿಸಲ್ಪಟ್ಟಿದ್ದಾರೆ. ಪ್ರಧಾನ ಮಂತ್ರಿ ...ರ್ಯಾಲಯದ ಪ್ರಧಾನ ಕಾರ್ಯದರ್ಶಿ ನೃಪೇಂದ್ರ ಮಿಶ್ರಾ, ...ಪರ ಪ್ರಧಾನ ಕಾರ್ಯದರ್ಶಿ ಪಿ.ಕೆ.ಮಿಶ್ರಾ ಇದೇ ...ಸ್ಥೆಯವರು. ಅದಲ್ಲದೇ ಇನ್ನೊಂದು ಮಹತ್ವದ ಹುದ್ದೆ ...ಾದ ರಾಷ್ಟ್ರೀಯ ಭದ್ರತಾ ಸಲಹೆಗಾರನ ಪಟ್ಟ ಅಲಂಕರಿಸಿ ...ದ ಅಜಿತ್ ದೋವಲ್ ಇದರ ನಿರ್ದೇಶಕರಾಗಿರುವವರು.

ಪ್ರಧಾನ ಕಾರ್ಯದರ್ಶಿಯನ್ನು ಆಯ್ಕೆ ಮಾಡಿಕೊಳ್ಳ ...ಡು ಹೊಸದೊಂದು ಕಾನೂನನ್ನೇ ತರಲು ಮೋದಿ ...ಹಿಂಜರಿಯಲಿಲ್ಲ. ಅಜಿತ್ ದೋವಲ್ ಭಯೋತ್ಪಾದನೆಯ ...ುತಾಗಿ ಅತ್ಯಂತ ಕಠಿಣ ನಿಲುವನ್ನು ಹೊಂದಿರುವ ವ್ಯಕ್ತಿ ...ತ್ತು ಅತ್ಯಂತ ಪರಿಣಿತ ಎಂಬ ಹೆಸರನ್ನು ಹೊಂದಿದ್ದಾರೆ.

ದೆಹಲಿಯ ಚಾಣಕ್ಯಪುರಿಯಲ್ಲಿ ಪಿ.ವಿ.ನರಸಿಂಹ ರಾವ್ ...ರ್ಕಾರದಿಂದ ಸರ್ಕಾರೀ ಸೈಟು ಪಡೆದುಕೊಂಡು ಕಟ್ಟಿದ ...ಟ್ಟಡದಲ್ಲಿ ಈ ಸಂಸ್ಥೆ ಕಾರ್ಯನಿರ್ವಹಿಸುತ್ತದೆ. ಅಂದಿನಿಂದ ...ದಿನವರೆಗೂ ಬಹಳ ನಿಷ್ಠೆಯಿಂದ ಬಲಪಂಥೀಯ ...ಿಂಕ್‌ಟ್ಯಾಂಕ್ ಹಾಗೂ ಕಾರ್ಯಾಚರಣೆಗಳನ್ನು ಇದು ...ಡೆಸುತ್ತಾ ಬರುತ್ತಿದೆ. ಆದ್ದರಿಂದಲೇ ಮೋದಿ ತನ್ನ ಅತ್ಯುನ್ನತ ...ರ್ಯಾಚರಣೆಯ ತಂಡವನ್ನು ಇಲ್ಲಿಂದ ಆಯ್ದುಕೊಂಡಿದ್ದು. ...ೇ ತಂಡದಲ್ಲಿನ ಇನ್ನೊಬ್ಬ ವ್ಯಕ್ತಿ ವೇದ ಪ್ರತಾಪ್ ...ದಿಕ್ ಆದ್ದರಿಂದಲೇ, ಈ ಭೇಟಿಗೆ ಮಹತ್ವ ಬಂದಿದೆ. ...ಅಂದರೆ ನಿಸ್ಸಂದೇಹವಾಗಿ, ಭಾರತ ಸರ್ಕಾರದ ಅಥವಾ ...ಾರತದ ಪ್ರಧಾನ ಮಂತ್ರಿಯ ದೂತನಾಗಿಯೇ ವೈದಿಕ್, ... ದೇಶ ವಿಚಾರಣೆ ನಡೆಸಿ ಕೊಲ್ಲಲು ಬಯಸಿರುವ ...ಉಗ್ರಗಾಮಿ ನಾಯಕನನ್ನು ಭೇಟಿಯಾಗಿ ಬಂದಿದ್ದಾರೆ. ...ರ್ಕಾರ ಇದುವರೆಗೆ ತನಗೂ ಅದಕ್ಕೂ ಸಂಬಂಧವಿಲ್ಲವೆಂದು ...ಕೆ ನೀಡಿದೆ. ಸಂಬಂಧವಿಲ್ಲವೆಂದು ಸ್ವತಃ ವೈದಿಕ್ ... ಹೇಳಿದ್ದರೂ ತಾನು ಟ್ರ್ಯಾಕ್-2 ಮಧ್ಯಸ್ಥಗಾರನೆಂತಲೂ ...ಳಿದ್ದಾರೆ.

...ಏನಿದು ಟ್ರ್ಯಾಕ್-2? ಯಾವುದೇ ಸಮಸ್ಯೆಯನ್ನು ...ಹರಿಸಲು ಸರ್ಕಾರಗಳು ಅಥವಾ ಬಲಾಢ್ಯ ಶಕ್ತಿಗಳು ...ರಗೆ ಎದ್ದು ಕಾಣುವ ಒಂದು ನೀತಿ-ನಿಲುವನ್ನು ...ಂದಿರುತ್ತವೆ. ಮೇಲ್ನೋಟಕ್ಕೆ ಆ ಸಮಸ್ಯೆಗೆ ಕಾರಣವೆಂದು ...ಲಾಗುತ್ತಿರುವವರ ವಿರುದ್ಧ ಕತ್ತಿ, ಬಂದೂಕು, ಬಾಂಬು ...ವನ್ನೂ ಮಸೆಯುತ್ತಿರುತ್ತಾರೆ. ಆದರೆ ಟ್ರ್ಯಾಕ್-2ರಲ್ಲಿ ...ರೊಂದಿಗೆ ಬೇರೆಯದೇ ಸಂಬಂಧವನ್ನೂ ಹೊಂದಿರು ...ೆ. ಉದಾಹರಣೆಗೆ ಈ ರೀತಿ ಅಂತಿಟ್ಟುಕೊಳ್ಳಿ. ...91ರಲ್ಲಿ ಈ ದೇಶದ ಮಾಜಿ ಪ್ರಧಾನ ಮಂತ್ರಿ ರಾಜೀವ್ ...ಧಿಯವರನ್ನು ಎಲ್‌ಟಿಟಿಇ ಕೊಲ್ಲುತ್ತದೆ. ಕೊಂದಿರುವುದು ...ಟಿಟಿಇ ಅಂತ ಎಲ್ಲರಿಗೂ ಗೊತ್ತು. ಸ್ವತಃ ಆ ಸಂಘಟನೆ ... ಅದನ್ನು ಹೇಳಿಕೊಳ್ಳುತ್ತದೆ. ಈ ಸಂಘಟನೆಯನ್ನು ...ಸುವಲ್ಲಿ ಸ್ವತಃ ರಾಜೀವ್ ಗಾಂಧಿಯ ತಾಯಿ, ಪಕ್ಷ ...ಗೂ ಸರ್ಕಾರ ಹಿಂದೆ ನೆರವನ್ನು ನೀಡಿರುತ್ತಾರೆ. ಆದರೆ ...ಹತ್ಯೆಯನ್ನೇ ಮಾಡಿದ ಮೇಲೆ ಎಲ್ಲರ ನಿರೀಕ್ಷೆಯಂತೆ ...ಟಿಟಿಇಯನ್ನು ಭಾರತದಲ್ಲಿ ನಿಷೇಧಿಸಲಾಗುತ್ತದೆ. ಅದರ ...ಬಲಿಗರನ್ನು ದೇಶದಲ್ಲಿ ಬೇಟೆಯಾಡಲಾಗುತ್ತದೆ. ಅದೇ ...ದರ್ಭದಲ್ಲಿ ಲಕ್ಷದ್ವೀಪ ಸಮೂಹದ ದ್ವೀಪವೊಂದನ್ನು ...ೇ ಸರ್ಕಾರದ ಅತ್ಯಂತ ನಿಷ್ಠ ಗುಪ್ತಚರ ಸಂಸ್ಥೆ ರಾ, ...ೇ ಎಲ್‌ಟಿಟಿಇಗೆ ತರಬೇತಿಗಾಗಿ ಬಿಟ್ಟುಕೊಟ್ಟಿರುತ್ತದೆ! ...ಿ ಟ್ರ್ಯಾಕ್-2.

...ಆದರೆ ವೈದಿಕ್ ಮೋದಿ ಸರ್ಕಾರ, ಬಿಜೆಪಿ ಹಾಗೂ ...ರೆಸ್ಸೆಸ್‌ಗೆ ಎಷ್ಟು ಹತ್ತಿರದ ವ್ಯಕ್ತಿಯೆಂದರೆ, ಇದನ್ನು ಟ್ರ್ಯಾಕ್-2 ...ಲು ಸಾಧ್ಯವಿಲ್ಲ, ಟ್ರ್ಯಾಕ್-1 ಅಂತಲೇ ಹೇಳಬೇಕಾಗುತ್ತದೆ. ...ಹಾಗಿದ್ದರೆ ಬಿಜೆಪಿಯ ಪಾಕ್ ವಿರೋಧಿ, ಭಯೋತ್ಪಾದನೆ ...ವಿರೋಧಿ ಅಟ್ಟಹಾಸವೆಲ್ಲವೂ ಹುಸಿಯೇ? ಇದರ ಹಿಂದಿನ ...ನಿಜವಾದ ಉದ್ದೇಶವೇನು? ರಾಷ್ಟ್ರೀಯ ಹಿತಾಸಕ್ತಿಯೆಂದು ...ನ್ನು ಆರೆಸ್ಸೆಸ್ ಹೇಳಲು ಕಾರಣವೇನು? ಮುಂದೊಂದು ...ನಿಜವಾದ ಕಾರಣ ಗೊತ್ತಾಗುತ್ತದೆ ಎಂದು ಆರೆಸ್ಸೆಸ್ ...ಕ್ತಾರರುಗಳು ಹೇಳಲು ಕಾರಣವೇನು? ಹೌದು ...ಪೂರ್ಣ ಸತ್ಯ ಮುಂದೊಂದು ದಿನವೇ ಗೊತ್ತಾಗುತ್ತದೆ. ...ಒಂದಂತೂ ಸತ್ಯ. ಭಯೋತ್ಪಾದನೆಗೆ ವಿರೋಧ, ಕಪ್ಪು ...ಹಣಕ್ಕೆ ವಿರೋಧ, ಭ್ರಷ್ಟಾಚಾರಕ್ಕೆ ವಿರೋಧ, ಸ್ವದೇಶಿ ...ಇವೂ ಮುಖವಾಡಗಳು. ಅಂಬಾನಿ ಮತ್ತು ಅದಾನಿಯ ...ಆಸಕ್ತಿ ಕಾಯಲು, ಅವರನ್ನು ದಕ್ಷಿಣ ಏಷ್ಯಾ ಹಾಗೂ ...ಜಗತ್ತಿನ ಉದ್ದಿಮೆಗಳಿಗೆ ಅಧಿಪತಿ ಮಾಡಲು ಮೋದಿಯ ... ಇಷ್ಟು ಏನೇನು ಮಾಡುತ್ತದೆ ಹೇಳುವುದು ಅಷ್ಟು ...ಕಷ್ಟವಲ್ಲ. ಅಥವಾ ಅಂಬಾನಿ-ಅದಾನಿಯನ್ನೂ ಮೀರಿದ ...ಶಕ್ತಿಗಳೂ ಇದರ ಹಿಂದೆ ಇರಬಹುದು. ವೈದಿಕ್ ...ಇಂತಹದೊಂದು ದೂರಾಲೋಚನೆಯ ಭಾಗವಾಗಿಯೇ ...ಪಾಕಿಸ್ತಾನದ ಅತೀ ದೊಡ್ಡ ಉಗ್ರಗಾಮಿ'ಯನ್ನು ಭೇಟಿ ... ಬಂದಿದ್ದಾನೆ.

■ ಡಾ.ವಾಸು ಎಚ್.ವಿ.

ಮಂಡ್ಯ: ಮೊಬೈಲ್ ಬಿಚ್ಚಿಟ್ಟ ಕೊಲೆ ರಹಸ್ಯ!

ಮೊಬೈಲ್‌ನಿಂದ ಯಾರ್‍ಯಾರಿಗೆ ಏನು ಅನುಕೂಲ ಏದೆಯೋ ಗೊತ್ತಿಲ್ಲ, ಆದರೆ ಪೊಲೀಸರಿಗಂತೂ ಅದು ಹೊಸ ಡಿಟೆಕ್ಟಿವ್ ಸಾಧನವೇ ಆಗಿಹೋಗಿದೆ. ನಾಪತ್ತೆ ಕಿಡ್ನ್ಯಾಪ್, ಕೊಲೆ, ರೇಪ್... ಎಂತದೇ ಕೇಸುಗಳು ದಾಖಲಾದರೂ ಪೊಲೀಸರು ಮೊದಲು ಮಾಡುವ ಕೆಲಸವೆಂದರೆ ಮೊಬೈಲ್ ಟ್ರ್ಯಾಪ್‌ಗೆ ಬಲೆ ಬೀಸಿ ಕೂರುವುದು. ಅದೆಷ್ಟೋ ಪ್ರಕರಣಗಳಲ್ಲಿ ಮೊಬೈಲ್‌ಗಳೇ ಆರೋಪಿಗಳನ್ನು ಜೈಲಿಗೆ ಗದುಮಿದ ನಿದರ್ಶನಗಳಿವೆ. ಅಂತದ್ದೇ ಒಂದು ಕೇಸು ಇತ್ತೀಚೆಗೆ ಶ್ರೀರಂಗಪಟ್ಟಣ ಠಾಣಾ ವ್ಯಾಪ್ತಿಯಲ್ಲೂ ನಡೆದಿದೆ. ಕೊಲೆ ನಡೆದು ಬರೋಬ್ಬರಿ ಒಂದೂವರೆ ತಿಂಗಳ ನಂತರ ಅಸಲೀ ಹಂತಕರನ್ನು ಪೊಲೀಸ್ ತೆಕ್ಕೆಗೆ ತಳ್ಳಿದ್ದು ಕೊಲೆಯಾದವನ ಮೊಬೈಲ್!

ಆ ಹತ್ಯೆ ನಡೆದದ್ದು ಒಂದೂವರೆ ತಿಂಗಳ ಹಿಂದೆ. ಕೊಲೆಯಾದವನು ಶ್ರೀರಂಗಪಟ್ಟಣದ ಅರಕೆರೆ ಹೋಬಳಿಯ ಜಕ್ಕನಹಳ್ಳಿ ಗ್ರಾಮದ ಜೆ.ಎನ್.ನಾಗೇಶ. ಕೊಲೆ ಮಾಡಿದವನು ಅದೇ ಊರಿನ ಮರಿಮಾದೇಗೌಡನ ಮಗ ಮಂಜುನಾಥ ಅಲಿಯಾಸ್ ಹುಚ್ಚ ಮಂಜ. ಇವರಿಬ್ಬರೂ ಅದೊಂದು ಕಾಲಕ್ಕೆ ಚೆಡ್ಡಿದೋಸ್ತ್‌ಗಳಾಗಿದ್ದವರೆ. ಆದರೆ ವ್ಯವಹಾರ ವೈಷಮ್ಯ ಮತ್ತು ಹೊಟ್ಟೆಕಿಚ್ಚುಗಳು ಇಬ್ಬರನ್ನೂ ವಿರುದ್ಧ ದಿಕ್ಕಿನಲ್ಲಿ ನಿಲ್ಲುವಂತೆ ಮಾಡಿದ್ದವು. ಕೊಲೆಯಾದ ನಾಗೇಶ ಕಲ್ಲುಗಣಿಯ ಕ್ವಾರಿ ಮಾಡಿಕೊಂಡು ಕೋಟಿಗಟ್ಟಲೆ ತೂಗುತ್ತಿದ್ದ. ವ್ಯಾವಹಾರಿಕ ಜ್ಞಾನದಲ್ಲಿ ಚುರುಕಾಗಿದ್ದ ನಾಗೇಶನಿಗೆ ಜನಸಂಪರ್ಕ ಚೆನ್ನಾಗಿತ್ತು. ಅಲ್ಲದೆ ಅವನ 5 ಮಂದಿ ಸಹೋದರರು ಕೂಡ ವ್ಯವಹಾರದಲ್ಲಿ ಸಾಥ್ ನೀಡುತ್ತಿದ್ದದ್ದು ಅವನ ಆದಾಯ ಮತ್ತಷ್ಟು ಹೆಚ್ಚಾಗಲು ನೆರವಾಗಿತ್ತು. ಹಾಗಾಗಿ ನೋಡನೋಡುತ್ತಿದ್ದಂತೆಯೇ ಕಾರು, ಮನೆ, ಸೈಟು ಮಾಡಿಕೊಂಡು ಮುಗುಮ್ಮಾಗಿದ್ದ. ಜೊತೆಗೆ ಇತ್ತೀಚೆಗೆ ರಾಜಕೀಯದಲ್ಲೂ ಮಿಂಚಲು ಶುರು ಮಾಡಿಕೊಂಡಿದ್ದ. ಒಂದು ಕಾಲಕ್ಕೆ ಊರಿನಲ್ಲಿ ಸಣ್ಣ ಅಂಗಡಿಯಿಟ್ಟುಕೊಂಡಿದ್ದ ನಾಗೇಶ್ ಕಣ್ಣ ಮುಂದೆಯೇ ಕೋಟ್ಯಾಂತರ ರೂ. ಆಸ್ತಿ-ಪಾಸ್ತಿ ಮಾಡಿಕೊಂಡಿದ್ದು ಹಲವರ ಕಣ್ಣುರಿಸಿತ್ತು. ಅಂತವರಲ್ಲಿ ಹುಚ್ಚ ಮಂಜನೂ ಒಬ್ಬ. ನಾಗೇಶ್‌ನಂತೆಯೇ ಇವನೂ ಕೂಡ ಕ್ವಾರಿ ನಡೆಸುತ್ತಿದ್ದರೂ ಮಂಜನ ಆದಾಯ ಅಷ್ಟಕಷ್ಟೆ.

ಈ ಹಿಂದೆ ಒಂದು ಬಾರಿ ಕ್ವಾರಿ ಹಾಗೂ ಹಣದ ವಿಚಾರದಲ್ಲಿ ಮಂಜನಿಗೂ ನಾಗೇಶನಿಗೂ ಜಗಳವಾಗಿತ್ತು. ಅದಾದನಂತರ ಇವರಿಬ್ಬರ ಮಧ್ಯೆ ಮೊದಲಿನ ಸ್ನೇಹ ಉಳಿದಿರಲಿಲ್ಲ. ಆದಾಗ್ಯೂ ಹುಚ್ಚ ಮಂಜ ಮತ್ತು ನಾಗೇಶ ಆಗೊಮ್ಮೆ ಈಗೊಮ್ಮೆ ಮಾತನಾಡುತ್ತಿದ್ದರೇ ಹೊರತು ಅಷ್ಟಾಗಿ ಸೇರುತ್ತಿರಲಿಲ್ಲ. ಆದರೆ ಹುಚ್ಚ ಮಂಜ ಮಾತ್ರ ಇತ್ತೀಚೆಗೆ ನಾಗೇಶನ ಬೆಳವಣಿಗೆ ಕಂಡು ಒಳಗೊಳಗೆ ಕುದಿಯುತ್ತಿದ್ದ.

ಇಬ್ಬರ ನಡುವೆ ಜಗಳವಾಗಿ ಐದಾರು ವರ್ಷಗಳೇ ಗತಿಸಿದ್ದರೂ ಹುಚ್ಚ ಮಂಜ ಮತ್ಸರ ಮರೆತಿರಲಿಲ್ಲ. ಹಾಗಾಗಿ ಹುಚ್ಚ ಮಂಜ, ನಾಗೇಶನನ್ನು ಮುಗಿಸಲು ತೀರ್ಮಾನಿಸಿದ್ದ. ಇದಕ್ಕೆ ಮಂಡ್ಯ ತಾಲ್ಲೂಕು ಮಲ್ಲಯ್ಯನದೊಡ್ಡಿ ಗ್ರಾಮದ ಚನ್ನಪ್ಪನ ಮಗ ಡಾಬಾ ಅನಿಲ ಸಾಥ್ ನೀಡಿದ್ದ. ಈ ಅನಿಲ ಶ್ರೀರಂಗಪಟ್ಟಣ ಬಳಿಯ ಕೋಡಿಶೆಟ್ಟಿಪುರದಲ್ಲಿ ಡಾಬಾ ತೆರೆಯಲು ಹಣಕಾಸು ನೆರವು ನೀಡಿದ್ದೇ ಹುಚ್ಚ ಮಂಜ. ಆ ಋಣ ತೀರಿಸುವುದಕ್ಕೋಸ್ಕರ ಮಂಜ ಹೇಳಿದ ಕೂಡಲೇ ಮಲ್ಲಯ್ಯನದೊಡ್ಡಿಯ ಗೆಳೆಯ ರವಿ ಮತ್ತು ತನ್ನದೇ ಡಾಬಾದಲ್ಲಿ ಕೆಲಸ ಮಾಡಿಕೊಂಡಿದ್ದ ಪುನೀತ್‌ರನ್ನು ಜೊತೆಗಾಕಿಕೊಂಡು ಹತ್ಯೆಗೆ ಅನಿಲ ಅಣಿಯಾಗಿದ್ದ. ಅಲ್ಲದೆ ಆರ್ಥಿಕವಾಗಿ ಒಂದಷ್ಟು ಬಲಿಷ್ಠನಾದ ಹುಚ್ಚ ಮಂಜನ ಅಣ್ಣ ಮೊದಲನೇ ದರ್ಜೆ ಗುತ್ತಿಗೆದಾರನಾದದ್ದು ಹಾಗೂ ಅವರ ಫ್ಯಾಮಿಲಿ ಜೆಡಿಎಸ್ ಪಕ್ಷದೊಂದಿಗೆ ಗುರುತಿಸಿ ಕೊಂಡದ್ದು ಆ ಹಂತಕರಿಗೆಲ್ಲ ಒಂದಷ್ಟು ಮೊಂಡು ಧೈರ್ಯ ತುಂಬಿತ್ತು.

ಹುಚ್ಚ ಮಂಜನ ಆಣತಿಯಂತೆ ಮೇ 21ರಂದು ನಾಗೇಶನ ಹತ್ಯೆಗೆ ಇವರೆಲ್ಲರೂ ಸಿದ್ಧರಾಗಿದ್ದರು. ಅಂದು ತನ್ನ ಸ್ಕಾರ್ಪಿಯೊ ಕಾರಿನಲ್ಲಿ ಬಂದ ನಾಗೇಶನನ್ನು ಹೊಂಚು ಹಾಕಿ ಭೇಟಿ ಮಾಡಿದ ಹುಚ್ಚ ಮಂಜ ಕೆ.ಎಂ.ದೊಡ್ಡಿ ಬಳಿ ಕ್ವಾರಿ ಸಿಡಿಸುವ ಸ್ಫೋಟಕಗಳನ್ನು ಕಡಿಮೆ ಬೆಲೆಗೆ ಕೊಡಿಸುವುದಾಗಿ ನೆಪ ಹೇಳಿ ಅವನದೇ ಕಾರಿನೊಳಗೆ ತೂರಿಕೊಂಡಿದ್ದಾನೆ. ಸ್ವಲ್ಪ ದೂರ ಹೋಗುತ್ತಿದ್ದಂತೆಯೇ ಡಾಬಾ ಅನಿಲ ತನ್ನ ಭಂಟರಾದ ಪುನೀತ ಹಾಗೂ ರವಿಯೊಂದಿಗೆ ಆಕಸ್ಮಿಕವೇನೋ ಎಂಬಂತೆ ರಸ್ತೆ ಮಧ್ಯದಲ್ಲಿ ಸಿಕ್ಕು, ಡ್ರಾಪ್ ನೆಪದಲ್ಲಿ ಕಾರು ಸೇರಿಕೊಂಡಿದ್ದ. ಡಾಬಾ ಅನಿಲ, ಪುನೀತ, ರವಿ ಇವರೆಲ್ಲರೂ ತಕ್ಕ ಮಟ್ಟಿಗೆ ಪರಿಚಯವಿದ್ದುದರಿಂದ ತಾನಿನ್ನು ಕೆಲವೇ ಗಂಟೆಗಳಲ್ಲಿ ಇವರ ಕೈಯಲ್ಲಿ ಕೊಲೆಯಾಗುತ್ತೇನೆಂಬ ಸಣ್ಣ ಸುಳಿವೂ



ಜೆ.ಎನ್.ನಾಗೇಶ

ಇಲ್ಲದೆ ನಾಗೇಶ ಕಾರು ಓಡಿಸುತ್ತಿದ್ದ.

ಕಾರ್‌ನ ಮುಂದಿನ ಸೀಟಿನಲ್ಲಿ ನಾಗೇಶ ಪಕ್ಕದಲ್ಲಿ ಹುಚ್ಚ ಮಂಜ ಕುಳಿತಿದ್ದರೆ ಇನ್ನುಳಿದವರು ಹಿಂದಿನ ಸೀಟಿನಲ್ಲಿದ್ದರು. ಮೊದಲೇ ಹಾಕಿದ್ದ ಪಕ್ಕಾ ಸ್ಕೆಚ್‌ನಂತೆ ಮಬ್ಬುಗತ್ತಲಾಗುತ್ತಿದ್ದಂತೆಯೇ ಹುಚ್ಚ ಮಂಜ ಇಷಾರೆ ಕೊಟ್ಟ ಕೂಡಲೇ ನಾಗೇಶನ ಕುತ್ತಿಗೆಗೆ ಹಿಂಬದಿಯಿಂದ ಡಾಬಾ ಅನಿಲ, ರವಿ ಹಾಗೂ ಪುನೀತ್ ಟವೆಲ್ ಹಾಕಿ ಬಿಗಿದಿದ್ದರು. ಆಗ ನಾಗೇಶ ಜೀವ ಉಳಿಸಿಕೊಳ್ಳುವುದಕ್ಕೋಸ್ಕರ 'ಮಂಜಣ್ಣ ಬೇಡ ಕಣೋ' ಎಂದು ಅಂಗಲಾಚಿದ್ದಾನೆ. ಆದರೆ ನಾಗೇಶನ ಸಾವನ್ನೆ ಹೊಂಚಿ ಬಂದಿದ್ದ ಹುಚ್ಚ ಮಂಜ ಕರುಣೆ ತೋರುವುದಕ್ಕೆ ಆಸ್ಪದವೇ ಇರಲಿಲ್ಲ. ಕೆಲ ನಿಮಿಷಗಳಲ್ಲೆ ನಾಗೇಶ ತನ್ನ ಡ್ರೈವರ್ ಸೀಟಿನಲ್ಲೆ ಹೆಣವಾಗಿ ಹೋಗಿದ್ದ.

ನಂತರ ನಾಗೇಶನ ಶವವನ್ನು ಆತನದ್ದೇ ಸ್ಕಾರ್ಪಿಯೋ ದಲ್ಲಿ ಶ್ರೀರಂಗಪಟ್ಟಣದ ಗಣಂಗೂರು ಬಳಿ ತಂದ



ಹಂತಕರು ನಾಗೇಶನ ಹೆಣದ ಸಮೇತ ಇಡೀ ಕಾರನ್ನೇ ವಿ.ಸಿ.ನಾಲೆಗೆ ತಳ್ಳಿ ಏನೂ ಆಗೇ ಇಲ್ಲವೆಂಬಂತೆ ಮನೆ ಸೇರಿಕೊಂಡಿದ್ದರು. ಇದಿಷ್ಟೂ ಘಟನೆ ನಡೆಯುತ್ತಿರಬೇಕಾದರೆ ಆಸೆಬುರುಕ ಪುನೀತ, ಮಿಕ್ಕವರ ಕಣ್ತಪ್ಪಿಸಿ ಹೆಣವಾದ ನಾಗೇಶನ ದುಬಾರಿ ಮೊಬೈಲನ್ನು ಎಗರಿಸಿ ಜೇಬಿಗಿಳಿಸಿ ಕೊಂಡಿದ್ದ. ಹಂತಕರ ವ್ಯವಸ್ಥಿತ ಪ್ಲಾನು ಕೈಕೊಟ್ಟಿದ್ದೇ ಇಲ್ಲಿ.

ಇತ್ತ ಎಷ್ಟು ಹೊತ್ತಾದರೂ ಪತಿ ಮನೆಗೆ ಬರದ್ದನ್ನು ಕಂಡು ಗಾಬರಿಗೊಂಡ ನಾಗೇಶನ ಹೆಂಡತಿ ಮಗ ಹರ್ಷನಿಂದ ಗಂಡನ ಮೊಬೈಲ್‌ಗೆ ಕರೆಮಾಡಿಸಿದ್ದಳು. ಆದರೆ ಅಷ್ಟರಲ್ಲಾಗಲೆ ಫೋನು ಸ್ವಿಚ್‌ಆಫ್ ಆಗಿತ್ತು. ಅವನ ಸ್ನೇಹಿತರಿಗೆ ಫೋನಾಯಿಸಿದಾಗಲೂ ಸುಳಿವು ಪತ್ತೆಯಾಗದ್ದರಿಂದ ನಾಗೇಶನ ಅಣ್ಣ ಮಹದೇವು ತನ್ನ ತಮ್ಮ ಸ್ಕಾರ್ಪಿಯೋ ವಾಹನ ಸಮೇತ ನಾಪತ್ತೆಯಾಗಿರುವುದಾಗಿ ಶ್ರೀರಂಗಪಟ್ಟಣ ಠಾಣೆಯಲ್ಲಿ ಕಂಪ್ಲೆಂಟ್ ಕೊಟ್ಟಿದ್ದ. ಇದಾಗಿ 3 ದಿನ ಕಳೆದ ನಂತರ ಮೇ 24ರಂದು ಗಣಂಗೂರು ಬಳಿಯ ವಿ.ಸಿ.ನಾಲೆಯಲ್ಲಿ ಕಾರೊಂದು ಬಿದ್ದಿರುವುದಾಗಿ ಪೊಲೀಸರಿಗೆ ಮಾಹಿತಿ ಬಂದಿತ್ತು. ಸ್ಥಳಕ್ಕೆ ಹೋಗಿ ನೋಡಿದ ಪೊಲೀಸರಿಗೆ ಅಚ್ಚರಿಯೊಂದು ಕಾದಿತ್ತು. ಮೂರು ದಿನಗಳ ಹಿಂದೆ ದಾಖಲಾಗಿದ್ದ ದೂರಿನ ನಂಬರಿನ ಪ್ಲೇಟಿನದೇ ಕಾರು ಅದು. ಜೆಸಿಬಿ ಯಂತ್ರದೊಂದಿಗೆ ಕಾರನ್ನು ಮೇಲೆತ್ತಿಸಿದಾಗ ಕಾರಿನಲ್ಲೇ ನಾಗೇಶನ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿತ್ತು.

ನಾಗೇಶನ ನಿಗೂಢ ಕೊಲೆ ಪ್ರಕರಣ ವಿಪರೀತ ಕುತೂಹಲ ಮೂಡಿಸಿ ಜನ ಅದರ ಬಗ್ಗೆಯೇ ಚರ್ಚಿಸುತ್ತಿದ್ದರೂ ಅದೇ ಊರಿನಲ್ಲಿದ್ದ ಹುಚ್ಚ ಮಂಜ ತನಗೇನೂ ಗೊತ್ತೇ ಇಲ್ಲದಂತೆ ತಣ್ಣಗಿದ್ದ. ಅವನ ಮೊಂಡು ಧೈರ್ಯ ಎಂಥದ್ದೆಂದರೆ ಅಂತ್ಯಸಂಸ್ಕಾರ ಮುಗಿದು 11 ದಿನಕ್ಕೆ ಮಾಡಿದ ನಾಗೇಶನ ತಿಥಿಗೆ ಹೋಗಿದ್ದ ಹುಚ್ಚ ಮಂಜ ಗಡದ್ದಾಗಿ ತಿಂದು ಬಂದಿದ್ದ.

ದಿನಗಳು ಸರಿಯುತ್ತಿದ್ದಂತೆ ಕೊಲೆಯಲ್ಲಿ ಹುಚ್ಚ ಮಂಜನ ಕೈವಾಡವಿರುವುದರ ಬಗ್ಗೆ ನಾಗೇಶನ ಮನೆಯವರಿಗೆ ಅನುಮಾನ ಮೂಡಿ ತನಿಖೆ ನಡೆಸುತ್ತಿದ್ದ ಪೊಲೀಸರ ಮುಂದೆಯೂ ಹೇಳಿಕೊಂಡಿದ್ದರು. ಹುಚ್ಚ ಮಂಜನನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದಾಗಲೂ ಸ್ವಲ್ಪ ಕೂಡಾ ಅಳುಕದೆ 'ನಾನು ಕೊಲೆ ಮಾಡಿಲ್ಲ' ಎಂದು ಪೊಲೀಸರ ಮುಂದೆ ಬೂಸಿ ಬಿಟ್ಟಿದ್ದ. ರಾಜಕೀಯವಾಗಿ ಜೆಡಿಎಸ್ ಶಾಸಕ ರಮೇಶ್ ಬಂಡಿಸಿದ್ದೇಗೌಡನ ಬೆಂಬಲವಿದ್ದ, ಆರ್ಥಿಕವಾಗಿಯೂ ಸಾಕಷ್ಟು ಬಲಿಷ್ಠನಾಗಿದ್ದ ಹುಚ್ಚ ಮಂಜ ಹೇಳಿದ್ದನ್ನೇ ವೇದವಾಕ್ಯವೆಂದು ನಂಬಿದ ಶ್ರೀರಂಗಪಟ್ಟಣ ಪೊಲೀಸರು ಆತನನ್ನು ಬಿಟ್ಟು ಕಳುಹಿಸಿದ್ದರು.

ಒಂದೂವರೆ ತಿಂಗಳಾದರೂ ಪೊಲೀಸರ ತನಿಖೆ ಒಂದಿಂಚೂ ಕದಲಿರಲಿಲ್ಲ. ಆದರೆ ಆಗಷ್ಟೇ ಶ್ರೀರಂಗಪಟ್ಟಣಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಬಂದ ದೀಪಕ್ ಎಂಬ ಖಡಕ್ ಅಧಿಕಾರಿಗೆ ಪ್ರಕರಣವನ್ನು ಎಸ್ಪಿ ಭೂಷಣ್‌ರಾವ್ ಬೊರಸೆಯವರು ಒಪ್ಪಿಸುತ್ತಿದ್ದಂತೆಯೇ ಅವರು ಸಬ್ ಇನ್ಸ್‌ಪೆಕ್ಟರ್‌ಗಳಾದ ಬಿ.ಜಿ.ಕುಮಾರ್ ಹಾಗೂ ವೆಂಕಟೇಶಯ್ಯನವರನ್ನು ಸೇರಿಸಿಕೊಂಡು ತನಿಖೆಗಿಳಿದಿದ್ದರು. ಕೊಲೆಯಾದ ಘಳಿಗೆಯಿಂದ ಕಾಣೆಯಾಗಿದ್ದ ನಾಗೇಶ ಮೊಬೈಲ್ ಪತ್ತೆ ಮಾಡುವುದು ಅವರ ಮೊದಲ ಕೆಲಸವಾಗಿತ್ತು. ಒಂದೇ ಒಂದು ಸಿಗ್ನಲ್‌ಗಾಗಿ ಕಿವಿಹಚ್ಚಿ ಕೂತರೂ ಮೊಬೈಲ್‌ನ ಇಎಂಐ ನಂಬರ್ ಎಲ್ಲೂ ಸದ್ದು ಮಾಡಿರಲೇ ಇಲ್ಲ.

ಇದ್ದಕ್ಕಿದ್ದಂತೆ ಒಂದು ದಿನ ನಾಗೇಶನ ಮೊಬೈಲ್‌ನ ಇಎಂಐ ನಂಬರ್ ಮಂಡ್ಯದ ಕಟ್ಟೆದೊಡ್ಡಿ ಗ್ರಾಮದಲ್ಲಿ ಚಾಲನೆಯಲ್ಲಿರುವ ಸುಳಿವು ಪೊಲೀಸರಿಗೆ ಲಭಿಸಿತ್ತು. ಅದರ ಜಾಡು ಹಿಡಿದು ಹೊರಟ ಪೊಲೀಸರು ಗ್ರಾಮದಲ್ಲಿ ಹೊಟೇಲ್ ನಡೆಸಿಕೊಂಡಿದ್ದ ಶ್ರೀಧರ ಎಂಬಾತನ ಹೆಗಲಿಗೆ ಕೈ ಹಾಕಿದ್ದರು. ಖಾಕಿ ಮಂದಿ ವಿಚಾರಿಸುತ್ತಿದ್ದಂತೆಯೇ ಅದನ್ನು ಪುನೀತ ಎಂಬಾತನಿಂದ 8,500 ರೂ.ಗಳಿಗೆ ಖರೀದಿಸಿರುವುದಾಗಿ ಅನಾಯಾಸವಾಗಿ ಬಾಯ್ಬಿಟ್ಟಿದ್ದ. ಕೊಲೆಯಾಗಿ ಒಂದೂವರೆ ತಿಂಗಳಾದರೂ ನಾಗೇಶನ ಹಂತಕರು ಸಿಗದಿದ್ದರಿಂದ ತಾನು ಕೂಡ ಸೇಫ್ ಎಂದು ಭಾವಿಸಿದ್ದ ಪುನೀತ ಮೊಬೈಲ್‌ನಲ್ಲಿದ್ದ ಸಿಮ್ ಬಿಸಾಡಿ ಫೋನನ್ನು ಕಟ್ಟೆದೊಡ್ಡಿ ಶ್ರೀಧರನಿಗೆ ಮಾರಾಟ ಮಾಡಿದ್ದ. ಪುನೀತನನ್ನು ಠಾಣೆಗೆ ಕರೆತಂದ ಪೊಲೀಸರು ಮೊದಲೇ ಬೆದರಿ ಭಯದಲ್ಲಿದ್ದ ಪುನೀತನ ಬೆನ್ನಿಗೆ ನಾಲ್ಕು ಬಾರಿಸುತ್ತಿದ್ದಂತೆಯೇ ಆತ ಜಕ್ಕನಹಳ್ಳಿ ಮಂಜನ ಜೊತೆ ತಾನು, ಡಾಬಾ ಅನಿಲ, ರವಿ ಸೇರಿಕೊಂಡು ನಾಗೇಶನನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದ. ಪುನೀತನೇ ತಪ್ಪೊಪ್ಪಿಕೊಳ್ಳುತ್ತಿದ್ದಂತೆ ಹುಚ್ಚ ಮಂಜ ಹಾಗೂ ಡಾಬಾ ಅನಿಲನನ್ನು ಹೆಡೆಮುರಿಗೆ ಕಟ್ಟಿತಂದ ಪೊಲೀಸರು ಹಂತಕರನ್ನು ಕಂಬಿ ಹಿಂದಕ್ಕೆ ಗದುಮಿ ನಾಗೇಶನ ಆತ್ಮ ನಿಟ್ಟುಸಿರು ಬಿಡುವಂತೆ ಮಾಡಿದ್ದಾರೆ.

● ಮಂಡ್ಯ ನಾಗೇಶ್

ದೋಷಮುಕ್ತ ವಚನಸಂಪುಟಗಳಿಗಾಗಿ ಕಾತರ


ಹದಿನೈದು ವಚನಸಂಪುಟಗಳು, ಕನ್ನಡಿಗರಿಗೆ ಶತಮಾನದ ಕಾಣಿಕೆಗಳಾಗಿವೆ. ಡಾ.ಎಂ.ಎಂ.ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವ ಮತ್ತು ಚಿ.ಮೂ., ವಿದ್ಯಾಶಂಕರ್, ಎಸ್.ಶಿವಣ್ಣ ಹಾಗೂ ಸಿ.ಪಿ.ಕೆ ಅವರ ಸದಸ್ಯತ್ವದ ಮಂಡಲಿಯಲ್ಲಿ ಎಂ.ಎಂ.ಕಲಬುರ್ಗಿ (2), ಎಸ್.ವಿದ್ಯಾಶಂಕರ (2), ವೀರಣ್ಣ ರಾಜೂರ (5), ಬಿ.ವಿ.ಮಲ್ಲಾಪುರ (2), ಬಿ.ಆರ್.ಹಿರೇಮಠ (2), ಎಸ್.ಶಿವಣ್ಣ (1) ಮತ್ತು ಎನ್.ಜಿ.ಮಹಾದೇವಪ್ಪ (1) ಅವರು ಸೇರಿ ಒಟ್ಟು 15 ವಚನಸಂಪುಟಗಳನ್ನು ಸಂಪಾದಿಸಿದ್ದು ಚಾರಿತ್ರಿಕ ಘಟನೆಯಾಗಿದೆ. ಅದಕ್ಕಾಗಿ ಕನ್ನಡಿಗರೆಲ್ಲ ಅವರಿಗೆ ಮತ್ತು ಪ್ರಕಟಿಸಿದ ಪ್ರಾಧಿಕಾರಕ್ಕೆ ಕೃತಜ್ಞರಾಗಿದ್ದಾರೆ.

ಮೊದಲ ನಾಲ್ಕು ಸಂಪುಟಗಳು ಬಸವಣ್ಣ, ಅಲ್ಲಮ ಪ್ರಭು, ಚೆನ್ನಬಸವಣ್ಣ ಮತ್ತು ಸಿದ್ಧರಾಮೇಶ್ವರರಿಗೆ ಸಂಬಂಧಿಸಿವೆ. ಐದನೇ ಸಂಪುಟ ಅಕ್ಕಮಹಾದೇವಿ ಸೇರಿದಂತೆ ಎಲ್ಲ ವಚನಕಾರ್ತಿಯರ ವಚನಗಳನ್ನು ಒಳಗೊಂಡಿದೆ. ಆರರಿಂದ ಒಂಭತ್ತು ಸಂಪುಟಗಳು ಬಸವಣ್ಣನವರ ಸಮಕಾಲೀನ ವಚನಕಾರರ ವಚನಗಳನ್ನು ಒಳಗೊಂಡಿವೆ. 10ರಿಂದ 14 ಸಂಪುಟಗಳು ಬಸವೋತ್ತರ ಯುಗದ ವಚನಕಾರರ ವಚನಗಳನ್ನು ಒಳಗೊಂಡಿವೆ. 15ನೇ ಸಂಪುಟ ವಚನ ಪರಿಭಾಷಾ ಕೋಶವಾಗಿದೆ.

1993ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮುದ್ರಣಗೊಂಡ ಸಂಪುಟಗಳಲ್ಲಿ ಬಸವಯುಗದ 211 ವಚನಕಾರರ 14,435 ವಚನಗಳಿವೆ. ವಚನಕಾರರಲ್ಲಿ 125 ಪುರುಷರು, 32 ಮಹಿಳೆಯರು (ಒಟ್ಟು 35 ವಚನಕಾರ್ತಿಯರಲ್ಲಿ ಇಬ್ಬರು ಅಜ್ಞಾತ ವಚನಕಾರ್ತಿಯರು ಹಾಗೂ ಒಬ್ಬರು ಬಸವೋತ್ತರ ಯುಗದ ವಚನಕಾರ್ತಿ) ಮತ್ತು 54 ಮಂದಿ ಅಜ್ಞಾತ ವಚನಕಾರರಿದ್ದಾರೆ. ಬಸವೋತ್ತರ ಯುಗದ 31 ಮಂದಿ ವಚನಕಾರರ 6,591 ವಚನಗಳಿವೆ. ಒಟ್ಟು 21,026 ವಚನಗಳು ಮೊದಲ ಮುದ್ರಣದ ಸಂಪುಟ ಗಳಲ್ಲಿವೆ. 15ನೇ ಸಂಪುಟವಾದ ವಚನ ಪರಿಭಾಷಾ ಕೋಶವನ್ನು ಎಸ್.ವಿದ್ಯಾಶಂಕರ ಅವರು ರಚಿಸಿದ್ದಾರೆ.

2001ರಲ್ಲಿ ಮುದ್ರಣಗೊಂಡ ಪರಿಷ್ಕೃತ ವಚನಸಂಪುಟಗಳಲ್ಲಿ ಬಸವಯುಗದ 212 ವಚನಕಾರರ 14,966 ವಚನಗಳಿವೆ. ವಚನಕಾರರಲ್ಲಿ 125 ಪುರುಷರು, 32 ಮಹಿಳೆಯರು ಮತ್ತು 54 ಮಂದಿ ಅಜ್ಞಾತ ವಚನಕಾರರಿದ್ದಾರೆ. ಬಸವೋತ್ತರ ಯುಗದ 36 ವಚನಕಾರರ 6,761 ವಚನಗಳಿವೆ. ಎರಡನೇ ಮುದ್ರಣದ ಸಂಪುಟಗಳಲ್ಲಿ ಒಟ್ಟು 21,727 ವಚನಗಳಿವೆ. 15ನೇ ಸಂಪುಟವಾದ ವಚನ ಪರಿಭಾಷಾ ಕೋಶವನ್ನು ಎನ್.ಜಿ. ಮಹಾದೇವಪ್ಪ ಅವರು ರಚಿಸಿದ್ದಾರೆ.

ಬಸವೋತ್ತರ ಯುಗದ ವಚನಕಾರರಲ್ಲಿ ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆಯ ಒಂದು ವಚನ ಬಿಟ್ಟರೆ ಬೇರಾವ ವಚನಕಾರ್ತಿಯರು ಮತ್ತು ಕಾಯಕಜೀವಿಗಳು ವಚನಗಳನ್ನು ಬರೆದ ದಾಖಲೆಗಳಿಲ್ಲ. 12ನೇ ಶತಮಾನದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಸಾಹಿತ್ಯ ರಚನೆಯಾಗದ ಸಂದರ್ಭದಲ್ಲಿ ಇಷ್ಟೊಂದು ವಚನಕಾರರು ಮತ್ತು ವಚನಕಾರ್ತಿಯರು ವಚನ ರಚನೆ ಮಾಡಿದ್ದು ಐತಿಹಾಸಿಕ ಸಾಧನೆಯಾಗಿದೆ. ಈ ವಚನಕಾರರು ಮತ್ತು ವಚನಕಾರ್ತಿಯರಲ್ಲಿ ಬಹುಪಾಲು ಮಂದಿ ಕಾಯಕಜೀವಿಗಳಾಗಿರುವುದು ವಿಶೇಷವಾಗಿದೆ. ನಂತರದ ಶತಮಾನಗಳಲ್ಲಿ ಮಹಿಳೆಯರು ಮತ್ತು ಕಾಯಕಜೀವಿಗಳು ವಚನಚಳವಳಿಯಿಂದ ದೂರಾಗಿದ್ದಾರೆ. ಲಿಂಗಾಯತವು ತನ್ನ ಚಳವಳಿಯ ಗುಣವನ್ನು ಕಳೆದುಕೊಂಡು, ಸಾಂಸ್ಥಿಕ ಧರ್ಮವಾಗಿದ್ದರ ಪರಿಣಾಮವಿದು.



ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸಿರುವ ಮೊದಲನೇ ಮುದ್ರಣದ ಪ್ರತಿ

ವಚನಸಂಪುಟಗಳ ಮೂರನೇ ಮುದ್ರಣಕ್ಕೆ ಹೋಗುವ ಮುನ್ನ ಎದುರಿಸಬೇಕಾದ ಸವಾಲುಗಳ ಕಡೆಗೆ ವಚನತಜ್ಞರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗಮನ ಹರಿಸುವುದು ಅವಶ್ಯವಾಗಿದೆ. ಇಲ್ಲದಿದ್ದರೆ ವಚನಸಂಪುಟಗಳಲ್ಲಿನ ಗಂಭೀರ ದೋಷಗಳು ಮುಂದುವರಿಯುತ್ತಲೇ ಹೋಗುವವು. ವಚನಸಂಪುಟಗಳ ಪ್ರಕಟಣೆಗೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳು ನಮ್ಮ ಮುಂದೆ ಇವೆ. ಅವುಗಳ ಕಡೆಗೆ ಗಮನ ಹರಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಕೆಲವೊಂದು ವಚನಗಳು ಬಿಟ್ಟುಹೋಗಿವೆ. ಅವುಗಳನ್ನು ಬಿಟ್ಟ ಕಾರಣಗಳನ್ನು ಕಂಡುಕೊಳ್ಳಬೇಕು. ಸಂಶೋಧನೆಯಲ್ಲಿ ಆಸಕ್ತಿಯುಳ್ಳ ಯುವಪೀಳಿಗೆಗೆ ಪ್ರಕ್ಷಿಪ್ತ ವಚನಗಳು ಕೂಡ ಸಿಗುವ ವ್ಯವಸ್ಥೆ ಮಾಡಬೇಕು. ಪ್ರಕ್ಷಿಪ್ತ ವಚನಗಳನ್ನು ರಚಿಸುವ ಅನಿವಾರ್ಯತೆ ಏಕೆ ಉಂಟಾಯಿತು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯವಾಗಿದೆ.

12ನೇ ಶತಮಾನದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಶರಣರ ಮೇಲೆ ದಾಳಿ ನಡೆಸಿ ವಚನಕಟ್ಟುಗಳನ್ನು ಸುಟ್ಟ ಕಾರಣ ಬಹಳಷ್ಟು ವಚನಗಳನ್ನು ಕಳೆದುಕೊಳ್ಳಬೇಕಾಯಿತು. ದಾಳಿಯ ನಂತರ ಲಿಂಗವಂತರು ಚೆಲ್ಲಾಪಿಲ್ಲಿಯಾದ ಕಾರಣ ಅಳಿದುಳಿದ ವಚನ ಕಟ್ಟುಗಳನ್ನು ಕೂಡ ಸುರಕ್ಷಿತವಾಗಿ ಕಾಯ್ದಿಡಲಿಕ್ಕಾಗಲಿಲ್ಲ, ಕಲ್ಯಾಣ ಹತ್ಯಾಕಾಂಡದ ಸಂದರ್ಭದಲ್ಲಿ ವಚನಕಟ್ಟುಗಳನ್ನು ಹೊತ್ತುಕೊಂಡು ದುರ್ಗಮ ಉಳವಿಯ ಕಡೆಗೆ ಹೊರಟ ಶರಣರು ದಾರಿಮಧ್ಯೆ ನಿಷ್ಠಾವಂತರಿಗೆ ವಚನಕಟ್ಟುಗಳನ್ನು ಕೊಡುತ್ತ ಬಂದರು. ಆದರೆ 12ನೇ ಶತಮಾನದ ವಚನಕಟ್ಟುಗಳು ಇಲ್ಲಿಯವರೆಗೂ ಸಿಕ್ಕಿಲ್ಲ, ಇನ್ನು ಮುಂದೆ ಸಿಗುವ ಸಾಧ್ಯತೆಗಳೂ ಇಲ್ಲ, 19ನೇ ಶತಮಾನದಲ್ಲಿ ಮರಿಶಂಕರದ್ಯಾವರಿಗೆ ಸಿಕ್ಕ ಬಸವಣ್ಣನವರ ವಚನಗಳ ಕಟ್ಟಾಗಲಿ, 20ನೇ ಶತಮಾನದಲ್ಲಿ ಫ.ಗು.ಹಳಕಟ್ಟಿಯವರು ಮುಂತಾದವರಿಗೆ ಸಿಕ್ಕ ವಚನಕಟ್ಟುಗಳಾಗಲಿ 15ನೇ ಶತಮಾನ ಮತ್ತು ತದನಂತರ ಪ್ರತಿ ಮಾಡಿದವುಗಳಾಗಿವೆ. ಲಿಂಗಾಯತವು ಸಾಂಸ್ಥಿಕ ಧರ್ಮವಾಗಿ ವೀರಶೈವದ ಹಿಡಿತಕ್ಕೆ ಬಂದನಂತರ 12ನೇ ಶತಮಾನದ ವಚನಗಳು ಬದಲಾವಣೆಗೆ ಒಳಗಾಗಿರಬಹುದು. ಮಠಗಳಲ್ಲಿನ ಲಿಪಿಕಾರರು ಹಳೆಯ ವಚನಕಟ್ಟುಗಳನ್ನು ಮುಂದಿಟ್ಟುಕೊಂಡು ತಾಡೋಲೆ ಪ್ರತಿಗಳನ್ನು ತಯಾರಿಸುವಾಗ ವೀರಶೈವಕ್ಕೆ ಮಾರುಹೋದ ಸ್ವಾಮಿಗಳ ಸಲಹೆಗಳ ಪ್ರಕಾರ ಕೆಲವೊಂದು ಕಡೆ ಲಿಂಗಾಯತ/ಲಿಂಗವಂತ ಪದಗಳನ್ನು ತೆಗೆದು ಅವುಗಳ ಜಾಗದಲ್ಲಿ ವೀರಶೈವ ಪದ ಸೇರಿಸಿರುವ ಸಾಧ್ಯತೆಗಳಿವೆ. 12ನೇ ಶತಮಾನ ವಚನ ಚಳವಳಿಯ ಯುಗವಾಗಿದ್ದರೆ 15 ಮತ್ತು 16ನೇ ಶತಮಾನಗಳು ವಚನ ಸಂಕಲನದ ಯುಗಗಳಾಗಿವೆ. ಈ ಸಂದರ್ಭದಲ್ಲಿ ಮಹಾಮನೆಯ ವ್ಯವಸ್ಥೆ ಹೋಗಿ ಮಠೀಯ ವ್ಯವಸ್ಥೆ ಬಂದ ಕಾರಣ ಕಾಲಕ್ಕೆ ತಕ್ಕಂತೆ ವಚನಗಳಲ್ಲಿ ಅನೇಕ ರೀತಿಯ ಮಾರ್ಪಾಡುಗಳಾಗಿರುವ ಸಾಧ್ಯತೆಗಳು ಹೆಚ್ಚಾಗಿವೆ.

"ಚಾತುರ್ವರ್ಣಾತೀತನೇ ವೀರಶೈವ" ಎಂದು ಸಿದ್ಧರಾಮೇಶ್ವರರ ವಚನದಲ್ಲಿ ಬರುತ್ತದೆ. ವೀರಶೈವ ಎಂದುಕೊಳ್ಳುವ ಪಂಚಾಚಾರ್ಯರು ವೇದಘೋಷಗಳೊಂದಿಗೆ ವೇದಿಕೆ ಹತ್ತುತ್ತಾರೆ. ವಚನಗಳಿಗಿಂತಲೂ ಸಂಸ್ಕೃತ ಶ್ಲೋಕಗಳೇ ಅವರಿಗೆ ಪ್ರಿಯವಾಗಿವೆ. ಶರಣರು ನಿರಾಕರಿಸಿದ ಸ್ಥಾವರಪೂಜೆಯನ್ನೂ ಮಾಡುತ್ತಾರೆ. ಅವರು ತಿರಸ್ಕರಿಸಿದ ಗುಡಿಗಳಿಗೆ ಹೋಗುತ್ತಾರೆ. ತಾವು ಬಸವ ಪರಂಪರೆಯ ವಿರಕ್ತ ಸ್ವಾಮಿಗಳಿಗಿಂತ ದೊಡ್ಡವರು ಎಂಬುದನ್ನು ಎತ್ತರದ ಕುರ್ಚಿಗಳ ಮೇಲೆ ಕೂಡುವುದರ ಮೂಲಕ ತೋರಿಸಿಕೊಳ್ಳುತ್ತಾರೆ. ಇವೆಲ್ಲ ಚಾತುರ್ವರ್ಣಕ್ಕೆ ಸಂಬಂಧಿಸಿದ ಅಂಶಗಳೇ ಆಗಿವೆ. ಈ ವೀರಶೈವರು ಅದು ಹೇ[illegible] ಚಾತುರ್ವರ್ಣಾತೀತರಾಗುತ್ತಾರೆ? 15ನೇ ಶತಮಾನದಿಂ[illegible] ಆರಂಭವಾದ ಜಾತಿಜಂಗಮರ ಕುತಂತ್ರದಿಂದಾಗಿ "ಚಾತುರ್ವ[illegible] ರ್ಣಾತೀತನೇ ಲಿಂಗವಂತ" ಎಂಬುದು "ಚಾತುರ್ವರ್ಣಾ[illegible] ತೀತನೇ ವೀರಶೈವ" ಎಂದು ಬದಲಾಗಿರುವ ಸಾಧ್ಯತೆಗಳಿವ[illegible]

ಶರಣರು ವರ್ಣ ವ್ಯವಸ್ಥೆಯನ್ನು ವಿರೋಧಿಸಿದ್ದಾರೆ "ವೇದಗಳ ಹಿಂದೆ ಹರಿಯದಿರು" ಎಂದು ಆದಯ[illegible] ಎಚ್ಚರಿಸುತ್ತಾರೆ. "ವೇದ ಶಾಸ್ತ್ರ ಆಗಮಂಗಳನೋದಿದವರು [illegible] ಹಿರಿಯರೆ?" ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ "ಸಂಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು[illegible] ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ ಅದೇತರ ನುಡಿ[illegible] ಎಂದು ನಗೆಯ ಮಾರಿತಂದೆ ಟೀಕಿಸುತ್ತಾರೆ. "ಹಿರಿದ[illegible] ಕಿರಿದು ಎಂಬ ಶಬ್ದವಡಗಿದಡೆ ಆತನೆ ಶರಣ" ಎಂದು[illegible] ಅಲ್ಲಮಪ್ರಭುಗಳು ತಿಳಿಸುತ್ತಾರೆ. ಹೀಗೆ ತಾರತಮ್ಯವನ್ನು[illegible] ತಿರಸ್ಕರಿಸುವವರೇ ಶರಣರು. ಆದ್ದರಿಂದ ಶರಣ ಪರಂಪರೆಯ[illegible] ಲಿಂಗವಂತರು ಸಹಜವಾಗಿಯೇ ಚಾತುರ್ವರ್ಣಾತೀ[illegible] ರಾಗಿರುತ್ತಾರೆ.

ವಚನಗಳಲ್ಲಿ ಉದ್ಧರಿಸಿದ ಅನೇಕ ಸಂಸ್ಕೃತ ವಾಕ್ಯಗಳ[illegible] ಶರಣರ ವಿಚಾರಗಳ ಮೇಲೆ ಪ್ರಭುತ್ವ ಸಾಧಿಸು[illegible] ರೀತಿಯಲ್ಲಿವೆ. ಇವು ಬಸವಣ್ಣನವರ ಷಟ್‌ಸ್ಥಲ[illegible] ವಚನಗಳಲ್ಲೂ ಸೇರಿವೆ. ಶರಣರು ವೇದಾಗಮಗಳನ್ನು[illegible] ತಿರಸ್ಕರಿಸಿದರೂ ಅವುಗಳಲ್ಲಿನ ಶ್ಲೋಕಗಳು ವಚನಗಳ[illegible] ಹೇಗೆ ಸೇರ್ಪಡೆಯಾದವು ಎಂಬುದರ ಬಗ್ಗೆ ಗಂಭೀ[illegible] ಚರ್ಚೆಯಾಗಬೇಕಿದೆ. "ವಚನಗಳಲ್ಲಿನ ಸಂಸ್ಕೃತ ವಾಕ್ಯಗಳ[illegible] ರೇಷ್ಮೆ ಮೊಟ್ಟೆಗಳ ಮೇಲಿನ ಊಜಿ ನೊಣಗಳಿದ್ದಂತೆ[illegible] ಎಂದು ಬೇಲಿಮಠದ ಸ್ವಾಮಿಗಳು ಹೇಳುವುದು[illegible] ಸಮಂಜಸವಾಗಿದೆ. ವಚನಗಳು ಪ್ರಭಾವಶಾಲಿಯಾಗಿದ್ದ[illegible] ಸಹಿಸಿಕೊಳ್ಳದ ಪಟ್ಟಭದ್ರ ಹಿತಾಸಕ್ತಿಗಳು ಕಳೆದ ಐದಾ[illegible] ಶತಮಾನಗಳ ಅವಧಿಯಲ್ಲಿ ಅದೆಷ್ಟೋ ವಚನಗಳನ್ನು[illegible] ತಿದ್ದಿದ್ದಾರೆ, ಸಾಕಷ್ಟು ವಚನಗಳಲ್ಲಿ ಸಂಸ್ಕೃತ ವಾಕ್ಯಗಳನ್ನು[illegible] ಸೇರಿಸುವುದರ ಮೂಲಕ ಈ ವಿಚಾರಗಳೆಲ್ಲ ಮೊದಲ[illegible] ವೇದ, ಉಪನಿಷತ್ ಮತ್ತು ಶೈವಾಗಮಗಳ[illegible] ಇದ್ದಂಥವುಗಳಾಗಿವೆ ಎಂಬ ಸಂಶಯ ಪ್ರಬಲವಾಗಿ[illegible] ಈ ಸಂಸ್ಕೃತ ವಾಕ್ಯಗಳನ್ನು ಬಿಟ್ಟು ಓದಿದರೂ ವಚನಗ[illegible] ಅರ್ಥಕ್ಕೆ ಭಂಗ ಬರುವುದಿಲ್ಲ. ತಮ್ಮ ವಾದ[illegible] ಸಹಕಾರಿಯಾಗುವಂಥ ಕೆಲವೊಂದು ಸಂಸ್ಕೃತವಾಕ್ಯಗಳನ್ನು[illegible] ಶರಣರು ಉದ್ಧರಿಸಿರಬಹುದು. ಆದರೆ ತಮ್ಮ ವಚನಗಳ[illegible] ಸಂಸ್ಕೃತದ ವಾಕ್ಯಗಳನ್ನು ಉದ್ಧರಿಸುವ ಮೂಲಕ ಯಾವುದ[illegible] ವಿಚಾರವನ್ನು ಮನವರಿಕೆ ಮಾಡಿಕೊಡುವಂಥ ದುಸ್ಥಿ[illegible] ಅವರಿಗೆ ಬಂದಿರಲಿಲ್ಲ. ನೂರಾರು ವಚನಗಳಲ್ಲಿ ಸಂಸ್ಕೃತ [illegible] ವಾಕ್ಯಗಳನ್ನು ಸೇರಿಸಲಾಗಿದೆ. ಈ ಸಮಸ್ಯೆ ಕುರಿತು ಕೂಲಂಕ[illegible] ಚರ್ಚೆಯಾಗಿ ಯಾವುದನ್ನು ತೆಗೆಯಬೇಕು, ಯಾವುದನ್ನು[illegible] ಉಳಿಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸಬೇಕಿ[illegible] 2014ನೇ ಏಪ್ರಿಲ್ 18, 19 ಮತ್ತು 20ರಂದು ಅಖಿ[illegible] ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟ[illegible] ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಬೆಂಗಳೂರಿನಲ್ಲಿ ನಡೆ[illegible] 'ವಚನ ಸಾಹಿತ್ಯ: ಪರ್ಯಾಯ ಸಂಸ್ಕೃತಿ' ಸಮಾವೇಶದ[illegible] ಡಾ.ಷ.ಶೆಟ್ಟರ್, ಡಾ.ಎಂ.ಎಂ.ಕಲಬುರ್ಗಿ, ಡಾ.ಸಿ.ವೀರ[illegible] ಗೊರುಚ ಮುಂತಾದವರು ವಚನಗಳನ್ನು ಸಂಸ್ಕೃತ ವಾ[illegible] ಗಳಿಂದ ಮುಕ್ತಗೊಳಿಸುವುದರ ಬಗ್ಗೆ ಒಲವು ತೋರಿದ[illegible]

ಬಸವಣ್ಣನವರ ಷಟ್‌ಸ್ಥಲದ ವಚನಗಳಲ್ಲಿ ಕೂಡ ಸಂಸ್ಕೃತ[illegible] ವಾಕ್ಯಗಳು ಸೇರಿಕೊಂಡಿವೆ.

"ವೇದಾದಿ ನಾಮ ನಿರ್ನಾಮಂ ಮಹತ್ತತ್ವಂ ಮದೀಶ್ವ[illegible]
ಗುರೂಕ್ತ ಮಂತ್ರ ಮಾರ್ಗೇಣ ಇಷ್ಟಲಿಂಗಂ ತು ಶಾಂ[illegible]
ಎಂದುದಾಗಿ, ವಚನಪಾತವೆನ್ನ, ವಚನದೋಷಂಗಳ[illegible]
ಕಾಡಿ ಕಾಡಿ ಕೆಡಸಿಹವೆನ್ನ, ಕೂಡಲಸಂಗಮದೇವ[illegible]
'ಅಹಂ' ಎಂಬ ಅಹಂಕಾರವೆನ್ನ."

(ಡಾ.ಎಂ.ಎಂ.ಕಲಬುರ್ಗಿ ಅವರು ಸಂಪಾದಿಸಿ[illegible] 'ಬಸವಣ್ಣನವರ ವಚನಸಂಪುಟ'ದಲ್ಲಿನ ಷಟ್‌ಸ್ಥಲ ವಿಭಾಗ[illegible] 252ನೇ ವಚನ)

ಎಂಬ ವಚನದಲ್ಲಿನ ಸಂಸ್ಕೃತ ಶ್ಲೋಕದ ಉದ್ಧ[illegible] ಆಘಾತಕಾರಿಯಾಗಿದೆ. ಈ ಶ್ಲೋಕ ಶಾಕಟೀ[illegible] ಆಗಮದೆಂದು ಇಮ್ಮಡಿ ಶಿವಬಸವಸ್ವಾಮಿಗಳು ತಿಳಿಸಿದ್ದಾ[illegible] "ಪಾರ್ವತಿಯೆ ಮಹತ್ ತತ್ವರೂಪನಾದ ಮಹೇಶ್ವರ[illegible] ವೇದಾದಿಗಳಲ್ಲಿ ಹೆಸರುಗಳುಳ್ಳವನಾದರೂ ನಾಮರ[illegible] ರಹಿತನಾದ ಅವನೇ ಗುರೂಕ್ತವಾದ ಮಂತ್ರ ಮಾರ್ಗದಿ[illegible] ಇಷ್ಟಲಿಂಗ ರೂಪದಲ್ಲಿದ್ದಾನೆ" ಎಂಬುದು ಇ[illegible] ಭಾವಾರ್ಥವಾಗಿದೆ ಎಂದು ಅವರು ಬರೆದಿದ್ದಾರೆ.

"ಮಹತ್ ತತ್ವವು ವೇದಾದಿಗಳಿಗೆ ಆದಿಯಾಗಿ[illegible]

ಶ್ರೀ ಅಶೋಕ್ ಖೇಣಿ, ಶಾಸಕರು ಇವರ ಹಕ್ಕುಚ್ಯುತಿಯಾಗುವ ಪ್ರಕಟಣೆಯ ಕುರಿತು ಸ್ಪಷ್ಟೀಕರಣ

ಪತ್ರಿಕೆಯ ಅಕ್ಟೋಬರ್ 2, 2013ರ ಸಂಚಿಕೆಯಲ್ಲಿ 'ಕಾರ್ಪೊರೇಟ್ ಪಾಲಿಟಿಕ್ಸ್ ಶುರು- ಗೆದ್ದ ಮರುಕ್ಷಣವೇ ಬೀದರ್ ಮರೆತ ಖೇಣಿ' ಎಂಬ ಲೇಖನ ಪ್ರಕಟವಾಗಿತ್ತು.

ಸದರಿ ಲೇಖನದಲ್ಲಿ ಅಶೋಕ್ ಖೇಣಿಯನ್ನು 'ನೈಸ್ ಖದೀಮ ಅಶೋಕ್ ಖೇಣಿ' ಮತ್ತು 'ಜೋಕರ್ ಖೇಣಿ' ಎಂದು ಕರೆಯಲಾಗಿತ್ತು, ಜೊತೆಗೆ ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ 'ಪ್ರತಿ ಓಟಿಗೂ ತಲಾ ಐದು ಸಾವಿರದಂತೆ ರೊಕ್ಕ ಹಂಚಿದ್ದ ಖೇಣಿ' ಎಂದೂ ಬರೆಯಲಾಗಿತ್ತು.

ಈ ಲೇಖನದಿಂದಾಗಿ ಈಗ ವಿಧಾನಸಭೆಯ ಶಾಸಕ ಆಗಿರುವ ಅಶೋಕ್ ಖೇಣಿ ತನ್ನ ಶಾಸಕರ ಸ್ಥಾನಕ್ಕೆ ಚ್ಯುತಿ ಆಗಿದೆ ಎಂದು ಶಾಸಕರ ಹಕ್ಕುಚ್ಯುತಿ ಸಮಿತಿಗೆ ದೂರಿದ್ದರು.

ಶಾಸಕರುಗಳಿಗೆ ಹಕ್ಕುಚ್ಯುತಿಯಾಗುವ ಯಾವುದೇ ಪ್ರಕಟಣೆಗಳನ್ನು ಮೇಲಿಂದ ಮೇಲೆ ಪ್ರಕಟಿಸಿ ಕ್ಷಮೆ ಕೇಳುವ ಪರಿಸ್ಥಿತಿಯನ್ನು ಇನ್ನು ಮುಂದೆ ತಂದುಕೊಳ್ಳುವುದಿಲ್ಲ.

ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ 'ಪ್ರತಿ ಓಟಿಗೆ ತಲಾ ಐದು ಸಾವಿರದಂತೆ ರೊಕ್ಕ ಹಂಚಿದ್ದ ಖೇಣಿ' ಎಂದು ಸತ್ಯಕ್ಕೆ ದೂರವಿರುವ ಸಂಗತಿಗಳನ್ನು ಪ್ರಕಟಿಸಿ ಪ್ರಮಾದವನ್ನು ಎಸಗಿದ್ದಕ್ಕೆ ಕ್ಷಮೆಯಾಚಿಸುತ್ತೇವೆ.

- ಸಂ

ಅದು ನಾಮರಹಿತವಾದಂಥ ಶಾಶ್ವತ ತತ್ತ್ವ. ಅದುವೆ ಗುರುವಿನ ಅನುಗ್ರಹದಿಂದಾಗಿ ಶಾಶ್ವತ ತತ್ತ್ವವಾಗಿ ಬಂದಿದೆ" ಎಂಬುದು ಈ ಶ್ಲೋಕದ ಸ್ಥೂಲವಾದ ಅರ್ಥ ಎಂದು ಡಾ.ಎಚ್.ತಿಪ್ಪೇರುದ್ರಸ್ವಾಮಿ ಅವರು ಬರೆದಿದ್ದಾರೆ.

"ಬಸವಣ್ಣನವರು ವಚನದ ಆರಂಭದಲ್ಲೇ ಶಿವನು ಗಿರಿಜೆಗೆ ಇಷ್ಟಲಿಂಗದ ಮಹತ್ವ ಸಾರುವ ಒಂದು ಸಂಸ್ಕೃತ ಶ್ಲೋಕವನ್ನು ಉಲ್ಲೇಖಿಸಿರುವರು. ಈ ಈಶ್ವರ ತತ್ತ್ವವು ಮಹತ್ ತತ್ತ್ವವಾಗಿದ್ದು ಅದು ವೇದ, ಆಗಮ, ಉಪನಿಷತ್ತುಗಳಿಗೆ ಆದಿಯಾಗಿದೆ. ಅದು ನಾಮರಹಿತವಾದಂಥ ಶಾಶ್ವತ ತತ್ತ್ವ. ಅದು ಗುರುವಿನ ಅನುಗ್ರಹದಿಂದ ಮಂತ್ರರೂಪದಲ್ಲಿ ಇಷ್ಟಲಿಂಗವಾಗಿ ಬಂದಿದೆ ಎಂಬುದು ಶ್ಲೋಕದ ಅರ್ಥ" ಎಂದು ಎಸ್.ವಿದ್ಯಾಶಂಕರ ಅವರು ವಿವರಿಸಿದ್ದಾರೆ.

ಡಾ.ಆರ್.ಸಿ.ಹಿರೇಮಠ ಅವರು ಸಂಪಾದಿಸಿದ ಬಸವಣ್ಣನವರ ವಚನಗಳ ಗ್ರಂಥದಲ್ಲಿನ ಆ ವಚನದಲ್ಲಿ ಕೂಡ ಇದೇ ಶ್ಲೋಕವಿದೆ. "ಬಸವಣ್ಣನವರು ಇಷ್ಟಲಿಂಗದ ಜನಕರಲ್ಲ ಎಂಬುದು ಇದರಿಂದ ಸಾಬೀತಾಗುತ್ತದೆ" ಎಂದು ಬಸವ ವಿರೋಧಿಗಳು ಪ್ರತಿಪಾದಿಸಲು ಈ ಶ್ಲೋಕ ಮತ್ತು ಎಲ್ಲ ವಿವರಣೆಗಳು ಸಹಕಾರಿಯಾಗಿವೆ.

ಇವರೆಲ್ಲರಿಗಿಂತ ಮೊದಲು ಪ್ರೊ.ಶಿ.ಶಿ.ಬಸವನಾಳ ಅವರು ಬಸವಣ್ಣನವರ ಷಟ್‌ಸ್ಥಲದ ವಚನಗಳನ್ನು ಪ್ರಕಟಿಸಿದ್ದಾರೆ. ಆ ಗ್ರಂಥದಲ್ಲಿ 255ನೇ ವಚನ ಇದಾಗಿದೆ. ಆದರೆ ಅವರು ಬಳಸಿದ ಶ್ಲೋಕದಲ್ಲಿ "ಗುರೂಕ್ತ ಮಂತ್ರ ಮಾರ್ಗೇಣ ಇಷ್ಟಲಿಂಗಂ ತು ಶಾಂಕರಿ" ಬದಲಿಗೆ "ಗುರೂಕ್ತ ಮಂತ್ರ ಮಾರ್ಗೇಣ ಜಾತಮಿಷ್ಟಂ ತು ಶಾಂಕರಿ" ಎಂದಿದೆ. 'ಗುರು ಉಪದೇಶ ಮಾಡಿದ ಮಂತ್ರ ಮಾರ್ಗದಿಂದ ಇಷ್ಟವಾದ ಸುಖ ಪ್ರಾಪ್ತಿಯಾಗುವುದು' ಎಂಬುದು ಈ ಸಾಲಿನ ಅರ್ಥ ಎಂದು ಭೀಮಸೇನಾಚಾರರು ತಿಳಿಸುತ್ತಾರೆ. 'ಈ ವಾಕ್ಯದಲ್ಲಿ ಶಾಂಕರಿ ಎಂದರೆ ಪಾರ್ವತಿ ಅಲ್ಲ. ಶಂ ಎಂದರೆ ಸುಖ, ಶಾಂಕರಿ ಎಂದರೆ ಸುಖ ಕೊಡುವಂಥದ್ದು' ಎಂದು ಅವರು ವಿವರಿಸುತ್ತಾರೆ. ಇದುವೆ ಸರಿಯಾದ ಸಂಸ್ಕೃತ ವಾಕ್ಯ ಮತ್ತು ಅರ್ಥ ಎಂಬುದು ಮೇಲ್ನೋಟಕ್ಕೇ ಮನವರಿಕೆಯಾಗುವುದು. ಶಾಕಟೀಯ ಆಗಮದಲ್ಲಿ ಮೂಲ ವಾಕ್ಯ ಇದೇ ಆಗಿರಬೇಕು.

"ಜಾತಮಿಷ್ಟಂ ತು ಶಾಂಕರಿ" ಹೋಗಿ "ಇಷ್ಟಲಿಂಗಂ ತು ಶಾಂಕರಿ" ಹೇಗೆ ಆಯಿತು? ಶಾಕಟೀಯ ಆಗಮದಲ್ಲಿ "ಇಷ್ಟಲಿಂಗಂ ತು ಶಾಂಕರಿ" ಎಂದು ವಚನೋತ್ತರ ಯುಗದಲ್ಲಿ ಸೇರಿಸಿದ ನಂತರ, ಈ ವಚನದಲ್ಲಿ ಆ ತಿದ್ದುಪಡಿಯಾದ ಪದವನ್ನು ತುರುಕಲಾಯಿತು ಎಂಬುದು ಇದರಿಂದ ಸಾಬೀತಾಗುತ್ತದೆ. 'ಬಸವಣ್ಣನವರು ಇಷ್ಟಲಿಂಗ ಜನಕರಲ್ಲ' ಎಂದು ಪಟ್ಟಭದ್ರರು ಸಾಧಿಸಲು "ಇಷ್ಟಲಿಂಗಂ ತು ಶಾಂಕರಿ"ಯಂಥ ಒಂದೇ ಬದಲಾವಣೆ ಸಾಕು! ವಚನಗಳಲ್ಲಿನ ಇಂಥ ಅವಾಂತರಗಳನ್ನು ಸರಿಪಡಿಸಬೇಕಿದೆ. ಆಭಾಸವನ್ನುಂಟುಮಾಡುವ ಸಂಸ್ಕೃತ ಶ್ಲೋಕಗಳನ್ನು ಉಳಿಸಿಕೊಂಡು ಸಂಪುಟಗಳ ಮರುಮುದ್ರಣ ಮಾಡುವುದು ಬಸವಾದಿ ಶರಣರಿಗೆ ಮಾಡುವ ಅಪಮಾನ ಎಂದು ಹೇಳದೆ ಇರಲಿಕ್ಕಾಗದು.

ಸ್ವರವಚನಗಳೆಲ್ಲಿ?

ಸ್ವರವಚನಗಳು ಈ ಸಂಪುಟಗಳ ಭಾಗವಾಗಿಲ್ಲ. 'ಸ್ವರವಚನಗಳು ಮೌಲಿಕವಲ್ಲ' ಎಂದು ಪಂಡಿತರು ಭಾವಿಸುವುದು ಸರಿಯಲ್ಲ. ವಚನ ಚಳವಳಿಯ ಇತಿಹಾಸದ ಪುನಾರಚನೆಯಲ್ಲಿ ಅವುಗಳ ಪಾತ್ರವೂ ಇದೆ. ಆದ್ದರಿಂದ ಸ್ವರವಚನಗಳನ್ನು ಪ್ರತ್ಯೇಕವಾಗಿ ಪ್ರಕಟಿಸುವ ವ್ಯವಸ್ಥೆಯಾಗಬೇಕು.

"ನೋಡು ನೋಡು ನೋಡು ನೋಡು ನೋಡು ಲಿಂಗವೆ
ನೋಡು ಬಸವಯ್ಯನವರು ಮಾಡಿದಾಟವ //ಪ//

ಹರಳಯ್ಯ ಮಧುವಯ್ಯನವರಿಗೆ ಎಳೆಹೂಟೆ
ದುರುಳ ಬಿಜ್ಜಳನು ಕಟ್ಟಿದನೆಂದರೆ
ಇರಬಾರದಲ್ಲೀಗ ಶರಣರಿಗರುಹಿರೆಂ
ದರಸು ಬಸವರಾಜ ಪೇಳ್ದರಂತೆ.

ನುಡಿಯ ಲಾಲಿಸು ಬೇಗ ಕೆಡುವುದೀ ಕಲ್ಯಾಣ
ಒಡೆಯ ಸಂಗಮನೊಳು ಬೆರೆವರಂತೆ.
ತಡ ಮಾಡಬೇಡಿರಿ ಮಡದಿಯರಿಗರುಹಿರೆಂದು
ಒಡೆಯ ಬಸವರಾಜ ನುಡಿದರಂತೆ.

ಅಲ್ಲಿಗೆ ಎಮ್ಮನು ಬರಲು ಹೇಳಿದರಂತೆ
ಅಲ್ಲಿದ್ದ ಸಂಗಮನಿಲ್ಲಿಲ್ಲವೆ?
ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು
ಬಲ್ಲ ಮಹಾತ್ಮರಿಗಿದು ಗುಣವೆ?

ಅಪ್ಪ ಅಣ್ಣಯ್ಯಗಳೆನ್ನ ಕರೆಯ ಬಂದಿಹರು
ಕಪ್ಪಡಿ ಸಂಗಮನಾಥ ಕೇಳೋ
ಪುಷ್ಪಕ್ಕೆ ಪರಿಮಳವ ಬೆರೆದಂತೆ ಎನ್ನ
ನಪ್ಪಿದ ಲಿಂಗವೆ ಮಾತನಾಡೋ.

ಸಂಗನಬಸವನ ನಿರೂಪವ ತಾಳುತೆ
ಹಿಂಗದೆ ಕರವೆತ್ತಿ ನಮಿಸುತಲಿ
ಸಂಗಮನಾಥನೆ ಈತನೆಂದು ಎ
ನ್ನಂಗಯ್ಯ ಲಿಂಗವೆ ಮಾತನಾಡೋ."

-ನೀಲಮ್ಮ

ಕಲ್ಯಾಣದಲ್ಲಿ ಶರಣರ ಮೇಲೆ ದಾಳಿ ನಡೆದ ಸಂದರ್ಭದ ವಿವರಗಳನ್ನು ಈ ಸ್ವರವಚನ ಒಳಗೊಂಡಿದೆ. ಎಳೆಹೂಟೆ ಶಿಕ್ಷೆ ವಿಧಿಸಿದ್ದು ಹರಳಯ್ಯ ಮತ್ತು ಮಧುವರಸರಿಗೆ ಮಾತ್ರ. ಆದರೆ ಹರಳಯ್ಯನವರ ಮಗ ಶೀಲವಂತನಿಗೂ ಎಳೆಹೂಟೆ ಶಿಕ್ಷೆ ವಿಧಿಸಿದ ವರ್ಣಚಿತ್ರಗಳು ಎಲ್ಲೆಡೆ ಕಂಡುಬರುತ್ತಿವೆ. ಬಸವಣ್ಣನವರು ಕಲ್ಯಾಣದ ಹತ್ಯಾಕಾಂಡಕ್ಕೆ ಮೊದಲೇ ಗಡಿಪಾರು ಶಿಕ್ಷೆಗೆ ಒಳಗಾದನಂತರ ಕಲ್ಯಾಣದಲ್ಲಿ ಶಾಂತಿ ನೆಲೆಸಬೇಕೆಂಬ ಮಹೋದ್ದೇಶದಿಂದ ಕೂಡಲಸಂಗಮಕ್ಕೆ ಬಂದಿದ್ದರೂ ಕಲ್ಯಾಣದ ವಿವರಗಳು ಅವರಿಗೆ ಶೀಘ್ರ ತಲುಪುತ್ತಿದ್ದವು. ಸಾವುನೋವುಗಳನ್ನು ತಪ್ಪಿಸುವುದಕ್ಕಾಗಿ ಬಸವಣ್ಣನವರು ಶರಣರಿಗೆ ಕಲ್ಯಾಣ ತ್ಯಜಿಸಲು ಸಲಹೆ ನೀಡಿದರು. ಶರಣರು ಇಚ್ಛಾಮರಣಿಗಳು. ಶಿವಯೋಗಿಗಳಾಗಿದ್ದ ಅವರು ಧ್ಯಾನಸ್ಥ ಸ್ಥಿತಿಯಲ್ಲೇ ಇಹಲೋಕ ತ್ಯಜಿಸುವ ಯೋಗತಂತ್ರವನ್ನು ಅರಿತವರಾಗಿದ್ದರು. ಇದನ್ನು ಸಂಜೀವಿನಿ ಸಮಾಧಿ ಅಥವಾ ಜೀವಂತ ಸಮಾಧಿ ಎಂದು ಕರೆಯಲಾಗುತ್ತದೆ. ಇಚ್ಛಾಮರಣ ಹೊಂದಲು ನಿರ್ಧರಿಸಿದ ಶರಣರು ಗುಹೆಯ ಒಳಗೆ ಹೋಗಿ ಧ್ಯಾನಸ್ಥರಾಗುತ್ತಿದ್ದರು. ಬಸವಣ್ಣನವರು ತಮ್ಮ ಇಚ್ಛಾಮರಣದ ಕುರಿತು ಮಡದಿಯರಿಗೆ ತಿಳಿಸಲು ಹೇಳಿದರು. ಕಲ್ಯಾಣವು ಸಂಪೂರ್ಣವಾಗಿ ಹಾಳಾಗಿ ಶರಣರು ದಿಕ್ಕಾಪಾಲಾಗಿ ಚೆದುರಿದ ನಂತರ ಅವರು ಈ ನಿರ್ಧಾರವನ್ನು ಕೈಗೊಂಡರು. ಅಪ್ಪಣ್ಣನವರು ಬಸವಣ್ಣನವರ ಆಪ್ತರಾಗಿದ್ದರು. ಬಸವಣ್ಣನವರ ಮಡದಿ ನೀಲಮ್ಮಗೆ ಅವರು ಬಸವಸಂದೇಶ ತಲುಪಿಸಿದರು. ಹೀಗೆ, ಒಂದೇ ಸ್ವರವಚನ ಎಷ್ಟೊಂದು ಐತಿಹಾಸಿಕ ವಿವರಗಳನ್ನು ಒಳಗೊಂಡಿದೆ.

ಶಕಟರೇಫೆ ಎಲ್ಲಿ?

ಈ ವಚನ ಸಂಪುಟಗಳನ್ನು 'ಜನಪ್ರಿಯ ಆವೃತ್ತಿ' ಎಂದು ಪ್ರಕಟಿಸಲಾಗಿದೆ. ಆದ್ದರಿಂದ ಶಕಟರೇಫೆ ತೆಗೆದು ಅವುಗಳ ಸ್ಥಾನದಲ್ಲಿ 'ರ' ಸೇರಿಸಲಾಗಿದೆ. ಜನರಿಗೆ ಅರ್ಥವಾಗಬೇಕೆಂಬ ಸದುದ್ದೇಶದಿಂದಲೇ ಈ ಬದಲಾವಣೆ ಮಾಡಲಾಗಿದೆ. ಆದರೆ ಇಂಥ ಪ್ರಸಂಗಗಳಲ್ಲಿ ವಚನಗಳ ಕೆಳಗೆ ಮೂಲ ಶಬ್ದಗಳನ್ನು ನಮೂದಿಸುವುದು ಅವಶ್ಯವಾಗಿದೆ.

ಅರಿವು ಶಬ್ದದಲ್ಲಿ 'ರಿ' ಶಕಟರೇಫೆಯಾಗಿರುವುದರಿಂದ ಅದು ಅಚ್ಚಗನ್ನಡ ಶಬ್ದವಾಗಿದೆ. 'ಅರಿವು' ವಚನಧರ್ಮದ ಕಲಶವಾಗಿದೆ. ಇದಕ್ಕೆ ಸರಿದೂಗುವಂಥ ಶಬ್ದ ಸಂಸ್ಕೃತದಲ್ಲಿ ಇಲ್ಲ. ಅರಿವು ಶಬ್ದಕ್ಕೆ ಪರ್ಯಾಯವಾಗಿ 'ಪ್ರಜ್ಞೆ' ಶಬ್ದ ಬಳಸಲಾಗುತ್ತಿದೆ. ಇದು ಅರಿವಿಗೆ ಸರಿದೂಗುವ ಶಬ್ದ ಅಲ್ಲ! ಇಂಥ ಸೂಕ್ಷ್ಮತೆಗಳನ್ನು ಪರಿಗಣಿಸುವ ವಚನ ಸಂಪುಟಗಳನ್ನು ಹೊರತರುವುದರ ಕಡೆಗೆ ಗಮನ ಹರಿಸಬೇಕಾಗಿದೆ. ಆದ್ದರಿಂದ ಶೀಘ್ರವೇ ವಚನತಜ್ಞರ ಸಮಿತಿಯೊಂದನ್ನು ರಚಿಸಬೇಕು. ವಚನಗಳ ಮೂಲ ಅರ್ಥವನ್ನು ಕಡೆಗಣಿಸಿ ಅಪಾರ್ಥ ಕಲ್ಪಿಸುವಂಥ ದೋಷಗಳೊಂದಿಗೆ ಕಾಗುಣಿತ ದೋಷಗಳನ್ನೂ ಸರಿಪಡಿಸುವುದರ ಮೂಲಕ ಮೂರನೇ ಪರಿಷ್ಕೃತ ಮುದ್ರಣ ಹೊರತರುವುದು ಅವಶ್ಯವಾಗಿದೆ.

ಸಂಪುಟಗಳು ಹಳೆಮಾದರಿಯಲ್ಲೇ ಪ್ರಕಟವಾಗಬೇಕೋ ಅಥವಾ ಬೈಬಲ್ಲ ಮಾದರಿಯಲ್ಲಿ ಪ್ರಕಟವಾಗಬೇಕೋ ಎಂಬುದು ದೊಡ್ಡ ಸವಾಲಲ್ಲ. ದೋಷ ಸರಿಪಡಿಸುವುದೇ ದೊಡ್ಡ ಸವಾಲಾಗಿದೆ. ಆಧುನಿಕ ಬದುಕು, ತಂತ್ರಜ್ಞಾನ ಮತ್ತು ಯುವ ಓದುಗರನ್ನು ಗಮನದಲ್ಲಿಟ್ಟುಕೊಂಡು ಬೈಬಲ್ ಮಾದರಿ ಅನುಸರಿಸುವುದು ಔಚಿತ್ಯಪೂರ್ಣವಾದುದು. ಹಳೆಯ 15 ಸಂಪುಟಗಳನ್ನು ಬೈಬಲ್ ಮಾದರಿಯಲ್ಲಿ ಎರಡೇ ಸಂಪುಟಗಳಿಗಿಳಿಸಬಹುದು. ಎರಡೂ ಮಾದರಿಗಳಲ್ಲಿ ಕೂಡ ಪ್ರಕಟಿಸಬಹುದು.

ಬಸವಾದಿ ಶರಣರು ನಮ್ಮ ಸಾಂಸ್ಕೃತಿಕ ನಾಯಕರು. ಮಹಾರಾಷ್ಟ್ರಕ್ಕೆ ಶಿವಾಜಿ ಹೇಗೋ ಹಾಗೆ ಕರ್ನಾಟಕಕ್ಕೆ ಬಸವಣ್ಣ. ವಚನಗಳು ನಮ್ಮ ಸಂಸ್ಕೃತಿಯ ಪ್ರತೀಕ. ವಚನ ಸಂಪುಟಗಳು ಬಂದ ನಂತರ, ಕಳೆದ 20 ವರ್ಷಗಳ ಅವಧಿಯಲ್ಲಿ ವಚನ ಅಭ್ಯಾಸಿಗಳ ಸಂಖ್ಯೆ ಬಹಳವಾಗಿದೆ. ಇನ್ನು ಮುಂದೆ ಕೂಡ ಗಣನೀಯವಾಗಿ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ.




■ ರಂಜಾನ್ ದರ್ಗಾ

ಭ್ರಷ್ಟಗೊಂಡಿರುವ ರಾಜಕೀಯ

ಈ ದೇಶದಲ್ಲಿ ಮಹಿಳೆಯರ ಮೇಲೆ ಎಂತೆಂತಹ ದೌರ್ಜನ್ಯಗಳು ನಡೆಯುತ್ತಿವೆ ಎಂಬುದರೆಡೆಗೆ ನಾವು ಪ್ರತ್ಯೇಕವಾಗಿ ಬೆಳಕು ಚೆಲ್ಲಬೇಕಾದ ಅಗತ್ಯವಿಲ್ಲ. 21 ನೇ ಶತಮಾನದ ಈ ಎರಡನೇ ದಶಕದಲ್ಲಿ ಮಹಿಳೆಯರ ಮೇಲೆ, ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರದ ಸುದ್ದಿ ಇಲ್ಲದೆ ಒಂದು ದಿನವೂ ಪತ್ರಿಕೆ ಹೊರಡುವುದಿಲ್ಲ ಎಂಬಂತಾಗಿದೆ. ಉತ್ತರ ಪ್ರದೇಶದಲ್ಲಿ ದಿನಾಲೂ ಹೆಣ್ಣುಮಕ್ಕಳ ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ಅವರ ಕೊಲೆಗಳು ನಡೆಯುತ್ತಲೇ ಇವೆ. ಹೆಣ್ಣುಮಕ್ಕಳು ಕಾಣೆಯಾಗುವುದು, ಮಹಿಳೆಯರು ಮಕ್ಕಳನ್ನು ಬಾವಿಗೋ ನದಿಗೋ ಎಸೆದು ಆತ್ಮಹತ್ಯೆ ಮಾಡಿಕೊಳ್ಳುವ ಸುದ್ದಿಯೂ ತೀರಾ ಸಾಮಾನ್ಯ ಎಂಬಂತಾಗಿದೆ. ಈ ಎಲ್ಲವನ್ನೂ ಕೇಳುತ್ತಾ, ಓದುತ್ತಾ ಮರಗಟ್ಟಿದ ಮನಸ್ಸುಗಳೊಡನೆ ನಮ್ಮ ಮೊಮ್ಮಕ್ಕಳು ಮತ್ತು ಮರಿ ಮೊಮ್ಮಕ್ಕಳ ಮುಂದಿನ ಬದುಕಿನ ಕುರಿತು ಚಿಂತಿಸುತ್ತಾ ದಿನ ನೂಕುತ್ತಿರುವಾಗ ಪಶ್ಚಿಮ ಬಂಗಾಳದ ಸಂಸದರೊಬ್ಬರು ತಮ್ಮ ಕಾರ್ಯಕರ್ತರಿಗೆ ಸೂಚಿಸಿದ ಸಲಹೆಯ ವಿಷಯ ಕೇಳಿ ನಾವು ಎಚ್ಚರ ತಪ್ಪಿ ಬಿದ್ದಿಲ್ಲದಿರುವುದೇ ಆಶ್ಚರ್ಯವೆನ್ನಿಸುತ್ತಿದೆ. ಕಮ್ಯುನಿಸ್ಟ್ ಸದಸ್ಯರ ಮೇಲೆ ದೌರ್ಜನ್ಯ ನಡೆಸಿ ಎಂದರಲ್ಲದೆ, 'ನೀವು ಹೋಗಿ ಅವರ ಹೆಂಡತಿಯರನ್ನು ರೇಪ್ ಮಾಡಿ' ಎಂದು ಸಾರ್ವಜನಿಕವಾಗಿ ಭಾಷಣ ಮಾಡಿ ಕರೆಕೊಟ್ಟರು. ನಮ್ಮ ರಾಜಕಾರಣಿಗಳು ಬೌದ್ಧಿಕವಾಗಿ ಇಷ್ಟೊಂದು ಕೆಳಮಟ್ಟಕ್ಕಿಳಿಯಲು ಹೇಗೆ ಸಾಧ್ಯವಾಯಿತು? ಇವರು ಕೊಳಚೆ ಪ್ರದೇಶದಿಂದ ಬಂದವರೇ ಎಂದರೆ ಕೊಳಚೆ ಪ್ರದೇಶದಲ್ಲಿ ಬದುಕುತ್ತಿರುವವರನ್ನು ಅವಮಾನಿಸಿದಂತಾಗುತ್ತದಲ್ಲವೇ?

ನಮ್ಮ ಸಂಸದರಾಗಿ ಆರಿಸಿ ಬರುವವರು ಎಂತಹವರಾಗಿರುತ್ತಾರೆ ಅಥವಾ ಅವರೇಕೆ ಹೀಗಿರುತ್ತಾರೆ ಎಂಬುದಕ್ಕೆ ಚುನಾವಣೆಗೆ ಸ್ವಲ್ಪ ಮೊದಲು ಖ್ಯಾತ ನಟ ಅಮೀರ್ ಖಾನ್ ಪ್ರತೀ ಭಾನುವಾರ ನಡೆಸಿಕೊಟ್ಟ 'ಸತ್ಯಮೇವ ಜಯತೇ' ಎಂಬ ಕಾರ್ಯಕ್ರಮ ನೋಡಿದವರಿಗೆ ಈ ಪ್ರಶ್ನೆಗೆ ಉತ್ತರ ದೊರೆಯಬಹುದು.

ದೇಶದಲ್ಲಿನ ಯಾವುದಾದರೊಂದು ಸಮಸ್ಯೆಯನ್ನೆತ್ತಿಕೊಂಡು ಅವರು ಆ ಕುರಿತು ಸುಮಾರು ಒಂದು ಗಂಟೆಯವರೆಗೆ ಜನರಲ್ಲಿ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡು ಟಿವಿಯಲ್ಲಿ ಪ್ರಸಾರ ಮಾಡುತ್ತಿದ್ದರು. ಅದರೊಂದಿಗೆ ಆ ವಿಷಯಗಳಿಗೆ ಸಂಬಂಧಪಟ್ಟ ಕೆಲವು ಪರಿಣತರನ್ನೂ, ಸರ್ಕಾರಿ ಅಧಿಕಾರಿಗಳನ್ನೂ ಆ ಸಭೆಗೆ ಕರೆದು ಅವರಿಂದ ಬೇಕಾದ ಮಾಹಿತಿಗಳನ್ನು ಹೊರಡಿಸುತ್ತಿದ್ದರು. ಸಭಿಕರೂ ಈ ಸಂವಾದದಲ್ಲಿ ಪಾಲ್ಗೊಳ್ಳುತ್ತಿದ್ದರು. ಒಂದು ವಾರದ ಕಾರ್ಯಕ್ರಮ ಈ ದೇಶದ ಮಹಾ ಚುನಾವಣೆಯ ಕುರಿತಾಗಿತ್ತು.



ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಎಂತೆಂತಹವರು ಯಾವಯಾವ ರೀತಿಯಲ್ಲಿ ನಮ್ಮ ಮುಂದೆ ಬರುತ್ತಾರೆ, ನಮ್ಮ ಮತ ಪಡೆಯಲು ಎಂತೆಂತಹ ವೇಷಗಳಲ್ಲಿ ಎಂತೆಂತಹ ಮುಖವಾಡಗಳನ್ನು ಹಾಕಿಕೊಂಡು ನಮ್ಮ ಮುಂದೆ ಕಾಣಿಸಿಕೊಳ್ಳುತ್ತಾರೆ ಎಂಬುದನ್ನೆಲ್ಲ ಮಾತುಗಳ ಮೂಲಕ, ದೃಶ್ಯಗಳ ಮೂಲಕ ಅಮೀರ್ ಖಾನ್ ಪ್ರಸ್ತುತಪಡಿಸಿದರು. ಅಂದು ಅವರು ಪ್ರಸ್ತುತಪಡಿಸಿದ ಒಂದೆರಡು ವಿಷಯಗಳೆಡೆಗೆ ಜನಸಾಮಾನ್ಯರ ಗಮನ ಸೆಳೆಯಲು ಈ ಲೇಖನ ಬರೆಯುತ್ತಿದ್ದೇನೆ.

ಬಹಳ ಮುಖ್ಯ ವಿಷಯವೆಂದರೆ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಲು ಪಾತಕಿಗಳಿಗೆ (ಕ್ರಿಮಿನಲ್) ರಾಜಕೀಯ ಪಕ್ಷಗಳು ಟಿಕೆಟ್ ಕೊಡುವುದರ ಕುರಿತಾಗಿದೆ. ಚುನಾವಣೆಗೆ ಮತ ಬೇಡಲು ನಮ್ಮ ಮುಂದೆ ನಿಂತ ಅಭ್ಯರ್ಥಿಗಳಲ್ಲಿ 30% ಅಭ್ಯರ್ಥಿಗಳು ಆರೋಪಿಗಳಾಗಿ ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ. ಬಿಹಾರದಲ್ಲಿ ರಜ್ಜೂ ಭೈಯ್ಯಾ ಎಂಬವನ ವಿರುದ್ಧ ನ್ಯಾಯಾಲಯದಲ್ಲಿ ಎಂಭತ್ತೆರಡು ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿವೆ. ಈ ಬಾರಿಯೂ ಚುನಾವಣೆಯಲ್ಲಿ ಸ್ಪರ್ಧಿಸಲು ಆತನಿಗೆ ಟಿಕೆಟ್ ದೊರೆತಿತ್ತು. ಕ್ರಿಮಿನಲ್ ಮೊಕದ್ದಮೆಗಳ ಕುರಿತು ಈ ಜನರು ಹೀಗೆ ಹೇಳುತ್ತಾರೆ: "ನಮ್ಮ ಮೇಲಿರುವುದು ಆರೋಪ ಮಾತ್ರ. ನಾವು ಅಪರಾಧಿಗಳೆಂದು ನ್ಯಾಯಾಲಯ ತೀರ್ಮಾನಿಸುವವರೆಗೆ ನಾವು ಅಪರಾಧಿಗಳಲ್ಲ." ಅಪರಾಧಿಗಳಿಗೆ ಶಿಕ್ಷೆ ನೀಡಲು ವರ್ಷಗಟ್ಟಲೆ ಕಾದರೂ ಅವರಿಗೆ ಶಿಕ್ಷೆ ನೀಡಲು ಬೇಕಾದ ಸಾಕ್ಷ್ಯ ನ್ಯಾಯಾಲಯಕ್ಕೆ ದೊರೆಯುವುದಿಲ್ಲ! ನ್ಯಾಯಾಲಯಗಳ ತೀರ್ಮಾನ ನಿಂತಿರುವುದು ಸಾಕ್ಷ್ಯಗಳ ಮೇಲೆ ತಾನೇ?

"ಇಂತಹ ಕ್ರಿಮಿನಲ್‌ಗಳು ಹೇಗೆ ಜಯ ಗಳಿಸುತ್ತಾರೆ?" ಎಂದು ಕೇಳಿದರೆ ಅಧಿಕಾರಿಯೊಬ್ಬರ ಉತ್ತರ ಈ ಕೆಳಗಿನಂತಿತ್ತು:


"ಜಾತಿ. ಅವರು ತಮ್ಮ ಜಾತಿಯ ಜನರಿರುವಲ್ಲಿಯೇ ಚುನಾವಣೆಗೆ ಸ್ಪರ್ಧಿಸುತ್ತಾರೆ. ಎಂತಹ ಕ್ರಿಮಿನಲ್ ಆದರೂ ತಮ್ಮ ಜಾತಿಯವರು ಅವರನ್ನು ಸಹಿಸಿಕೊಳ್ಳುತ್ತಾರೆ. ತಮ್ಮವರಾದರೆ ತಮಗೆ ಅವರಿಂದ ಕಷ್ಟ ಕಾಲದಲ್ಲಿ ನೆರವು ದೊರೆಯುತ್ತದೆ. ಎಷ್ಟಾದರೂ ತಮ್ಮವರು ತಮ್ಮ ಕೈ ಬಿಡಲಾರರು ಎಂಬ ನಂಬಿಕೆ ಇವರದು."

ಪ್ರಾಮಾಣಿಕ ರಾಜಕಾರಣಿ ಇಲ್ಲವೇ ಇಲ್ಲವೆಂಬುದು ಇದರ ಅರ್ಥವಲ್ಲ. ಉತ್ತರ ಭಾರತದ ಇನ್ನೊಂದೆಡೆ ಓರ್ವ ಪ್ರಾಮಾಣಿಕ ರಾಜಕಾರಣಿ ಇದ್ದು ಅವರು ಮೂರು ಬಾರಿ ಸಂಸತ್ ಸದಸ್ಯರಾಗಿದ್ದರು. ಇವರು ಚುನಾವಣೆಗಾಗಿ ಒಂದು ಡಬ್ಬ ಇಟ್ಟುಕೊಂಡು ಪ್ರತಿಯೊಬ್ಬರಿಂದ ತಲಾ ಒಂದು ರೂಪಾಯಿ ಸಂಗ್ರಹಿಸುತ್ತಿದ್ದರು. ಯಾರಾದರೂ ಹೆಚ್ಚು ಹಣ ನೀಡಿದರೂ ತೆಗೆದುಕೊಳ್ಳುತ್ತಿರಲಿಲ್ಲ. ಯಾಕೆಂದು ಕೇಳಿದರೆ, "ಈ ಹಣ ಲೆಕ್ಕ ಮಾಡಿದರೆ ಎಷ್ಟು ಮತ (ಓಟ್) ಆಯಿತೆಂದು ತಿಳಿಯಬಹುದು" ಎನ್ನುತ್ತಿದ್ದರು. ತಮ್ಮ ವೇತನದ ಹಣವನ್ನು ಊರಿನ ಅಭಿವೃದ್ಧಿಗಾಗಿ ಖರ್ಚು ಮಾಡುತ್ತಿದ್ದರು. ಮೂರು ಅವಧಿಗೆ ಸಂಸದರಾಗಿದ್ದರೂ ಸ್ವಂತಕ್ಕಾಗಿ ಒಂದು ಮನೆ ಮಾಡದೆ ನಾವು ಬಾಡಿಗೆ ಮನೆಯಲ್ಲೇ ಇದ್ದೇವೆಂದು ಅವರ ಮಗನಂದರು. ಇಡೀ ಊರವರಿಗೆ ಅವರು ತಂದೆಯಾಗಿದ್ದರು. ಅವರು ಇನ್ನೊಮ್ಮೆ ಚುನಾವಣೆಗೆ ಸ್ಪರ್ಧಿಸುತ್ತಿದ್ದು ಕಾರಿನಲ್ಲಿ ಕುಳಿತುಕೊಂಡಿದ್ದಾಗ ಯಾರೋ ಬಂದು ಗುಂಡಿಟ್ಟರು. "ಅವರ ಮೈಯ್ಯಲ್ಲಿ ನೂರಾ ಒಂದು ಗುಂಡುಗಳಿದ್ದವು! ಅವರ ದೇಹವನ್ನು ಕಾರಿನಿಂದ ಎತ್ತತೊಡಗಿದಾಗ ಅವರ ಕೈಯ ಮಾಂಸದೊಳಗೆ ಎತ್ತಿದವರ ಕೈ ತೂರಿ ಎಲುಬು ಕೈಗೆ ತಾಗಿತು. ಅವರು ಪ್ರಾಮಾಣಿಕರಾಗಿದ್ದುದಕ್ಕೆ ದೊರೆತ ಪ್ರತಿಫಲ ಇದಾಗಿತ್ತು" ಎಂದು ಅಲ್ಲಿ ನೆರೆದಿದ್ದವರೊಬ್ಬರೆಂದರು. ಇಂತಹ ಕಟುಕರ ನಡುವೆ ಪ್ರಾಮಾಣಿಕರಾದವರು ಏನು ತಾನೇ ಮಾಡಲು ಸಾಧ್ಯ?




● ಸಾರಾ ಅಬೂಬಕ್ಕರ್

ಪೊಲೀಸ್ ಭದ್ರತೆಯಲ್ಲಿ ಕನ್ನಡಿಗರ ಮನೆ ತೆರವುಗೊಳಿಸುತ್ತಿರುವುದು.



ಕನ್ನಡಿಗರ ಮನೆ ಮುರಿಯುತ್ತಿರುವುದು






ಪಾರಿಕ್ಕರ್

ಚೆಡ್ಡಿ ಪಾರಿಕ್ಕರ್ ಪರಾಕ್ರಮ!

ಗೋವಾ ಕನ್ನಡಿಗರು ಬೀದಿಪಾಲಾದ ಕತೆ!!



"ಮುಂಜಾನಿ ಏಳುವರಿಗೇ ಬಾಳ ಪೊಲೀಸ್ರು, ದೊಡ್-ದೊಡ್ ಸಾಹೇಬ್ರು ನಮ್ ಮನೀ ಮುಂದ ನಿಂತಿದ್ರು... ನೀರ ಬರ್ತೈತಿ ದೂರ ಹೋಗ್ರಿ ಅಂದ್ರು... ನಾವು ಮನೀ ಬಿಟ್ ಹೊರಗ ಬಂದ್ ಮ್ಯಾಲೆ ಜೆಸಿಬಿ ಗಾಡಿ ತಂದು ಮನೀನೆಲ್ಲ ಕೆಡವಿಬಿಟ್ರು.... ಮನಿ ಕೆಡವತೇವಿ ಅಂತ ಒಂದ್ ಮಾತೂ ಹೇಳಲಿಲ್ಲ. ಸುಳ್ ಹೇಳಿ ನಮ್ ಮನೀ ಕೆಡವ್ಯಾರ... ಈಗ ಹಸುಗೂಸು, ಮುದ್ಕರ್ನೆಲ್ಲ ಕಟ್ಟಿಕೊಂಡು ಮಳೀಲಿ ಕುಂತೀವಿ... ನಮ್ ಅನ್ನ-ಬಟ್ಟಿ ಎಲ್ಲ ಮಣ್ಣ ಪಾಲಾಗ್ಯದ....."

ಇದು ಗೋವಾದ ಬೈನಾಬೀಚ್‌ನಲ್ಲಿ ಮುವ್ವತ್ತು ವರ್ಷದಿಂದ ಗುಡಿಸಲಲ್ಲಿ ಬದುಕು ಕಟ್ಟಿಕೊಂಡಿದ್ದ ಉತ್ತರ ಕರ್ನಾಟಕ ಕಡೆಯ ಅಮಾಯಕ ಅಸಹಾಯಕ ಮಂದಿಯ ಆರ್ತ ಆಳಲು! ಸಂಘ ಪರಿವಾರದ "ಮೇಧಾವಿ" ಹೆಗ್ಗಳಿಕೆಯ ಗೋವಾ ಮುಖ್ಯಮಂತ್ರಿ ಮನೋಹರ ಪಾರಿಕ್ಕರ್ ಪ್ರಭುತ್ವದ ಬರ್ಬರ-ಭಯಾನಕ ತೆರವು ಕಾರ್ಯಾಚರಣೆಗೆ ಬಲಿಯಾಗಿರುವ ಇನ್ನೂರಕ್ಕೂ ಹೆಚ್ಚು ಹೊರನಾಡ ಕನ್ನಡಿಗರ ಬದುಕು ಈಗ ಅಕ್ಷರಶಃ ಬೀದಿಗೆ ಬಿದ್ದಿದೆ! ಗೋವಾ ನಾಗರಿಕತ್ವ ಪಡೆದಿರುವ ಈ ಬಡಪಾಯಿ ಚಿಂದಿ-ಗುಜರಿ -ಪ್ಲಾಸ್ಟಿಕ್ ಆಯುವ, ಕೋಳಿ-ಕುರಿ ಸಾಕುವ ಜನರು ಭೋರ್ಗರೆವ ಮಳೆಯಲ್ಲಿ ನಿಂತು ತುತ್ತು ಅನ್ನಕ್ಕೆ, ಗೇಣು ಬಟ್ಟೆಗೆ ಅಂಗಲಾಚುತ್ತಿರುವುದು ಚೆಡ್ಡಿ ಪಾರಿಕ್ಕರ್‌ನ ಪುಂಡಾಟ ಜಗಜ್ಜಾಹೀರು ಮಾಡಿಬಿಟ್ಟಿದೆ!

ಹತ್ತು ವರ್ಷದ ಹಿಂದೆ

ಪಾರಿಕ್ಕರ್ ಸಾಹೇಬರಿಗೆ ಕನ್ನಡಿಗರ ಮೇಲೆ ಅದ್ಯಾವ ಪೂರ್ವಾಗ್ರಹವೋ, ದ್ವೇಷವೋ ಏನೋ? ಇದೇ ಪಾರಿಕ್ಕರ್ 2004 ರಲ್ಲಿ ಗೋವಾದ ಸಿಎಂ ಆಗಿದ್ದರು. ಆಗಲೂ ಸದ್ರಿ ಬೈನಾ ಸಮುದ್ರ ತೀರದಲ್ಲಿದ್ದ ಬರೋಬ್ಬರಿ ನಾಲ್ಕುನೂರು ಹೊರನಾಡ ಕನ್ನಡಿಗರ ಮನೆಗಳನ್ನು ಸರ್ಕಾರಿ ಯಂತ್ರಗಳು ಪುಡಿಪುಡಿ ಮಾಡಿ ನೆಲಸಮಗೊಳಿಸಿತ್ತು! ಆಗ ಈ ಉತ್ತರ ಕರ್ನಾಟಕದ ಕೂಲಿ-ನಾಲಿ ಒರಟು ಮಂದಿಯಿಂದ ತಮ್ಮ ಸಮುದ್ರ ತಟದ ಸೌಂದರ್ಯ ಹಾಳಾಗುತ್ತಿದೆ; ಅವರು ವೇಶ್ಯಾವಾಟಿಕೆ ಮಾಡುತ್ತಿದ್ದಾರೆ. ಇಂಥವರಿಂದ ತಮ್ಮ ಪ್ರವಾಸೋದ್ಯಮಕ್ಕೆ ತೊಂದರೆ ಎಂದೆಲ್ಲ ಪಾರಿಕ್ಕರ್ ಸರ್ಕಾರದ ಪ್ರಭೃತಿಗಳು ಆರೋಪಿಸಿದ್ದರು.

ಆಗ ಸಾವಿರಾರು ಕನ್ನಡಿಗರನ್ನು ನಿರ್ಗತಿಕರಾಗಿಸಿದ್ದ ಸರ್ಕಾರ ಸಣ್ಣ ಕನಿಕರವನ್ನೂ ತೋರಿಸಿರಲಿಲ್ಲ. ಆ ನಿರಾಶ್ರಿತರಿಗೆ ಬದಲಿ ವ್ಯವಸ್ಥೆ ಮಾಡುವ ಗೊಡವೆಗೆ ಹೋಗಿರಲಿಲ್ಲ. ಗೋವಾದಿಂದಲೇ ಕನ್ನಡಿಗರ ಓಡಿಸುವ ಕ್ರೌರ್ಯದ ಸ್ಕೆಚ್ ಹಾಕಿಕೊಂಡಿದ್ದ ಪಾರಿಕ್ಕರ್ ಪಟಾಲಮ್ ಬೈನಾ ಬೀಚ್‌ನ ಒಂದು ಭಾಗ ಖಾಲಿ ಮಾಡಿಕೊಂಡಿತ್ತು. ಈಗ, ಸರಿಯಾಗಿ ಹತ್ತು ವರ್ಷದ ನಂತರ ಪಾರಿಕ್ಕರ್ ಅಂಥದ್ದೇ ಅಮಾನುಷ ಸಂಚು ಹೂಡಿದ್ದಾರೆ.

ರಾಜಕೀಯ ಮತ್ತು ದ್ರೋಹ

ಪಾರಿಕ್ಕರ್ ಎರಡನೇ ಬಾರಿ ಸಿಎಂ ಆಗುತ್ತಲೇ ಆತನ ಕೆಂಗಣ್ಣು ಮತ್ತೆ ಕನ್ನಡಿಗರ ಮೇಲೆ ಬಿದ್ದಿತ್ತು. ಬೈನಾ ಪ್ರದೇಶದ ಶಾಸಕ ಕಂ ವಿದ್ಯುತ್ ಮಂತ್ರಿ ಮಿಲಿಂದ ನಾಯಕ್ ಮತ್ತು ಕನ್ನಡಿಗರನ್ನು ಕಾಡುವ ಗೋವಾ 'ಸಂಸ್ಕೃತಿ'ಯ ಮುಂದಾಳುಗಳು ಪಾರಿಕ್ಕರ್ ಬೆನ್ನಿಗೆ ನಿಂತು ಚಿತಾವಣೆ ಶುರು ಹಚ್ಚಿಕೊಂಡಿದ್ದರು. ಹಾಗಂತ ಚುನಾವಣೆಗಳು ಬಂದಾಗ ಪಾರಿಕ್ಕರ್-ನಾಯಕ್ ಗ್ಯಾಂಗ್ ಕನ್ನಡಿಗರಿಗೆ ಶಾಶ್ವತ ನೆಲೆ-ಮೂಲಭೂತ ಸೌಕರ್ಯದ ಆಮಿಷವೊಡ್ಡಿ ಯಾಮಾರಿಸುವುದೇನೂ ಬಿಟ್ಟಿಲ್ಲ. ಆದರೆ ಒಳಗೆ ಮಾತ್ರ ಸಮಯ ಸಾಧಿಸಿ ಕನ್ನಡಿಗರನ್ನು ಒದ್ದೋಡಿಸುವ ಹಿಡನ್ ಅಜೆಂಡಾ ಇದ್ದೇ ಇತ್ತು.

ಕನ್ನಡಿಗರನ್ನು ಗೋವಾದಿಂದ ಹೊರಹಾಕುವ ಹಠಕ್ಕೆ ಸರ್ಕಾರಿ ಆಡಳಿತ ಬಿದ್ದಿತ್ತು. ಪಾರ್ಲಿಮೆಂಟ್ ಎಲೆಕ್ಷನ್ ಮುಗಿಯುವತನಕ ಹೇಗಾದರೂ ಮಾಡಿ ಬೈನಾ ಮತ್ತು ಜರಿ ಪ್ರದೇಶದಲ್ಲಿ ಗುಡಿಸಲು ಹಾಕಿಕೊಂಡಿರುವ "ಕನ್ನಡ ಮತದಾರರ" ಸಂಭಾಳಿಸುವ ರಹಸ್ಯ ನಿರ್ಧಾರಕ್ಕೆ ಪಾರಿಕ್ಕರ್ ಪ್ರಭುತ್ವ ಬಂದಿತ್ತು. ಈಗ ಮೋದಿ ಸರ್ಕಾರದಲ್ಲಿ ಪ್ರವಾಸೋದ್ಯಮದ ಮರಿ ಮಂತ್ರಿಯಾಗಿರುವ ಶ್ರೀಪಾದ ನಾಯಕ್‌ನ ಎಂಪಿ ಮಾಡಲು ಇದೇ ಪಾರಿಕ್ಕರ್ ಮತ್ತು ಮಿಲಿಂದ್ ನಾಯಕ್ ಜರಿಯಲ್ಲಿನ ಕನ್ನಡಿಗರನ್ನು ಕೇಳಿಕೊಂಡಿದ್ದರು. ಬಿಜೆಪಿಗೆ ಮತ ಹಾಕಿದರೆ ಜರಿಯ ಕೊಳಗೇರಿ ಅಭಿವೃದ್ಧಿಪಡಿಸಿ ಕನ್ನಡಿಗರಿಗೆ ಸಕಲ ಸೌಲಭ್ಯ ಕೊಡುವ ಭರವಸೆಯೂ ಕೊಡಲಾಗಿತ್ತು.

ಶ್ರೀಪಾದ ನಾಯಕ್ ಏನೋ ಗೆದ್ದು ಸಂಸದನಾದ. ಸಿಎಂ ಪಾರಿಕ್ಕರ್‌ನ ಕೀರ್ತಿಯೂ ಸಂಘ ಪರಿವಾರದಲ್ಲಿ ಹೆಚ್ಚಿತು. ಆದರೆ ಕನ್ನಡಿಗರ ಮೇಲೆ ಈ ಪಾರಿಕ್ಕರ್-ಮಿಲಿಂದ್-ಶ್ರೀಪಾದ್‌ಗೆ ಒಂದು ಅನುಮಾನ ಆರಂಭವಾಗಿತ್ತು. ಬೈನಾ ಬೀಚ್ ಪ್ರದೇಶದ ಕನ್ನಡಿಗರು ಬಿಜೆಪಿಗೆ ಮತ ಕೊಟ್ಟಿಲ್ಲ; ಅವರೆಲ್ಲ ಕಾಂಗ್ರೆಸ್ ಬೆಂಬಲಿಗರೆಂಬ ಸಿಟ್ಟು ಮೂಡಿತ್ತು. ಮೊದಲೆ ಬೈನಾ ಬೀಚ್ ವಾಸಿ ಕನ್ನಡಿಗರ ಒದ್ದೋಡಿಸುವ ಹುನ್ನಾರದಲ್ಲಿದ್ದ ಸರ್ಕಾರಕ್ಕೆ ಪಾರ್ಲಿಮೆಂಟ್ ಎಲೆಕ್ಷನ್ ಬಳಿಕ ಮುಹೂರ್ತ ಕೂಡಿಬಂದಿದೆ. ಒಂದರ ಹಿಂದೊಂದರಂತೆ ಎರಡೆರಡು ನೋಟಿಸು ನೀಡಿದ ಸರ್ಕಾರ ಬೀಚ್ ಖಾಲಿ ಮಾಡುವಂತೆ ಕನ್ನಡಿಗರಿಗೆ ಬೆದರಿಸಿತ್ತು. ಅದಕ್ಕೆ ಆಡಳಿತಗಾರರು ಕೊಟ್ಟ ಕಾರಣ, ಬೀಚ್‌ನಲ್ಲಿರುವ ಮನೆಗಳು ಅಸುರಕ್ಷಿತ ವಲಯದಲ್ಲಿವೆ; ಅವೆಲ್ಲ ಕರಾವಳಿ ನಿಯಂತ್ರಣ ವಲಯ (ಸಿಆರ್‌ಝಡ್) ಪ್ರದೇಶದಲ್ಲಿರುವುದರಿಂದ ತೆರವು ಮಾಡಲೇಬೇಕೆಂದು ಬೈನಾ ಸ್ಥಳೀಯಾಡಳಿತ ಕಾಡತೊಡಗಿತ್ತು. ಆದರೆ ಒಳ ಹಿಕಮತ್ತು ಮಾತ್ರ ಕನ್ನಡಿಗರನ್ನು ಗೋವಾದಿಂದಲೇ ಹೊರಹಾಕುವುದಾಗಿತ್ತು.

ಧಡಫ್‌ಶಾಹಿ ದಾಳಿ!


ಅಂದು ಶುಕ್ರವಾರ **11.7.2014**. ಮುಂಜಾನೆ **7.30** ಕ್ಕೆ ದಕ್ಷಿಣ ಗೋವಾ ಜಿಲ್ಲಾಧಿಕಾರಿ ವೆರ್ನೆಸಿವ್ ಕುರ್ತಾದೊ ನೇತೃತ್ವದಲ್ಲಿ ಬರೋಬ್ಬರಿ **500** ಪೊಲೀಸರು, ಹತ್ತಾರು ಸಿಪಿಐ-ಎಸ್‌ಐ, ಡಿವೈಎಸ್‌ಪಿ ದರ್ಜೆಯ ಖಾಕಿ ಅಧಿಕಾರಿಗಳು, ನಗರಾಡಳಿತದವರು, ಲೋಕೋಪಯೋಗಿ ಅಭಿಯಂತರ ಪಡೆ ಎರಡು ಜೆಸಿಬಿ ಯಂತ್ರದ ಸಮೇತ ಬೈನಾ ಬೀಚ್‌ಗೆ ಲಗ್ಗೆ ಹಾಕಿತ್ತು! ಮಳೆಗಾಲವಾದ್ದರಿಂದ ಸಮುದ್ರದ ಅಲೆಗಳು ಮನೆಗೆ ನುಗ್ಗುವ ಸಾಧ್ಯತೆಯಿರುವುದರಿಂದ ಮನೆಯಿಂದ ಹೊರಬರುವಂತೆ ಗುಡಿಸಲುವಾಸಿಗಳಿಗೆ ಅಧಿಕಾರಿಗಳು "ಆರ್ಡರ್" ಮಾಡುತ್ತಾರೆ.

ಕಂಗಾಲಾದ ಜನರು ಜೀವ ಉಳಿಸಿಕೊಳ್ಳಲು ಹೊರಗೋಡಿ ಬರುತ್ತಾರೆ. ಅವರ ಸಾಮಾನು-ಸರಂಜಾಮೆಲ್ಲ ಗುಡಿಸಲಲ್ಲೇ ಇರುತ್ತದೆ. ಜನರ ಹೊರ ಬಂದಿದ್ದೇ ತಡ, ಜೆಸಿಬಿ ಮನೆಗಳ ಮೇಲೆ ಹಾಯಿಸಲು ಡಿಸಿ ಸಾಹೇಬರು ಆಜ್ಞೆ ಮಾಡುತ್ತಾರೆ. ಅಸಹಾಯಕ ಕನ್ನಡಿಗರು ನೋಡುನೋಡುತ್ತಿದ್ದಂತೆಯೇ ಅವರ ಮೂರು ದಶಕದಿಂದ ಕಟ್ಟಿಕೊಂಡಿದ್ದ ಮನೆ-ಕನಸುಗಳೆಲ್ಲ ಬೀಚ್‌ನ ಮರಳಲ್ಲಿ ಮಣ್ಣಾಗಿ ಹೋಗುತ್ತದೆ. ಕನ್ನಡಿಗರ ಆಕ್ರಂದನ ಮುಗಿಲು ಮುಟ್ಟುತ್ತದೆ. ದೋ ಎಂದು ಸುರಿಯುತ್ತಿದ್ದ ಮಳೆಯಲ್ಲಿ ಸಿಎಂ ಪಾರಿಕ್ಕರ್ ಪಡೆಯ ಅಮಾನವೀಯ ದಾಳಿಗೆ ಸಿಲುಕಿದ ಜನರ ಕಣ್ಣೀರ ಕೋಡಿ ಸೇರಿಹೋಗುತ್ತದೆ!! ಇದ್ಯಾವುದೂ ಲೆಕ್ಕಿಸದ ಸರ್ಕಾರಿ ಖೂಳರು ವಿಧ್ವಂಸಕತೆ ನಿರಂತರ-ನಿರಾತಂಕವಾಗಿ ನಡೆಸುತ್ತಲೇ ಇದ್ದರು.

ತಡೆಯಾಜ್ಞೆಯ ರಕ್ಷಣೆ


ಮಧ್ಯಾಹ್ನ **11.15** ರ ಹೊತ್ತಿಗೆ ಸರಿಯಾಗಿ **74** ಮನೆಗಳನ್ನು ದಾಳಿಕೋರರು ಕೆಡವಿಯಾಗಿತ್ತು. ಆ ಮನೆಗಳಲ್ಲಿನ ಅಕ್ಕಿ-ದಿನಸಿ-ಬಟ್ಟೆ-ಪಾತ್ರೆಯೆಲ್ಲ ಅವಶೇಷಗಳಡಿಯಲ್ಲಿ ಸಮಾಧಿಯಾಗಿತ್ತು. ಅಷ್ಟರಲ್ಲಾಗಲೇ ಓಡೋಡಿ ಬಂದ ಕನ್ನಡಿಗನೊಬ್ಬ ತೆರವು ಕಾರ್ಯಾಚರಣೆಗೆ ತಾವು ತಂದ ಕೋರ್ಟ್ ತಡೆಯಾಜ್ಞೆ ಅಧಿಕಾರಿಗಳಿಗೆ ತೋರಿಸುತ್ತಾನೆ. ಅದೇ ಹೊತ್ತಿಗೆ ಡಿಸಿಯ ಸೆಲ್‌ಫೋನ್‌ಗೊಂದು ಕರೆ ಬರುತ್ತದೆ. "ಸ್ಟೈ ಕೋರ್ಟ್ ಕೊಟ್ಟಿದೆ... ಕಾರ್ಯಾಚರಣೆ ನಿಲ್ಲಿಸಿ...." ಎನ್ನುತ್ತದೆ ಆ ಫೋನ್ ಕಾಲ್.

ಜೆಸಿಬಿ ದಾಳಿ ಅನಿವಾರ್ಯವಾಗಿ ನಿಲ್ಲಿಸಿದ ಅಧಿಕಾರಿಗಳು ಬೈನಾ ಬೀಚ್‌ನಿಂದ ನಿರ್ಗಮಿಸುತ್ತಾರೆ. ಬೀಚ್‌ನಲ್ಲಿದ್ದ **300** ಮನೆಗಳೆಲ್ಲವನ್ನೂ ಕೆಡವಿ ಹಾಕುವ ಹಠದಿಂದ ನುಗ್ಗಿದ್ದ ಸಿಎಂ ಪಾರಿಕ್ಕರ್ ಪರಿವಾರದ ಟಾರ್ಗೆಟ್ ಹೆಚ್ಚುಕಮ್ಮಿ ಒಂದು ಸಾವಿರ ಕನ್ನಡಿಗರನ್ನು ನಿರ್ಗತಿಕರಾಗಿಸಿ ಗೋವಾ ಗಡಿಯಾಚೆ ತಳ್ಳುವುದಾಗಿತ್ತು. ಆದರೆ **74** ಮನೆ ಧ್ವಂಸ ಮಾಡುವಷ್ಟರಲ್ಲೇ ಕಾನೂನಿನ ತಡೆ ಬಂದು, **225** ಕುಟುಂಬಗಳು ಬಚಾವಾಗಿದೆ.



ಅನಾಥವಾದ ಕನ್ನಡ ಮಕ್ಕಳು





...ಕ್ಷಣ-ಚಿತ್ರಾನ್ನ

ಗೋವಾ ಸಿಎಂ ಮನೋಹರ ಪಾರಿಕ್ಕರ್‌ರ ಐಐಟಿ ...ವಂತಿಕೆಯನ್ನು ಸಂಘ ಪರಿವಾರದ ಅಸಹಿಷ್ಣುತೆ ನುಂಗಿ ...ಟ್ಟಿದೆ! ಈತನ ವಿವೇಚನಾ ರಹಿತ ವಲಸಿಗ ಕನ್ನಡಿಗರ ...ಥ ಕಾರ್ಯಾಚರಣೆ ಅವಸರ ಸರಣಿ ಅನಾಹುತ ...ದೆ. ಬೈನಾ ಬೀಚ್‌ನ ಕನ್ನಡಿಗರ ತೆರವುಗೊಳಿಸುವಿಕೆ ... ಮಕ್ಕಳ ಶೈಕ್ಷಣಿಕ-ಭವಿಷ್ಯ ಕರಾಳ ಮಾಡಿಬಿಟ್ಟಿದೆ. ...ಬೈನಾ ಪ್ರದೇಶದಲ್ಲಿದ್ದ ಕನ್ನಡ ಶಾಲೆಗೆ ವಲಸಿಗರ ...ನು ಹೋಗಿ ವಿದ್ಯಾರ್ಜನೆ ಮಾಡುತ್ತಿದ್ದರು. ಆದರೆ ...ಮಕ್ಕಳೆಲ್ಲ ಈಗ ನೆಲೆಯಿಲ್ಲದೆ ಬೀದಿಗೆ ಬಿದ್ದಿದ್ದಾರೆ. ...ಯಿಂದಲೇ ಶಾಲೆಗೆ ಹೋಗೋಣವೆಂದರೆ ಅವರ ...ಸ್ತ್ರ-ಪತ್ರ ಪುಸ್ತಕ-ಪಾಠಿ ಸರ್ಕಾರಿ ದೌರ್ಜನ್ಯದಿಂದ ...ಪವಾದ ಮನೆಗಳ ಅವಶೇಷಗಳಡಿಯಲ್ಲಿ ...ತುಹೋಗಿದೆ! ಅಗತ್ಯ ವಸ್ತುಗಳನ್ನು ರಕ್ಷಿಸಿಕೊಳ್ಳಲಿಕ್ಕೂ ...ದೆ ಸರ್ಕಾರಿ ರಾಕ್ಷಸರು ಮನೆಗಳ ಮೇಲೆ ಜೆಸಿಬಿ ...ದ್ದರು.

...ಸಿಎಂ ಪಾರಿಕ್ಕರ್ ಮನೆ ಮುರುಕುತನ ಮುಗ್ಧ ಮಕ್ಕಳ ...ಕ ಬದುಕಿಗೆ ಮಾರಕವಾಗಿದ್ದು ಘೋರವಾಗಿದೆ. ...ಪುಟ್ಟ-ಪುಟ್ಟ ಮಕ್ಕಳು ತಮ್ಮ ಮನೆಗಳಿದ್ದ ಪ್ರದೇಶದಲ್ಲಿ ...-ಪುಸ್ತಕ-ಸಮವಸ್ತ್ರ ಅರಸುಟ್ಟ ದೃಶ್ಯ ಎಂಥ ಕಲ್ಲು ...ಯವನ್ನು ಕರಗಿಸುವಂತಿದೆ. ವಿಚಿತ್ರವೆಂದರೆ ಪಾರಿಕ್ಕರ್ ...ಮರ ಸರ್ಕಾರದ ಮಂತ್ರಿ-ಶಾಸಕ-ಅಧಿಕಾರಿಗಳು ಮಾತ್ರ ...ಳಿದಂತೆ ಕನ್ನಡಿಗರ ವಿಷಯದಲ್ಲಿ ಕಠೋರ-ಕ್ರೂರಿಗಳಾ...ದ್ದಾರೆ.

...ಕನ್ನಡ ಸಂಘ ಸಂಸ್ಥೆಗಳು ಕೊಟ್ಟ ಅಕ್ಕಿ-ದಿನಸಿಯಿಂದ ...ಶ್ರಿತರು ಚಿತ್ರಾನ್ನ ತಯಾರಿಸಿ ತಿನ್ನುತ್ತಿದ್ದಾರೆ. ಇದು ... ಉಳಿಸಿಕೊಳ್ಳುವಷ್ಟು ಸಿಗುತ್ತಿದೆಯೇ ಹೊರತು ಹೊಟ್ಟೆ ...ಯುವಷ್ಟಲ್ಲ, ತಾಯಂದಿರು ತಮ್ಮ ಪಾಲನ್ನೇ ಮಕ್ಕಳಿಗೆ ... ಖಾಲಿ ಹೊಟ್ಟೆಯಲ್ಲಿ ದಿನ ಕಳೆಯುತ್ತಿರುವುದು ...ಯ ವಿದ್ರಾವಕವಾಗಿದೆ. ಚಿತ್ರಾನ್ನ ತಯಾರಿಕೆ ಮಳೆ ...ದಷ್ಟೇ ಸಾಧ್ಯ, ಒಂದು ಪ್ಲಾಸ್ಟಿಕ್ ಚಪ್ಪರವನ್ನೂ ಹಾಕಲು ...ಕ್ಕರ್, ಪೊಲೀಸರು ಬಿಡುತ್ತಿಲ್ಲ. ಅನ್ನ ...ಯುವುದಾದರೂ ಎಲ್ಲಿ?! ಪುನರ್ವಸತಿಗೂ ಸಿದ್ಧವಿಲ್ಲ.



ಮಾಧ್ಯಮ ನಿಷೇಧ

ಬೈನಾಬೀಚ್ ಪ್ರದೇಶದಲ್ಲಿ ಗೋವಾ ಸರ್ಕಾರ ಅಘೋಷಿತ ತುರ್ತುಪರಿಸ್ಥಿತಿ ಜಾರಿಗೊಳಿಸಿದೆ. ಇಲ್ಲಿ ವ್ಯಕ್ತಿ ಸ್ವಾತಂತ್ರ್ಯ-ಅಭಿವ್ಯಕ್ತಿ ಸ್ವಾತಂತ್ರ್ಯ, ಮಾಧ್ಯಮ ಸ್ವಾತಂತ್ರ್ಯ ಯಾವುದೂ ಇಲ್ಲ. ಸಿಎಂ ಪಾರಿಕ್ಕರ್ ಮುಸಡಿಚ್ಚಿ ಈಡೇರಿಸಲು ಟೊಂಕ ಕಟ್ಟಿ ನಿಂತಿರುವ ಪೊಲೀಸರ ಲಾಠಿ, ಬೂಟುಗಳದೇ ದರ್ಬಾರು ಬೈನಾ ಬೀಚ್‌ನಲ್ಲಿ.

ಸಿಎಂ ಪಾರಿಕ್ಕರ್ ಒಂಥರಾ ಸರ್ವಾಧಿಕಾರಿ ಗುಣಧರ್ಮದ ಪ್ರತಿಗಾಮಿ ಪುಢಾರಿ. ಪುರೋಹಿತಶಾಹಿ ಆಚಾರ-ವಿಚಾರದ ಪಾರಿಕ್ಕರ್ ಗೋವನ್ನರ ಹಿತಾಸಕ್ತಿ, ಪ್ರಾದೇಶಿಕ ದುರಭಿಮಾನದ ಅಸ್ತ್ರ ಬಳಸಿ ಸ್ವಪಕ್ಷ-ವಿಪಕ್ಷದವರನ್ನೆಲ್ಲ ಪಳಗಿಸಿಕೊಂಡಿದ್ದಾರೆ. ಹೀಗಾಗಿ ಬೈನಾ ಬೀಚ್‌ನಲ್ಲಿ ಕನ್ನಡಿಗ ವಲಸಿಗರ ಮೇಲಾಗಿರುವ ದೌರ್ಜನ್ಯದ ಬಗ್ಗೆ ಒಬ್ಬೇ ಒಬ್ಬ ಗೋವಾ ರಾಜಕಾರಣಿ ತುಟಿಪಿಟಿಕ್ ಎಂದಿಲ್ಲ.

ಈಗ ಪಾರಿಕ್ಕರ್‌ಗೆ ಇರುವುದು ಮಾಧ್ಯಮ ಭಯ ಮಾತ್ರ. ಹೀಗಾಗಿ ಆತ ಬೈನಾ ಬೀಚ್‌ನತ್ತ ದೃಶ್ಯ ಮಾಧ್ಯಮದವರಾಗಲಿ, ಅಕ್ಷರ ಮಾಧ್ಯಮದವರಾಗಲಿ ಸುಳಿಯದಂತೆ ಪೊಲೀಸರ ಕಾವಲಿಟ್ಟಿದ್ದಾರೆ. ಮಾಧ್ಯಮಗಳಲ್ಲಿ ಬೈನಾ ಬೀಚ್‌ನಲ್ಲಿ ಗೋವಾ ಸರ್ಕಾರ ಮಾಡಿರುವ ಹಿಂಸಾಚಾರ-ವಿಧ್ವಂಸಕತೆ ಬಿತ್ತರವಾದರೆ ಕನ್ನಡಿಗರಿಗೆ ದೊಡ್ಡ ಮಟ್ಟದ ಬೆಂಬಲ ವ್ಯಕ್ತವಾಗಿ ರಾಷ್ಟ್ರಮಟ್ಟದಲ್ಲಿ ಮಾನ ಹರಾಜಾಗುತ್ತದೆಂಬ ಆತಂಕ ಪಾರಿಕ್ಕರ್ ಸರ್ಕಾರಕ್ಕೆ. ಹೀಗಾಗಿ ಇಲ್ಲಿ ದೃಶ್ಯ ಮತ್ತು ಪ್ರಿಂಟ್ ಮಾಧ್ಯಮದವರ ಕ್ಯಾಮರಾಕ್ಕೆ ನಿಷೇಧ ಹೇರಲಾಗಿದೆ.

ಪತ್ರಕರ್ತರಿಗೆ ಕೇಸ್‌ಬುಕ್ ಮಾಡುವ ಧಮಕಿ ಹಾಕಿ ಓಡಿಸಲಾಗುತ್ತಿದೆ. ಮೊನ್ನೆ ಬೆಳಗಾವಿಯಿಂದ ಬಂದಿದ್ದ ಟಿವಿ ವಾಹಿನಿಯೊಂದರ ವರದಿಗಾರ ಕ್ಯಾಮರಾಮನ್‌ನನ್ನು ಪೊಲೀಸರು ಹಿಡಿದು ಠಾಣೆಗೊಯ್ದು ವರದಿ ಪ್ರಸಾರ ಮಾಡದಂತೆ ತಾಕೀತು ಮಾಡಿದ್ದಾರೆ. ಕೇಸ್‌ಗೆ ಹೆದರಿ ಬೈನಾ ಭಾನ್ಗಡಿಯನ್ನು ಚಾನೆಲ್‌ನವರು ಪ್ರಸಾರ ಮಾಡಲಿಲ್ಲ.

ಪತ್ರಕರ್ತರ ಬಳಿ ಸುಳಿಯದಂತೆ ನಿರಾಶ್ರಿತ ಕನ್ನಡಿಗರ ಪರ ಕರುಣೆಯಿರುವವರ ಮೇಲೆ ಖಾಕಿಗಳು ನಿಗಾ ಇಟ್ಟಿದ್ದಾರೆ. ಕೇಂದ್ರದಲ್ಲಿ ಆತ್ಮೀಯ ಮೋದಿ ಮಹಾತ್ಮನ ಸರ್ಕಾರವಿರುವುದರಿಂದ ಪಾತಕ ದಕ್ಕಿಸಿಕೊಳ್ಳುವ ದಾರ್ಷ್ಟ್ಯದಿಂದ ಪಾರಿಕ್ಕರ್ ಹಾರಾಡುತ್ತಿದ್ದಾರೆ!!

ರಾಜ "ಕರ್ಮ"!

...ಗೋವಾ ಸರ್ಕಾರದ ದಾದಾಗಿರಿಯಿಂದ ಎರಡು ನೂರು ...ವಾಸಿ ಕರ್ನಾಟಕದವರು ನೆಲೆ ಕಳೆದುಕೊಂಡು ...ಶ್ರಿತರಾಗಿದ್ದಾರೆ. ಇವರಲ್ಲಿ ತಿಂಗಳ ಹಸುಗೂಸುಗಳು, ... ಬಾಣಂತಿಯರು, ವೃದ್ಧಾಪ್ಯದಿಂದ ಜರ್ಜರಿತರಾದ ...ದ್ದಾರೆ. ಇವರಿಗೆಲ್ಲ ಗಗನವೆ ಹೊದಿಕೆ-ನೆಲವೇ ಹಾಸಿಗೆ ...ಂತಾಗಿದೆ. ಬೀಚ್‌ನಲ್ಲಿ ತಮ್ಮ ಮನೆ ...ಮವಾಗಿರುವಲ್ಲಿಯೇ ಈ ಜನ ಹಗಲಿರುಳೂ ಕದಲದೇ ...ದ್ದಾರೆ. ಕೆಲವರು ಬೀದಿ-ಬೀದಿ ಅಲೆಯುತ್ತ ಆಶ್ರಯ ...ತ್ತಿದ್ದಾರೆ. ಬೀಚ್‌ನಲ್ಲಿ ಒಂದು ಪ್ಲಾಸ್ಟಿಕ್ ಹಾಳೆಯ... ಕೂಡ ಹಾಕಲು ಪೊಲೀಸರು ಬಿಡುತ್ತಿಲ್ಲ. ಸುರಿವ ...ಮಳೆಯಲ್ಲೇ ನಿರಾಶ್ರಿತರು ದಿನ ದೂಡುತ್ತಿದ್ದಾರೆ.

...ಹೃದಯವಿದ್ರಾವಕವೆಂದರೆ, ಈ ಮಂದಿಗೆ ತುತ್ತು ...ನ್ನಕ್ಕೂ ತತ್ವಾರ ಬಂದಿದೆ. ನೆಲೆ ತಪ್ಪಿಸಿದ ಸರ್ಕಾರಕ್ಕೆ ...ಶ್ರಿತರಿಗೆ ಗಂಜಿ ಹಾಕಬೇಕೆಂಬ ಕನಿಷ್ಠ ಕರುಣೆಯೂ ...ವಾಗಿದೆ. ಮಳೆ ಸ್ವಲ್ಪ ನಿಂತರೆ ಸ್ಥಳೀಯ ಕನ್ನಡ ...ದವರು ಕೊಟ್ಟ ಅಕ್ಕಿ-ಬೇಳೆ ಬೇಯಿಸಿ ಸಾಮೂಹಿಕ ... ಮಾಡಿ ಉಣ್ಣುತ್ತಾರೆ. ಬಾಳೆಹಣ್ಣು, ಬಿಸ್ಕೆಟ್, ಉಪ್ಪಿಟ್ಟು, ...ಕ್ಕಿ ಕನ್ನಡ ಸಂಘದವರು ಒದಗಿಸಿದರೆ ಒಂಚೂರು ... ಇಂಗುತ್ತದೆ. ಪುಟ್ಟ ಮಕ್ಕಳು, ಹೆಂಗಸರ ಗೋಳಂತೂ ...ತೀರದು.

...ಸರ್ಕಾರ ನಿರಾಶ್ರಿತರಿಗೆ ಕೊಟ್ಟಳ್ಳಿ, ಚಿಕಲಿ ಗ್ರೌಂಡ್ ... ಹಿಲಕ್ ಗ್ರೌಂಡ್‌ಗಳಲ್ಲಿ ಒಂದು ವಾರದ ಮಟ್ಟಿಗಷ್ಟೇ ...ಯುಬು ಗೋದಾಮುಗಳ ವ್ಯವಸ್ಥೆ ಮಾಡಲಾಗಿದೆ ಎಂದು ...ತ್ತಿದೆ. ಅಲ್ಲಿ ಜಾನುವಾರುಗಳೂ ಉಳಿಯದಂಥ ...ಸ್ಥಿತಿಯಿದೆ. ಹೆಂಗಸರು-ಗಂಡಸರು ಒಟ್ಟೊಟ್ಟಿಗೇ ...ಯುವ ಹಿಂಸೆ! ಬಟ್ಟೆ ಬದಲಿಸುವುದೆಲ್ಲಿ, ಸ್ನಾನ ಮಾಡೋದೆಲ್ಲಿ, ಶೌಚಕ್ಕೆ ಜಾಗ ಯಾವುದು ಎಂದು ಕೇಳಿದರೆ ಗೋವಾದ ಕರುಣಾಮಯಿ ಆಡಳಿತಗಾರರಲ್ಲಿ ಉತ್ತರವಿಲ್ಲ. ಅಷ್ಟೇ ಅಲ್ಲ, ಬರೀ ಒಂದು ವಾರವಷ್ಟೇ ಈ ತಾತ್ಕಾಲಿಕ ಯಾತನಾಕೇಂದ್ರದಲ್ಲಿರಬೇಕೆಂಬ ನಿರ್ಬಂಧ ಬೇರೆ ಅಧಿಕಾರಿಗಳು ಹಾಕಿದ್ದಾರೆ.

ಗೋವಾದ ಕನ್ನಡ ಜನವಿರೋಧಿ ಪಾರುಪತ್ಯಗಾರರು ವ್ಯವಸ್ಥಿತವಾಗೇ ಅನ್ಯಾಯ-ಅನಾಚಾರ ಮಾಡಿದೆ. ಬೈನಾ ಬೀಚ್‌ನಲ್ಲಿರುವ ಸ್ಥಳೀಯ ಗೋವನ್ನರಿಗೆ ಮೊದಲೇ ಪುನರ್ವಸತಿ ವ್ಯವಸ್ಥೆ ಮಾಡಿದೆ. ಈಗ ಕೆಡವಲಾಗಿರುವ ೭೪ ಮನೆಗಳಲ್ಲಿ ನಾಲ್ಕಾರು ಗೋವಾ ಮೂಲ ನಿವಾಸಿಗಳದು. ಇವರಿಗೆ ಪರ್ಯಾಯ ಪುನರ್ವಸತಿ ಕಲ್ಪಿಸಿರುವ ಪಾರಿಕ್ಕರ್ ಪ್ರಭುತ್ವದವರು ಬುದ್ಧಿಪೂರ್ವಕವಾಗೇ ಕನ್ನಡಿಗರಿಗೆ ದೋಖಾ ಮಾಡಿದೆ. ಇದು ಪಾರಿಕ್ಕರ್‌ರ ಆಡಳಿತದ "ರಾಜಕರ್ಮ" ಪರಿಪಾಲನೆ! ಕನ್ನಡಿಗರ ಮೇಲೆ ಇಷ್ಟೊಂದು ಸೇಡು-ಜಿದ್ದು ಸಿಎಂ ಪಾರಿಕ್ಕರ್‌ಗೆ ಏಕೆಂಬುದೇ ಅರ್ಥವಾಗದು!

ಗೋವಾ ಪ್ರಜೆಗಳು

ಬೈನಾ ಬೀಚ್‌ನಲ್ಲಿ ನೆಲೆ ಕಂಡಿರುವ ಮಂದಿ ಅಲ್ಲಿ ಮೂರು ದಶಕದಿಂದ ಬದುಕು ಕಟ್ಟಿಕೊಂಡಿದ್ದಾರೆ. ಸರ್ಕಾರದ ಹಂಗಿಲ್ಲದೇ ದುಡಿದುಣ್ಣುತ್ತಿದ್ದ ಸ್ವಾಭಿಮಾನಿ ಜನರಿವರು. ಉತ್ತರ ಕರ್ನಾಟಕದ ಬಿಜಾಪುರ, ಬಾಗಲಕೋಟೆ, ರಾಯಚೂರು ಮತ್ತು ಗುಲ್ಬರ್ಗಾದ ನಿರ್ಗತಿಕರಿವರು. ಕೂಲಿ-ನಾಲಿ ಅರಸುತ್ತಾ ಹಣವಂತರ ಗೋವಾಕ್ಕೆ ವಲಸೆ ಬಂದ ಈ ಮಂದಿ ಇಲ್ಲಿಯ ಅಂತಸ್ತು-ಅಭಿವೃದ್ಧಿಗೆ ತಮ್ಮ ರಕ್ತ-ಬೆವರು ಬಸಿದಿದ್ದಾರೆ. ಊರಲ್ಲಿ ಒಂದಂಗಲವೂ ಹೊಲ-ಮನೆ ಇಲ್ಲದ ಈ ಕನ್ನಡಿಗರು ಗೋವಾದಲ್ಲೇ ತಲೆಮಾರುಗಳಿಂದ ತಳವೂರಿದ್ದಾರೆ.

ಜರಿ ಪ್ರದೇಶದ ಸ್ಲಮ್ ಏರಿಯಾದಲ್ಲಿನ ಕನ್ನಡಿಗರು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಾರೆ. ಕೂಲಿ ಮಾಡುವರೂ ಇದ್ದಾರೆ. ಆದರೆ ಬೈನಾ ಸಮುದ್ರ ತಟದಲ್ಲಿ ಮನೆ ಕಟ್ಟಿಕೊಂಡವರು ತೀರ ದುರ್ಬಲರು. ಪ್ಲಾಸ್ಟಿಕ್-ಗುಜರಿ-ಚಿಂದಿ ಆಯುವುದು ಇವರ ಉಪಕಸುಬು; ಕೆಲವರು ಮೇಕೆಗಳನ್ನು ಸಾಕಿಕೊಂಡಿದ್ದಾರೆ. ಗೋವಾ ಸರ್ಕಾರ ಬೈನಾ ಬೀಚ್ ವಾಸಿಗಳ ಮನೆಗಳಿಗೆ ಅಧಿಕೃತ ನೋಂದಣಿ ಸಂಖ್ಯೆ ಕೊಟ್ಟಿದೆ. ವಿದ್ಯುತ್ ಸಂಪರ್ಕ ನೀರು ಒದಗಿಸಿದೆ. ಇದಕ್ಕೆಲ್ಲ ಅಧಿಕೃತ ಶುಲ್ಕ ಸರ್ಕಾರಿ ಏಜೆನ್ಸಿಗಳಿಗೆ ಬೈನಾ ಬೀಚ್ ವಾಸಿಗಳು ತುಂಬುತ್ತಿದ್ದಾರೆ. ಅಷ್ಟೇ ಅಲ್ಲ, ಇವರಿಗೆ ಗೋವಾದ ಮತದಾನದ ಹಕ್ಕು ಸಹ ನೀಡಲಾಗಿದೆ. ಅಂದರೆ ಈ ಉತ್ತರ ಕರ್ನಾಟಕದವರು ಈಗ ಗೋವಾದ ನಾಗರಿಕರು. ಇದು ಗೊತ್ತಿದ್ದೂ ಅವರ ಬದುಕಿಗೆ ಕೊಳ್ಳಿಯಿಟ್ಟು ಓಡಿಸುವ ಷಡ್ಯಂತ್ರ ಪಾರಿಕ್ಕರ್‌ನಂಥ ಸೋಕಾಲ್ಡ್ ಸಜ್ಜನ ನಡೆಸಿರುವುದು ದುರಂತವೇ ಸರಿ.

ಕಣ್ಣೀರಿನ ಪ್ರತಿಭಟನೆ!!

ಬೈನಾ ಬೀಚ್‌ನಲ್ಲೀಗ ಭೀಭತ್ಸ ವಾತಾವರಣ; ಯುದ್ಧ ನಂತರದ ಆತಂಕ-ಅನುಮಾನದ ಮೌನ. ಮುರಿದ ಮನೆ-ಮನಗಳ ಅವಶೇಷ. ತಾತ್ಕಾಲಿಕ ಪುನರ್ವಸತಿ ಕೇಂದ್ರಗಳೆಂಬ ನರಕಕ್ಕೆ ಹೋಗಲು ನಿರಾಕರಿಸಿ ತಮ್ಮ ಮನೆಗಳಿದ್ದ ಜಾಗದಲ್ಲೇ ಕಣ್ಣೀರಿನ ಪ್ರತಿಭಟನೆ ನಡೆಸುತ್ತಿರುವರ ಖಾಲಿ ಹೊಟ್ಟೆಯ ಯಾತನೆಯ ನಿರಾಶ್ರಿತರು. ತಾತ್ಕಾಲಿಕ ಗೋದಾಮಿಗೆ ಹೋದರೆ, ವಾರದ ಬಳಿಕ ಎಲ್ಲಿಗೆ ಹೋಗಬೇಕು. ನಮಗೆ ಶಾಶ್ವತ ಪುನರ್ವಸತಿ ಕಲ್ಪಿಸಬೇಕೆಂದು ನಿರಾಶ್ರಿತರು ಪರಿಪರಿಯಾಗಿ ಬೇಡುತ್ತಿದ್ದಾರೆ. ದಿಕ್ಕೆಟ್ಟು ಚಡಪಡಿಸುತ್ತಿದ್ದಾರೆ.

ಆದರೆ ತೆರವು ದಾಳಿ ನಡೆದು ಒಂದು ವಾರ ಕಳೆದರೂ ನಿರಾಶ್ರಿತರ ಗೋಳು ಆಲಿಸಲು ಒಬ್ಬೇ ಒಬ್ಬ ಶಾಸಕ-ಮಂತ್ರಿ ಬೈನಾಗೆ ಬಂದಿಲ್ಲ. ಜಾಗ ಸರ್ಕಾರದ್ದೇ ಇರಬಹುದು; ಸಿಆರ್‌ರೆಝಡ್ ವಲಯದಲ್ಲೇ ಕನ್ನಡಿಗರ ಮನೆಗಳಿದ್ದಿರಬಹುದು. ಈ ಹಿಂದುಳಿದ ಬಡವರ್ಗದ ಜನರಿಂದ ಗೋವಾದ ಸೌಂದರ್ಯ ಪ್ರತಿಷ್ಠೆಗೆ ಕುಂದೇ ಬಂದಿರಬಹುದು. ಹಾಗಂತ ಇಷ್ಟು ಅನಾಗರಿಕವಾಗಿ-ಅನಾಹುತಕಾರಿಯಾಗಿ ಅಸಹಾಯಕ ಮಂದಿಯನ್ನು ಒಕ್ಕಲೆಬ್ಬಿಸಬೇಕಿತ್ತಾ? ಗೋವನ್ನರಿಗೆ ಪುನರ್ವಸತಿ ಮಾಡಿಕೊಟ್ಟಂತೆ ಈ ವಲಸಿಗರೂ ಆಶ್ರಯ ನೀಡಬಹುದಿತ್ತಲ್ಲ. ಸುರಿವ ಮಳೆಗಾಲವೇ ಬೇಕಿತ್ತಾ ತೆರುವು ಕಾರ್ಯಾಚರಣೆಗೆ.

ಆಳುವವರ ಕಡೆಯಿಂದ ಯಾರೂ ನಿರಾಶ್ರಿತರ ಬಳಿ ಬರದೇ ದ್ವೇಷ-ಹಠ ಸಾಧಿಸುತ್ತಿರುವುದೊಂದೇ ಸಾಕು, ಇದು ಪಾಲಿಕ್ಕರ್‌ರ ಬಿಜೆಪಿ ಸರ್ಕಾರದ ಬುದ್ಧಿಪೂರ್ವಕ ರಾಜಕೀಯ-ಕೊಳಕು ಪ್ರಾಂತೀಯ ಸೇಡಿನ ದೌರ್ಜನ್ಯವೆಂದು ಸಾಬೀತು ಮಾಡಲು. ವಾಸ್ಕೋ ಪರಿಸರದಲ್ಲಿ ಹೌಸಿಂಗ್ ಬೋರ್ಡ್‌ನ ೧೬೪ ಖಾಲಿ ಮನೆಗಳಿವೆ. ಇಲ್ಲಿ ನಿರಾಶ್ರಿತರಿಗೆ ನೆಲ ಕೊಡಲು ಗೋವಾ ಸರ್ಕಾರಕ್ಕೆ ಅಡ್ಡಿಯೇನು? ನಿರಾಶ್ರಿತರು ತಮಗೆ ಹೌಸಿಂಗ್ ಬೋರ್ಡ್ ಮನೆಗಳನ್ನಾದರೂ ಕೊಡಿ ಅಥವಾ ಬೇರೆಡೆ ಜಾಗ ಕೊಡಿ ಎನ್ನುತ್ತಿದ್ದಾರೆ. ಒಂದಂತೂ ಖರೆ. ಈ ನಿರ್ಗತಿಕರಿಗೆ ಮತ್ತೆ ಸ್ವಂತ ಹಣದಲ್ಲಿ ಮನೆ ಕಟ್ಟಿಕೊಳ್ಳುವ ಚೈತನ್ಯವಂತೂ ಇಲ್ಲ. ಮೂರು ದಶಕಗಳ ಬದುಕು ಮೂರಾಬಟ್ಟೆ ಮಾಡಿರುವ ಸರ್ಕಾರಕ್ಕೆ ಪುನರ್ವಸತಿಯ ಹೊಣೆಗಾರಿಕೆಯೂ ಇದೆ!

ಬೆಕ್ಕಿಗೆ ಗಂಟೆ ಕಟ್ಟೋರ್‍ಯಾರು?

ಸದ್ಯಕ್ಕೆ ಈ ನಿರಾಶ್ರಿತರಿಗೆ ಕೊಂಚ ಸಮಾಧಾನ ನೀಡುತ್ತಿರುವುದು ಅಖಿಲ ಗೋವಾ ಕನ್ನಡ ಸಂಘದ ಅಧ್ಯಕ್ಷ ಸಿದ್ದಣ್ಣ ಮೇಟಿ ಮತ್ತಿತರ ಸ್ಥಳೀಯ ಕನ್ನಡ ಸಂಘ-ಸಂಸ್ಥೆಗಳಷ್ಟೇ. ಈಗ ಗೋವಾ ಪೊಲೀಸರು ಮೇಟಿ ಹಿಂದೆ ಬಿದ್ದಿದ್ದಾರೆ. ನಿರಾಶ್ರಿತರಿಗೆ ನೆರವಾಗದಂತೆ ಬೆದರಿಕೆ ಹಾಕುತ್ತಿದ್ದಾರೆ. ಮೇಟಿ ದೆಸೆಯಿಂದ ಗೋವಾ ಕನ್ನಡಿಗರಲ್ಲಿ ಒಗ್ಗಟ್ಟು ಬೆಳೆಯುತ್ತದೆಂಬ ಭಯ ಆಡಳಿತಗಾರರಿಗೆ. ಹಾಗೇನಾದರೂ ಕನ್ನಡಿಗರು ಒಂದಾಗಿ ಕೆರಳಿದರೆ ಬೈನಾ ಬೀಚ್‌ನಿಂದ ಗುಡಿಸಲು ವಾಸಿಗಳ ಎತ್ತಂಗಡಿ ಮಾಡುವುದು ಕಷ್ಟವೆಂಬ ಲೆಕ್ಕಚಾರ ಸರ್ಕಾರದ್ದು. ಆದರೆ ಕನ್ನಡಿಗರು ಇದ್ಯಾವುದಕ್ಕೂ ಸೊಪ್ಪು ಹಾಕದೆ ಕರ್ನಾಟಕ ಸರ್ಕಾರದ ಮೂಲಕ ಪುನರ್ವಸತಿಗೆ ಪ್ರಯತ್ನ ನಡೆಸಿದ್ದಾರೆ.

ಬೈನಾ ಬೀಚ್‌ನ ಕನ್ನಡಿಗರಿಗಷ್ಟೇ ತೆರವು ನೋಟಿಸ್ ನೀಡಿ ನಾಟಕ ಮಾಡಿದ್ದ ಗೋವಾದ ಜೀವ ವಿರೋಧಿ ಸರ್ಕಾರ ಈಗ ತನ್ನಷ್ಟಕ್ಕೇ ಹೆದರಿಕೊಂಡಿದೆ. ಮಾನವ ಹಕ್ಕು ಉಲ್ಲಂಘನೆಯಂಥ ಪಾತಕದ ಕಳಂಕ ಬರಬಹುದೆಂದು ಬೈನಾ ಬೀಚ್‌ನಲ್ಲಿ ಯಾರಿಗೂ ಫೋಟೋ ಕೂಡ ತೆಗೆಯಲು ಬಿಡುತ್ತಿಲ್ಲ. ಮಾಧ್ಯಮಗಳ ಮೂಲಕ ತಮ್ಮ ದೌರ್ಜನ್ಯಕ್ಕೆ ದೇಶವ್ಯಾಪಿ ಪ್ರಚಾರ ಸಿಕ್ಕರೆ ಗತಿಯೇನೆಂದು ಪಾರಿಕ್ಕರ್ ಪರಿವಾರ ಕಂಗಾಲಾಗಿದೆ. ೨೦೦೪ ರಲ್ಲಿ ಏಕಾಏಕಿ ಸಾವಿರಾರು ಕನ್ನಡಿಗರ ಮನೆ ಮುರಿದು ಅನಾಥರಾಗಿಸಿದ ಅಪರಾಧ ಅರಗಿಸಿಕೊಂಡಿದ್ದ ಪಾರಿಕ್ಕರ್ ಪ್ರಭುತ್ವ ಈ ಬಾರಿಯೂ ಅದೇ ಅಹಂಕಾರದಲ್ಲಿದೆ.

ಈಗ ಜರೂರಾಗಿ ಆಗಬೇಕಿರುವುದು, ಕರ್ನಾಟಕದ ಸಿದ್ದು ಸರ್ಕಾರದ ಪ್ರತಿಕ್ರಿಯೆ. ಗೋವಾ ಕನ್ನಡಿಗರ ನೋವಿಗೆ ಸ್ಪಂದಿಸಲು ತಯಾರಿಲ್ಲದ ಪಾರಿಕ್ಕರ್ ಸರ್ಕಾರದ ಕೊಂಬು ಹಿಡಿದು ಬಗ್ಗಿಸುವ ಸಾತ್ವಿಕ ಸಿಟ್ಟು ಸಿದ್ದು ತೋರಿಸಬೇಕಿದೆ. ಇದು ಅಂತಾರಾಜ್ಯ ಬಾಂಧವ್ಯದ ಪ್ರಶ್ನೆಯಾಗಿ ಸಿದ್ದು ಪರಿಗಣಿಸಬೇಕಿದೆ. ಪದೇ-ಪದೇ ದೌರ್ಜನ್ಯ-ಅನಾಚಾರ ನಡೆಸುವ ಗೋವಾ ಸರ್ಕಾರಕ್ಕೆ ಕೇಂದ್ರ ಸರ್ಕಾರದ ಮೂಲಕ ಪಾಠ ಕಲಿಸಬೇಕಿದೆ. ಗೋವಾ ಕನ್ನಡಿಗರ ಭದ್ರತೆ-ಪುನರ್ವಸತಿಗೆ ಪಾರಿಕ್ಕರ್ ಬದ್ಧವಾಗಲೇಬೇಕು. ಇದು ಸಿಎಂ ಒಬ್ಬನ ಕರ್ತವ್ಯವೂ ಹೌದು.

ಇದು ಒಕ್ಕೂಟ ವ್ಯವಸ್ಥೆಯ ಅನಿವಾರ್ಯತೆ ಎಂಬ ನೀತಿ ಐಐಟಿ ಪ್ರಾಡಕ್ಟ್ ಎಂದು ಬೀಗುವ "ಜಾಣ" ಪಾರಿಕ್ಕರ್‌ಗೆ ತಿಳಿಹೇಳೋರು ಬೇಕಾಗಿದ್ದಾರೆ. ಬೆಕ್ಕಿಗೆ ಗಂಟೆ ಕಟ್ಟೋರು ಯಾರು?!

● ನಹುಷ

ಫೋಟೋಗಳು : ಪ್ರಕಾಶ್ ಭಟ್









ನಯನಾ ಕೃಷ್ಣ ಪಾಪಿಷ್ಠೆ ಆಗಿದ್ದು ಹೇಗೆ?



ತೋಳ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲಂತೆ. ನಯನಾಕೃಷ್ಣ ಎಂಬ ಗಾಂಧಿನಗರದ ಸೋಕಾಲ್ಡ್ ಸನ್ನಿ ಲಿಯೋನ್ ಅರ್ಥಾತ್ ಸೆಕ್ಸಿ ನಟಿ ಸದ್ಯ ಲೋಕ ನಿಂದಿತೆ, ಪಾಪಿಷ್ಠೆ ನಿಕೃಷ್ಟೆ ದುಷ್ಟೆ ಮತ್ತು ಶೀಲಭ್ರಷ್ಟೆ!

ಆಕೆಯನ್ನು ಆಕಾಶ ಪಾತಾಳ ಒಂದು ಮಾಡಿಯಾದರೂ ಹಿಡಿದು ತರುತ್ತೇವೆಂದು ಶಪಥಗೈದ ಸಿಸಿಬಿ ಪೊಲೀಸರ ತಂಡ ಈ ಹೊತ್ತಿಗೆ ಮುಂಬಯಿಯ ಅದ್ಯಾವ ಅಡ್ಡೆಗೆ ದಾಳಿ ಬಿದ್ದಿದೆಯೊ. ಪತ್ರಿಕೆ-ಟೀವಿಗಳಂತೂ ಆಕೆಯ ಕುರಿತಂತೆ ದಿನಕ್ಕೊಂದು ರಸವತ್ತು ಎಪಿಸೋಡು ಬಿತ್ತರಿಸುತ್ತಲೇ ಇವೆ. ಆಕೆ ತನ್ನ ಮಿಕಗಳ ಜೊತೆ ನಡೆಸಿದ ಚಕ್ಕಂದದ ಹಸಿಬಿಸಿ ದೃಶ್ಯಾವಳಿಗಳನ್ನೇ ಕಣ್ಣಿಗೊತ್ತಿಕೊಂಡು ಟೀವಿಗಳು ದಿನಗಟ್ಟಲೇ ಪ್ಯಾನೆಲ್ ಚರ್ಚೆಗಿಳಿದಿವೆ. ಆಕೆ ತಾನೇ ಬೆತ್ತಲಾಗುತ್ತಿದ್ದಳೆಂದು ಒಂದು ಟೀವಿ ಸಂಶೋಧನೆಗಿಳಿದರೆ, ಈಕೆಯ ಬೆತ್ತಲೆ ಜಗತ್ತಿನಲ್ಲಿ ಇಂತಿಂಥಾ ನಟಿಯರೇ ಮಂಚಕ್ಕೇರಿದ್ದಾರೆಂಬುದು ಮತ್ತೊಂದು ಟೀವಿಯ ತನಿಖೆ.

ಹೀಗೆ ತಾನೂ ಬೆತ್ತಲಾಗಿದ್ದಲ್ಲದೆ ತನ್ನ ಗೆಳತಿಯರು, ಟೀವಿ ನಟಿಯರು, ಅವಕಾಶಹೀನ ಸಿನಿಮಾ ನಟಿಯರನ್ನೆಲ್ಲ ತನ್ನ 'ಸೆಕ್ಸ್ ಬ್ಲ್ಯಾಕ್‌ಮೇಲ್' ಜಾಲಕ್ಕೆ ಪಳಗಿಸಿಕೊಂಡ ನಯನಾಕೃಷ್ಣಳ ಜಾತಕ, ಇತಿಹಾಸ, ಭೂಗೋಳ ಎಲ್ಲವನ್ನೂ ಎಪಿಸೋಡುಗಳ ಮೇಲೆ ಎಪಿಸೋಡು ಮಾಡಿ ಜಾಲಾಡುತ್ತಿರುವ ಮೀಡಿಯಾ ಪೌರುಷಕ್ಕೆ ಯಾವ ಪುರಸ್ಕಾರ ತಾನೇ ಸರಿಸಾಟಿಯಾದೀತು?

ಕೊಟ್ಟಿಲ್ಲಪ್ಪೋ

ಪಾಪ; ಸೆಕ್ಸಿ ನಟಿಯ ಸಿಂಗಾರ ಕಂಡು ಜೊಲ್ಲು ಸುರಿಸಿದ ಅದೆಷ್ಟು ಮಂದಿ ಮುಗ್ಧ 'ಮರ್ಯಾದಸ್ಥರು' ದುಡ್ಡು ಕಳಕೊಂಡರೊ! ಏನೂ ಅರಿಯದ ಅದೆಷ್ಟು ಬಡಪಾಯಿ ಡಾಕ್ಟರ್‌ಗಳು ಲಲನೆಯ ಕಣ್‌ಸನ್ನೆ ಮಾತ್ರಕ್ಕೇ ಮಂಚಕ್ಕೇರಿದ್ದರೋ? ಯಾವ ಶ್ರೀಮಂತನನ್ನು ಈ ತಂಡ ಬ್ಲ್ಯಾಕ್‌ಮೇಲ್ ಮಾಡಿ ದುಡ್ಡು ಕಿತ್ತಿದೆಯೊ? ಹೀಗೆ ರೊಕ್ಕಸ್ಥರು, ಚಪಲ ಚನ್ನಿಗರನ್ನೇ ಹುಡು-ಹುಡುಕಿ ಮಂಚಕ್ಕೆಳೆದು ದೋಚುವ 'ಸೆಕ್ಸಿ ಗ್ಯಾಂಗ್' ಇರುವುದರಿಂದಲೇ ತಾನೆ ರಸಿಕ ಶಿಖಾಮಣಿಗಳು ಮೋಸ ಬೀಳುವುದು?

ನಾಯಿ ಕೊಡೆಗಳೋಪಾದಿಯಲ್ಲಿ ಹುಟ್ಟಿಕೊಂಡ ಕನ್ನಡದ ಯಾವುದೇ ನ್ಯೂಸ್ ಚಾನಲ್ಲನ್ನು ಆನ್ ಮಾಡಿದರೂ ನಯನಾಕೃಷ್ಣಳ ಬ್ಲ್ಯಾಕ್‌ಮೇಲ್ ಪ್ರಕರಣದ ಪ್ಯಾನೆಲ್ ಡಿಸ್ಕಷನ್ ಇದಕ್ಕಿಂತಲೂ ಭಿನ್ನವಾಗಿಲ್ಲ, ನಾಲಿಗೆ ಚಪ್ಪರಿಸಿಕೊಂಡು, ಜೊಲ್ಲು ಸುರಿಸುತ್ತಲೇ ಆಕೆಯ ಬೆತ್ತಲೆ ದೃಶ್ಯಾವಳಿಗಳನ್ನ ಬಿತ್ತರಿಸಿ ಬ್ರೇಕಿಂಗ್ ನ್ಯೂಸ್ ಮಾಡುತ್ತಿರುವ ಟೀವಿಗಳ ವೀರಾವೇಶವನ್ನು ಎಂಥವರೂ ಮೆಚ್ಚಬೇಕಾದದ್ದೆ.

ನಯನಾಕೃಷ್ಣ ಓರ್ವ ಬ್ಲ್ಯಾಕ್‌ಮೇಲರ್ ನಿಜ. ಆಕೆಯ ಹಂಗಿಗೆ ಬಿದ್ದು ಬೆತ್ತಲಾದ ರಿಹಾನಾ ಎಂಬ ಮತ್ತೊಬ್ಬ ಯುವತಿಯೂ ಪಾಪಿಯೇ. ಇಂಥ ಲಜ್ಜೆಗೆಟ್ಟ ಹೆಂಗಸರನ್ನು ಮುಂದಿಟ್ಟುಕೊಂಡು ರೊಕ್ಕಸ್ಥರನ್ನು ದೋಚಲು ನಿಂತ ಕೆ.ಜಿ.ನಗರ ಪೊಲೀಸ್ ಠಾಣೆಯ ಪೇದೆ ಮಲ್ಲೇಶನನ್ನು ಸಿಸಿಬಿ ಪೊಲೀಸರು ಜೈಲಿಗಟ್ಟಿರುವುದು ನ್ಯಾಯವೆ. ಯುವತಿಯೊಬ್ಬಳನ್ನು ಪ್ರೀತಿಸಿ ಕಣ್ಣು ಕಳೆದುಕೊಂಡ ಜಿಮ್ ರಘುವನ್ನೂ ಅಷ್ಟೇ ನಾಜೂಕಾಗಿ ಪೊಲೀಸರು ಹಿಡಿದು ಜೈಲಿಗೆ ಹಾಕಿದ್ದೂ ಶ್ಲಾಘನೀಯ. ಅದೇರೀತಿ ಟೀವಿ ಚಾನಲ್ಲೊಂದರ ಪ್ರೋಗ್ರಾಂ ಎಡಿಟರ್ ಹೇಮಂತ್ ಮತ್ತು ಅದೇ ಚಾನಲ್ಲಿಗೆ ಬಾಡಿಗೆ ಕ್ಯಾಬ್‌ಗಳನ್ನು ಸರಬರಾಜು ಮಾಡುತ್ತಿರುವ ಸುನೀಲನನ್ನೂ ಪೊಲೀಸರು ಹಿಡಿದು ಲಾಕಪ್ಪಿಗೆ ಹಾಕಿದ್ದಾರೆ.


ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂಬುದರಲ್ಲಿ ಎರಡು ಮಾತಿಲ್ಲ, ಬಹುಶಃ ನಯನಾಕೃಷ್ಣ ಎಂಬ ಸೆಕ್ಸಿ ನಟಿಯ ಹೆಸರು ಈ ಪ್ರಕರಣದಲ್ಲಿ ಕೇಳಿ ಬರದಿದ್ದರೆ ಈ ಬಗ್ಗೆ ಮೀಡಿಯಾಗಳಾಗಲಿ ಪೊಲೀಸರಾಗಲಿ ಇಷ್ಟೊಂದು ತಲೆ ಕೆಡಿಸಿಕೊಳ್ಳುತ್ತಿದ್ದರಾ ಗೊತ್ತಿಲ್ಲ, ಈ ನಯನಾಕೃಷ್ಣ ಎಂಬಾಕೆಯ ಹೆಸರನ್ನು ಜನ ಮೊದಲ ಬಾರಿಗೆ ಕೇಳಿದ್ದು ಇಲ್ಲಿಗೆ ವರ್ಷದ ಹಿಂದೆ. 'ಕೊಟ್ಟಿಲ್ಲಪ್ಪೋ ಕೈ' ಚಿತ್ರದ ವಂಚಕ ಡೈರೆಕ್ಟರ್ ರುಪಿ ಅಲಿಯಾಸ್ ಲಡ್ಡು ನಾಗರಾಜನನ್ನು, ಆತನ ಪತ್ರಿಕಾಗೋಷ್ಠಿಗೇ ನುಗ್ಗಿ 'ಚಪ್ಪಲಿ ಸೇವೆ' ಮಾಡಿದವಳು ನಯನಾಕೃಷ್ಣ!

ಈವೆಂಟ್!

ಆವತ್ತು ಹಿಂಡುಗಟ್ಟಲೆ ಹೆಂಗಸರೊಂದಿಗೆ ಈಕೆಯ ಜೊತೆ ಲಡ್ಡು ನಾಗರಾಜನಿಗೆ ಚಪ್ಪಲಿ ಏಟು ಹಾಕಿದ ಮಹಿಳಾ ಸಂಘಟನೆಯೊಂದರ ಸೋಕಾಲ್ಡ್ ಅಧ್ಯಕ್ಷೆ ಅನಿತಾ



ವಂಚಕ ರುಪಿ ಅಲಿಯಾಸ್ ಲಡ್ಡು ನಾಗರಾಜ



ಈಕೆಯ ಖಾಸಾ ಅಕ್ಕ. ಪ್ರಾರಂಭದಲ್ಲಿ 'ರಂಭಾ' ಎಂಬ 'ಎ' ಸರ್ಟಿಫಿಕೇಟು ಚಿತ್ರದ ಮೂಲಕ ಗಾಂಧಿನಗರಕ್ಕೆ ಎಂಟ್ರಿ ಕೊಟ್ಟ ನಯನಾಕೃಷ್ಣ ತನ್ನನ್ನು ತಾನೇ 'ಸನ್ನಿ ಲಿಯೋನ್' ಎಂದು ಘೋಷಿಸಿಕೊಂಡಳು. ವಯಸ್ಸು, ಯೌವನ, ಸೌಂದರ್ಯ ಎಲ್ಲವೂ ಇತ್ತು, ಗಾಂಧಿನಗರಕ್ಕೆ ಬರುವುದಕ್ಕೂ ಮುನ್ನ ಕೆಲಕಾಲ ಮುಂಬಯಿಯಲ್ಲಿದ್ದಳು. ಅಲ್ಲಿ ತಾನೊಬ್ಬಳು ಮಾಡೆಲ್ ಎಂದುಕೊಂಡೇ ಬಾಲಿವುಡ್‌ನ ಹೆಸರಾಂತ ಡೈರೆಕ್ಟರ್‌ಗಳ ಮನೆ ಬಾಗಿಲು ಬಡಿದಳು. ಆದರೆ ಸಿಕ್ಕಿದ್ದು ಮಾತ್ರ ಐಟಮ್ ಸಾಂಗ್‌ನ ಅರೆಬೆತ್ತಲೆ ಡ್ಯಾನ್ಸರ್ ಪಾತ್ರಗಳು!

ಮೂಲತಃ ಶಿವಮೊಗ್ಗದ ಕೃಷ್ಣಪ್ಪ ಎಂಬಾತನ ಮಗಳಾದ ಈಕೆಗೊಬ್ಬ ತಮ್ಮನಿದ್ದಾನೆ. ಅಕ್ಕ ಬೆಂಗಳೂರಿನಲ್ಲಿ ಗೃಹಿಣಿಯಾಗಿದ್ದರಿಂದ ತಂದೆಯ ಸಾವಿನ ನಂತರ ಬದುಕಲು ಬೇರೆ ದಾರಿ ಕಾಣದೆ ಬೆಂಗಳೂರಿಗೆ ಬಂದವಳು ನಯನಾ. ವಯಸ್ಸಾದ ತಾಯಿ ಜೊತೆ ಎಂ.ಎಸ್. ರಾಮಯ್ಯ ಕಾಲೇಜ್ ಎದುರಿಗೆ ಬಾಡಿಗೆ ಮನೆಯೊಂದನ್ನು ಹಿಡಿದಳು. ತಾನು ಅದೆಂಥದೋ Event ನಡೆಸುತ್ತೇನೆಂದು ಓಡಾಡಿಕೊಂಡಿದ್ದಳು. ಅದೇನದು Event ಎಂದರೆ ಮಾಡೆಲಿಂಗು, ಫ್ಯಾಷನ್ ಷೋ ಎನ್ನುತ್ತಿದ್ದಳು. ಈ ರೀತಿ Event ಸಂಘಟಿಸುವುದಕ್ಕೆಂದೇ ನ್ಯೂ ಬಿಇಎಲ್ ರಸ್ತೆಯಲ್ಲಿ ಐಷಾರಾಮೀ ಆಫೀಸೊಂದನ್ನು ತೆರೆದಳು. ಅಲ್ಲಿಗೆ ತರಹೇವಾರಿ ಮಾಡೆಲ್ ಹುಡುಗಿಯರು, ಟೀವಿ ನಟಿಯರು, ಅವರ ರಕ್ಷಣೆಗೆಂದು ಬೌನ್ಸರ್‌ಗಳು, ರಿಯಲ್ ಎಸ್ಟೇಟ್ ಕುಳಗಳು, ಟೀವಿ ಚಾನಲ್ಲುಗಳ ಕ್ರೈಂ ರಿಪೋರ್ಟರ್‌ಗಳು ಎಲ್ಲರೂ ಬರುತ್ತಿದ್ದರು.

ಇದಕ್ಕೂ ಮುನ್ನ ನಯನಾ ಗಾಂಧಿನಗರದ ಖ್ಯಾತ ಡೈರೆಕ್ಟರ್ ರಾಮಮೂರ್ತಿಯ 'ರಂಭಾ' ಹೆಸರಿನ 'ಎ' ಕ್ಯಾಟಗರಿ ಚಿತ್ರಕ್ಕೆ ನಾಯಕಿಯಾಗಿದ್ದಳು. ಈಸ್ಟ್‌ಮನ್ ಕಲರ್ ಕಾಲದ ಮಲೆಯಾಳಿ 'ಎ' ಸರ್ಟಿಫಿಕೇಟು ಸಿನಿಮಾ ಶೈಲಿಯಲ್ಲೇ ರೂಪುಗೊಂಡ 'ರಂಭಾ' ದೊಡ್ಡ ನಟರಿದ್ದ ಚಿತ್ರವಾಗಲಿ, ಶ್ರೇಷ್ಠ ಕತೆಯಾಗಲಿ ಇದ್ದ ಚಿತ್ರವಾಗಿರಲಿಲ್ಲ, ಅದೊಂದು ಶುದ್ಧ ಹಲ್ಕಾ ಚಿತ್ರ. ನಯನಾ ಬಿಂದಾಸ್ ಆಗಿ ನಟಿಸಿದ್ದು, ಚಿತ್ರದ ಪೋಸ್ಟರ್‌ಗಳಲ್ಲಿ 'ಎದೆ'ಗಾರಿಕೆ ತೋರಿದ ಒಂದೇ ಕಾರಣಕ್ಕೆ ಪೋಲಿ ಪ್ರೇಕ್ಷಕ ವರ್ಗ ಮುಗಿಬಿದ್ದು ನೋಡಿತ್ತು, ಇಪ್ಪತ್ತೋ ಮೂವತ್ತೋ ಲಕ್ಷದ ವೆಚ್ಚದಲ್ಲಿ ತಯಾರಾದ 'ರಂಭಾ' ಸದ್ದುಗದ್ದಲವಿಲ್ಲದೆ ಬಿ ಮತ್ತು ಸಿ ಸೆಂಟರ್‌ಗಳಲ್ಲಿ ಕಿಕ್ಕಿರಿದ ಪಡ್ಡೆ ಹುಡುಗರಿಂದ ತುಂಬಿಹೋಯಿತು. ಬಿಡುಗಡೆಯಾದ ಒಂದೇ ತಿಂಗಳಲ್ಲಿ ಹಾಕಿದ ಬಂಡವಾಳ ಕಳೆದು ಐವತ್ತು ಲಕ್ಷ ರೂಪಾಯಿಗಳ ಲಾಭ ಬಂದಿತ್ತು!

ಲಡ್ಡು ನಾಗ!

ಟೀವಿ ರೈಟ್ಸ್‌ನ ದುಡ್ಡಿಲ್ಲದೆ, ಜಾಹಿರಾತು, ಗಿಮಿಕ್ ಏನೊಂದು ಇಲ್ಲದೆ ಕೇವಲ 30 ಲಕ್ಷದಲ್ಲಿ ಸಿನಿಮಾ ಮುಗಿಸಿ ಐವತ್ತು ಲಕ್ಷದ ಲಾಭ ಕಾಣುವುದು ಸಣ್ಣ ಮಾತೇನಲ್ಲ, ಸಿನಿಮಾ ಪಂಡಿತರೇ ಬೆರಗಾಗಿ ಹೋದರು. ಗಾಂಧಿನಗರವಂತೂ 'ರಂಭಾ' ಮಾಡಿಕೊಟ್ಟ ಲಾಭದ ಬಗ್ಗೆಯೇ ವಿಪರೀತ ತಲೆ ಕೆಡಿಸಿಕೊಂಡಿತ್ತು, ಇದನ್ನೆ ಬರಗೆಟ್ಟ ಬಕನಾಸಿಯಂತೆ ಬಳಸಿಕೊಂಡವನು ಹುಟ್ಟಾ ವಂಚಕ ಲಡ್ಡು ನಾಗರಾಜ. ಒಂದಾನೊಂದು ಕಾಲಕ್ಕೆ ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡಿಕೊಂಡಿದ್ದು ಕ್ರಮೇಣ ಬೇಕರಿಗಳಿಗೆ ಲಡ್ಡು ಹಾಕಿಕೊಂಡಿದ್ದ ಲಡ್ಡು ನಾಗ ವಸಂತನಗರದ ಉದ್ಯಮಿಯೊಬ್ಬರ ಮಗಳನ್ನು ಕೆಣಕಿ ನಡುರಸ್ತೆಯಲ್ಲೇ ಜನರಿಂದ ಒದೆ ತಿಂದಿದ್ದ.

ಹೀಗೆ ಹುಡುಗೀರ ಹುಚ್ಚಿಗೆ ಬಿದ್ದೇ ತಾನು ಸಿನಿಮಾ ಹಾಡು ಬರೀತೀನಿ ಎಂದು ಓಡಾಡಿಕೊಂಡಿದ್ದ ಲಡ್ಡು ನಾಗ 2005ರ ಹೊತ್ತಿಗೆ ತನ್ನ ಹೆಸರನ್ನು ರುಪಿ ಎಂದು ಬದಲಿಸಿಕೊಂಡು 'ಮರಭೂಮಿ' ಎಂಬ ಚಿತ್ರ ಮಾಡ್ತೀನಿ ಎಂದು ರೈಲು ಬಿಟ್ಟ. ಬಟ್ಟೆ ಅಂಗಡಿ ಇಟ್ಟಿದ್ದ ಮಂಜಮ್ಮ ಎಂಬ ವಿಧವೆ ಸಾಲ ಮಾಡಿ 8 ಲಕ್ಷ ತಂದುಕೊಟ್ಟಳು. ಅದನ್ನೇ ಬಂಡವಾಳ ಮಾಡಿಕೊಂಡ ಲಡ್ಡು ನಾಗ ಬಾಡಿಬಿಲ್ಡರ್ ಸ್ವಾಮಿ, ನಂಜನಗೂಡಿನ ವಿಜಯ್‌ಕುಮಾರ್, ದಾವಣಗೆರೆಯ ಸುದೇಶ್, ಮೈಸೂರಿನ ಫೈನಾನ್ಶಿಯರ್ ಜೆ.ಟಿ. ಪ್ರಕಾಶ್, ಚಂದ್ರಾಲೇಔಟಿನ ಚಂದ್ರಶೇಖರ್ ಇತ್ಯಾದಿ ಸಿನಿಮಾ ಪ್ರಿಯರಿಂದ ತಲಾ ಹತ್ತತ್ತು ಲಕ್ಷದಂತೆ ಕಿತ್ತು 'ಮರಭೂಮಿ' ಚಿತ್ರ ಶುರು ಹಚ್ಚಿಕೊಂಡಿದ್ದ.

ಅದೇನಾಯಿತೋ 'ರಂಭಾ' ಹಿಟ್ಟಾಗಿದ್ದೆ 'ಮರಭೂಮಿ'ಯನ್ನು ಅರ್ಧಕ್ಕೆ ಕೈಬಿಟ್ಟು ನಯನಾಳ ಬೆನ್ನು ಬಿದ್ದ. ಮರಭೂಮಿಗೆ ದುಡ್ಡು ಹಾಕಿದ್ದ ಬರೋಬ್ಬರಿ ಒಂದು ಡಜನ್ ಬಂಡವಾಳಗಾರರು ಬೀದಿಗೆ ಬಿದ್ದರು. ದುಡ್ಡು ವಸೂಲಿಗೆ ಬಂದವರನ್ನು ಕಪಾಲಿ ಆನಂದ ಎಂಬ ಭೂಗತ

ಪೊನ್ನಾಚಿ ಕಾಡಿನಲ್ಲಿ ಕಾರಿನಿಂದಿಳಿದ ಆ ಹುಡುಗಿ

ಇಲ್ಲಿಗೆ ವಾರದ ಹಿಂದೆ ಕೊಳ್ಳೇಗಾಲ ಪೊಲೀಸರು ಕಾರಿನ ನಂಬರೊಂದನ್ನು ಹಿಡಿದು ಸಿಸಿಬಿ ಪೊಲೀಸರಿಗೆ ರವಾನಿಸಿದ ಮಾಹಿತಿ ವಿಚಿತ್ರವಾಗಿತ್ತು, ಅದು ಮೂವರು ಯುವತಿಯರು ತಮಿಳುನಾಡು ಗಡಿಯ ಪೊನ್ನಾಚಿಯಲ್ಲಿ ತಮ್ಮ ಕಾರು ಬಿಟ್ಟು ನಾಪತ್ತೆಯಾದ ಕತೆ!

ಹಾಗೆ ಕೊಳ್ಳೇಗಾಲದ ಕಾಡಿನಲ್ಲಿ ಯುವತಿಯರು ಬಿಟ್ಟು ಹೋದ ಕಾರು ನಯನಾಳದ್ದಾಗಿತ್ತು, ತನ್ನ ಕಾರನ್ನು ತಮಿಳುನಾಡು ಗಡಿಯಲ್ಲಿ ಬಿಟ್ಟು ಹೋಗುವಷ್ಟು ಪೆದ್ದಿ ನಯನಾ ಅಲ್ಲ, ಅದರರ್ಥ ತಮಿಳುನಾಡು ಗಡಿಯಲ್ಲಿ ಕಾರು ಪತ್ತೆಯಾದಾಕ್ಷಣ ಪೊಲೀಸರು ಯಾಮಾರಿ ತನ್ನನ್ನು ತಮಿಳುನಾಡಿನಲ್ಲಿ ಹುಡುಕಬಹುದು ಎಂಬ ತಂತ್ರ ಆಕೆಯದಾಗಿತ್ತು.

ಆದರೆ ಜಿಮ್ ರಘು ಆ ಹೊತ್ತಿಗಾಗಲೇ ಸಿಕ್ಕಿಬಿದ್ದು ನಯನಾ ಮುಂಬಯಿಯಲ್ಲಿದ್ದಾಳೆಂದು ಬಾಯಿ ಬಿಟ್ಟಿದ್ದ. ಬಹುಶಃ ನಯನಾ ಈ ಹೊತ್ತಿಗೆ ಮುಂಬಯಿಯಲ್ಲಿ ಪೊಲೀಸರ ಕೈ ಎಟುಕಲಾಗದ ಅಡಗುತಾಣದಲ್ಲಿ ಮಾಯವಾಗಿರಬೇಕು. ಹೊಟ್ಟೆಪಾಡಿಗೆ ಡ್ಯಾನ್ಸ್‌ಬಾರುಗಳಿವೆ. ಲೇಡಿಸ್ ಸರ್ವೀಸ್ ಬಾರುಗಳಲ್ಲೂ ಅಷ್ಟಿಷ್ಟು ದುಡಿಯಬಹುದು. ಇನ್ನೂ ಆಸೆಪಟ್ಟರೆ ಸಿನಿಮಾಗಳಲ್ಲಿ ಗ್ರೂಪ್ ಡ್ಯಾನ್ಸರ್‌ಗಳಾಗಿರಬಹುದು. ಇದ್ಯಾವುದೂ ಬೇಡವೆಂದರೆ ಮೈ ಕಸುಬಿನ ಹೈಟೆಕ್ ಆವೃತ್ತಿಯಾದ ಎಸ್ಕಾರ್ಟಿಂಗ್ ಇದ್ದೇ ಇದೆ. ಕೈತುಂಬಾ ದುಡ್ಡೂ ಸಿಗುತ್ತದೆ. ಇಂಥ ಯಾವ ಹಾದಿಯಲ್ಲಿ ನಯನಾ ಮತ್ತಾಕೆಯ ಗೆಳತಿ ನಡೆಯುತ್ತಾರೋ ಬಲ್ಲವರ್ಯಾರು?

ಅಂದಹಾಗೆ ಪೊನ್ನಾಚಿನಲ್ಲಿ ಕಾರಿನಿಂದಿಳಿದದ್ದು ಸ್ವತಃ ನಯನಾಳಾ ಅಥವಾ ದಿಕ್ಕು ತಪ್ಪಿಸಲೆಂದೇ ಬಳಕೆಯಾದ ಆಕೆಯ ಗೆಳತಿಯರಾ? ಆ ಮೂರನೇ ಯುವತಿ ಯಾರು?

ಸಿಸಿಬಿ ಲಾಕಪ್ಪಿನಲ್ಲಿ ಜಿಮ್ ರಘು ಹೇಳಿದ್ದು

ಟೀವಿ ಎಡಿಟರ್ ಹೇಮಂತ್, ಕ್ಯಾಬ್‌ಸಪ್ಲೈಯರ್ ಸುನೀಲ್ ಹಾಗೂ ಪೊಲೀಸ್ ಪೇದೆ ಮಲ್ಲೇಶ್ ಹೊರತುಪಡಿಸಿದರೆ 'ಹನಿ ಟ್ರ್ಯಾಪ್' ಜಾಲದ ಲೇಟೆಸ್ಟ್ ಪಾತ್ರಧಾರಿಯಾಗಿ ಸಿಕ್ಕಿಬಿದ್ದವನು ಜಿಮ್ ರಘು. ಈತನ ಹೇಳಿಕೆಯನ್ನೇ ನಂಬುವುದಾದರೆ; ಜೂನ್ 19ರಂದು ಹೈಗ್ರೌಂಡ್ಸ್ ವ್ಯಾಪ್ತಿಯಲ್ಲಿ ಹೇಮಂತ್ ಮತ್ತು ಸುನೀಲ್ ಪೊಲೀಸರಿಗೆ ಸಿಕ್ಕಿಬಿದ್ದ ನಂತರ ನಯನಾ ಸೇರಿದಂತೆ ತಂಡದ ಎಲ್ಲರೂ ರಾತ್ರಿ ಸೇರಿದ್ದು ಪೇದೆ ಮಲ್ಲೇಶನ ಡಿಜೆ ಹಳ್ಳಿಯ ಮನೆಯಲ್ಲಿ, ಆತನೇ ಹೇಳಿದಂತೆ...




ನನ್ನ ಎರಡೂ ಕಣ್ಣುಗಳನ್ನು ಪ್ರೀತಿಗೆ ಬಿದ್ದು ಕಳಕೊಂಡ ನಂತರ ನನ್ನ ದುರ್ಗತಿಗೆ ಮರುಗಿಯೇ ಉಮಾ (ಹೆಸರು ಬದಲಿಸಿದೆ) ಎಂಬ ಹುಡುಗಿ ಪ್ರೀತಿಸತೊಡಗಿದಳು. ಅದೇ ಹೊತ್ತಿಗೆ ಟೀವಿಯ ರಿಪೋರ್ಟರ್ ಒಬ್ಬರ ಮೂಲಕ ನಯನಾ ಪರಿಚಯವಾಯ್ತು. ಏನು ಮಾಡಿಯಾದರೂ ನಾನು ಹೋದ ಕಣ್ಣನ್ನು ಪಡೆಯಲೇಬೇಕಿತ್ತು, ಅದಕ್ಕೆ ನಯನಾ ಬಳಿ ಹೇಳಿಕೊಂಡು ಕಣ್ಣೀರಿಟ್ಟೆ. ಆಗ ನಯನಾ ಹೇಳಿದ್ದು; ಓಕೆ ನಿನಗೆ ಫಾರಿನ್‌ನಲ್ಲಾದರೂ ಆಪರೇಷನ್ ಮಾಡಿಸಿ ವಾಪಸ್ಸು ಕಣ್ಣು ಬರಿಸೋಣ. ಹೆಚ್ಚೂಕಮ್ಮಿ 1 ಕೋಟಿ ಖರ್ಚು ಬರುತ್ತೆ. ಅದಕ್ಕೆ ದುಡ್ಡು ಬೇಕೆಂದರೆ ನೀನೂ ನನ್ನ ಜೊತೆ ಕೈಜೋಡಿಸಬೇಕು.

ನನ್ನ ಬಳಿ ಸುಮಾರು ಹುಡುಗಿಯರಿದ್ದಾರೆ. ಅವರನ್ನು ರೊಕ್ಕಸ್ಥರಿಗೆ ಬಿಟ್ಟು sting operation ಮಾಡಿಸಿ ದುಡ್ಡು ಕೀಳಬಹುದು. ನೀನು ಅಂಥವರನ್ನು ಹಿಡಕೊಂಡು ಬಾ... ಎಂದಳು. ಅದೇ ರೀತಿ ನಾನು ಹೈಗ್ರೌಂಡ್ಸ್‌ನ ಡಾಕ್ಟರ್‌ನನ್ನು ಬುಟ್ಟಿಗೆ ಬೀಳಿಸಿಕೊಂಡೆ. ಪನ್ನ ಜೊತೆ ರಿಹಾನಾ ಇದ್ದಳು. ಏನು ಮಾಡೋದು ಟೈಮೇ ಸರಿ ಇಲ್ಲವೇನೋ ಸಿಕ್ಕಿಬಿದ್ದೆವು.

ಆವತ್ತು ರಾತ್ರಿ ಪೊಲೀಸ್ ಮಲ್ಲೇಶ್ ಮನೆಯಿಂದ ಹೊರಟವನು ಸೀದಾ ಶಿರಡಿಗೆ ಹೋದೆ. ಏನು ಗ್ರಾಚಾರ ನೋಡಿ, ನಾನು ಅತ್ತ ಶಿರಡಿಗೆ ಹೋಗುತ್ತಿದ್ದಂತೆಯೇ ಸಿಸಿಬಿ ಪೊಲೀಸರು ನನ್ನ ಗರ್ಲ್‌ಫ್ರೆಂಡ್ ಉಮಾಳನ್ನು ಬುಟ್ಟಿಗೆ ಹಾಕಿಕೊಂಡರು. ಶಿರಡಿಯಿಂದ ಮಂತ್ರಾಲಯಕ್ಕೆ ಹೋಗಿ ಅಲ್ಲಿಂದ ಬೆಂಗಳೂರಿಗೆ ಬರುವಾಗ ಮಾರ್ಗಮಧ್ಯೆ ಚಿಕ್ಕಬಳ್ಳಾಪುರಕ್ಕೆ ಉಮಾಳನ್ನು ಬರಹೇಳಿದ್ದೆ, ನನಗೇನು ಗೊತ್ತಿತ್ತು ಉಮಾಳೇ ನನ್ನನ್ನು ಪೊಲೀಸರಿಗೆ ಹಿಡಿದುಕೊಡ್ತಾಳೆ ಅಂತ! ನಯನಾ ಬಾಂಬೆಯಲ್ಲಿರುವ ಮಾಹಿತಿಯನ್ನೂ ನಾನೇ ಬಾಯಿಬಿಟ್ಟೆ.

ಚಿಕ್ಕಬಳ್ಳಾಪುರದಲ್ಲಿ ಪೊಲೀಸರ ಕೈಗೆ ಸಿಕ್ಕಿಬಿದ್ದು ಈ ಗತಿಯಾಯ್ತು. ಇನ್ನು ನನ್ನ ಕಣ್ಣು ಮೊದಲಿನಂತಾಗುವುದೆಲ್ಲಿ ಸಾಧ್ಯ ಹೇಳಿ. ಯಾಕೋ ಟೈಮೇ ಸರಿ ಇಲ್ಲ...!

ಇದು ಸಿಸಿಬಿ ಲಾಕಪ್ಪಿನಲ್ಲಿ ಜಿಮ್ ರಘು ಮರುಗಿದ ರೀತಿ!



ಕಮೀಷನರ್ ಔರಾದ್‌ಕರ್

...ರನ್ನ ಮುಂದಿಟ್ಟುಕೊಂಡೇ ದಬಾಯಿಸಿದ್ದ. ಹೇಗೂ ...ಹಿಟ್ಟಾಗಿದೆಯಾದ್ದರಿಂದ ನಯನಾಳನ್ನು ಹಾಕಿಕೊಂಡ ...ಕ್ಯಾಟಗರಿಯ ಮತ್ತೊಂದು ಸೆಕ್ಸ್ ಚಿತ್ರ ಮಾಡಿಬಿಟ್ಟರೆ ...ಟ್ಟಿ ದುಡ್ಡು ಬಾಚಬಹುದೆಂಬುದು ಲಡ್ಡು ನಾಗನ ...ಶೆ. ಅದಕ್ಕೆಂದು ಕಪಾಲಿ ಆನಂದ್‌ನನ್ನು ...ದಿಟ್ಟುಕೊಂಡೇ 'ಕೊಟ್ಟಲ್ಲಪ್ಪೋ ಕೈ' ಚಿತ್ರ ...ಬಿಟ್ಟುಕೊಂಡ.

ರುಪಿಯ ದೋಖಾ!

...ನಯನಾಳಿಗಾಗಿಯೇ ಲಡ್ಡು ನಾಗರಾಜ ತನ್ನ ಹೆಸರನ್ನು ...ಎಂದು ಬದಲಿಸಿಕೊಂಡಿದ್ದ. ಅಂತಾ ರಂಭಾ ಚಿತ್ರವೇ ...ಲಕ್ಷ ಬಾಚಿರುವಾಗ ತಾನು ಮಾಡುವ ಚಿತ್ರ ಕನಿಷ್ಠ ...ಕೋಟಿಯಾದರೂ ದುಡಿಯುತ್ತದೆ ಎಂಬುದು ನಾಗನ ...ಶೆಯಾಗಿತ್ತು. ಕಪಾಲಿ ಆನಂದ್ ತಮ್ಮದೇ 'ಲಕ್ಷ್ಮೀಶ್ರೀ' ...ನ್ಸ್ ಲಾಂಛನದಲ್ಲಿ ನಿರ್ಮಿಸಿ ಅದಕ್ಕೆಂದು 40 ...ಷ್ಟು ಬಂಡವಾಳ ಹಾಕಿದ್ದರೆ ನಾಯಕಿ ನಯನಾ ...ಂದಲೋ ಸಾಲ ಎತ್ತಿ 30 ಲಕ್ಷ ಹೊಂಚಿಕೊಟ್ಟಳು. ...ದೆ ಮೈಸೂರಿನ ಕೊರಿಯರ್ ವೆಂಕಟೇಶ್, ...ನಂದ್, ಹೀರೋ ಧನುಷ್, ದೇವರಾಜ್, ಕಂಟ್ರ್ಯಾಕ್ಟರ್ ...ಶ್ ಮುಂತಾದವರಿಂದ ತಲಾ 8 ರಿಂದ 20 ...ತನಕ ರುಪಿ ದುಡ್ಡೆತ್ತಿದ್ದ.

...ಪರ್ಯಾಸವೆಂದರೆ ರುಪಿಗೆ ಸಿನಿಮಾದ ಗಂಧಗಾಳಿಯೇ ...ರಲಿಲ್ಲ. ಅವನೊಬ್ಬ ಹುಟ್ಟಾ ವಂಚಕ ಎಂಬುದನ್ನು ...ಕತೆ, ಸ್ಕ್ರೀನ್‌ಪ್ಲೇ, ಕ್ಯಾಮರಾ ಕಾಗುಣಿತ, ನಿರ್ದೇಶನ ...ಂದೂ ಗೊತ್ತಿಲ್ಲದ ರುಪಿ ಶೂಟಿಂಗ್ ಮಾಡ್ತೀನಿ ...ನಯನಾಳನ್ನು ಅಲ್ಲಿ ಇಲ್ಲಿ ಸುತ್ತಾಡಿಸುತ್ತಿದ್ದ. ಅರ್ಧ ...ಂಗ್ ಹೊತ್ತಿಗೇ 1 ಕೋಟಿಯಷ್ಟನ್ನು ಹುಡಿ ಹಾರಿಸಿದ್ದ ...ಸಿದ ದುಡ್ಡನ್ನು ತನ್ನ ತಮ್ಮನ ಹೆಸರಲ್ಲಿ ಮಲ್ಲೇಶ್ವರ ...ವೈಯಾಲಿಕಾವಲ್‌ಗಳಲ್ಲಿ ಎರಡು ಜಿಮ್ಮುಗಳನ್ನು ... ಈಗಾಗಲೇ ಲಕ್ಷಗಟ್ಟಲೇ ದುಡ್ಡು ಸುರಿದಿದ್ದ ಕಪಾಲಿ ...ದ್ ಮತ್ತು ನಯನಾ ಲಡ್ಡು ರುಪಿಯ ದಗಲುಬಾಜಿ ...ನೋಡಿಯೇ ಕಂಗಾಲಾದರು. ಹಾಕಿದ ದುಡ್ಡೂ ...ಸಿನಿಮಾ ಶೂಟಿಂಗೂ ಮುಗಿಯಲಿಲ್ಲ. ಕನಿಷ್ಠ ...ಬರ್ಧ ಚಿತ್ರವನ್ನಾದರೂ ಪಹಿಸಿಕೊಡು ಎಂದರೆ ...ಲಡ್ಡು ನಾಗ ಬಿಡುವುದಿಲ್ಲ. ತಾನು ಹೀರೋಯಿನ್ ...ಪಾಲ್ತಿಗೆ ಬಂದರೆ ಸಿಕ್ಕಾಪಟ್ಟೆ ದುಡ್ಡು ಮಾಡಬಹುದು, ...ರೂಪಿಸಿಕೊಳ್ಳಬಹುದು ಎಂಬ ಆಶೆಯಿಟ್ಟೇ ನಯನಾ ...ಲಕ್ಷದ ಬಂಡವಾಳ ಹಾಕಿದ್ದಳು.

ಚಪ್ಪಲಿ ಏಟು

...ಪಾವತ್ತು ಹಾಕಿದ ದುಡ್ಡಿಗೂ ರುಪಿ ಕೈ ಎತ್ತಿದನೋ ...ಸಿಲ್ಲದೆ ಸಂಜಯ ನಗರ ಪೊಲೀಸ್ ಠಾಣೆಗೆ ದೂರು ...ಳು. ಪೊಲೀಸರು ಕೊಟ್ಟ ದುಡ್ಡಿಗೆ ರುಪಿಯಿಂದ ...ಬರೆಸಿಕೊಟ್ಟರೇ ಹೊರತು ಹೆಚ್ಚೇನೂ ಮಾಡಲಿಲ್ಲ. ...ವರೆ ರುಪಿ ದುಡ್ಡೆಲ್ಲಾ ಸಿನಿಮಾಕ್ಕೇ ಹಾಕಿದ್ದೀನಿ ಎಂದು ...ಬಿಡುತ್ತಿದ್ದ. ವಾಸ್ತವವಾಗಿ ಖರ್ಚಾಗಿದ್ದು ಕೇವಲ 30 ಲಕ್ಷವಾದರೂ ನಾಗ 1 ಕೋಟಿಯ ಲೆಕ್ಕ ತೋರಿಸುತ್ತಿದ್ದ. ಅದಕ್ಕೆ ನಯನಾ ಮತ್ತೊಂದು ವರಸೆ ತೆಗೆದು, ತನಗೆ ಹುಬ್ಬಳ್ಳಿ ಸೇರಿದಂತೆ ಉತ್ತರ ಕರ್ನಾಟಕದ ಹಕ್ಕನ್ನು ಬರೆದುಕೊಡುವಂತೆ ಹಠಕ್ಕೆ ಬಿದ್ದಳು. ಗಾಂಧಿನಗರದ ಮತ್ತೊಬ್ಬ ನಿರ್ಮಾಪಕ ರಮೇಶ್ ಯಾದವ್ ಕಾಲಿಗೆ ಬಿದ್ದು ನ್ಯಾಯ ಕೊಡಿಸುವಂತೆ ಕಣ್ಣೀರಿಟ್ಟಳು.



ರಮೇಶ್ ಯಾದವ್ ಇಬ್ಬರನ್ನೂ ಕೂರಿಸಿ ಅಗ್ರಿಮೆಂಟ್ ಮಾಡಿಸಿಕೊಟ್ಟರಾದರೂ ಪಾಪಿ ಲಡ್ಡು ನಾಗನಿಗೆ ಅಗ್ರಿಮೆಂಟ್ ಯಾವ ಲೆಕ್ಕ?

ಕೊನೆಗೆ ದಿಕ್ಕೇ ತೋಚದೆ ನಯನಾ ಮಹಿಳಾ ಸಂಘಟನೆಗಳ ಮೊರೆ ಹೊಕ್ಕಳು. ನಿರ್ಮಾಪಕಿಯೂ ಆಗಿದ್ದ ತನಗೇ ತಿಳಿಸದೆ ಪತ್ರಿಕಾಗೋಷ್ಠಿ ನಡೆಸಲೆತ್ನಿಸಿದ ಲಡ್ಡು ನಾಗನನ್ನು ಆತನ ಪತ್ರಿಕಾಗೋಷ್ಠಿಗೇ ಹೋಗಿ ಚಪ್ಪಲಿಯಲ್ಲಿ ಹೊಡೆದಳು. ನೆರೆದಿದ್ದ ಟೀವಿ ಪತ್ರಿಕೆಗಳ ಎದುರೇ ರುಪಿಗೆ ಬಿದ್ದ ಚಪ್ಪಲಿ ಏಟುಗಳನ್ನು ನೋಡಿದವರೆಲ್ಲ ಆಕೆಯ ಧೈರ್ಯ ಮೆಚ್ಚಿದರಾದರೂ ಹಾಕಿದ ದುಡ್ಡು ಮಾತ್ರ ಬರಲೇ ಇಲ್ಲ.

ಈ ಹಂತದಲ್ಲೇ ನಯನಾ ಜಾಲಹಳ್ಳಿಯ ಶಶಿ ಎಂಬಾತನ ಹಂಗಿಗೆ ಬಿದ್ದಳು. ಕಸುಬಿನಲ್ಲಿ ರಿಯಲ್ ಎಸ್ಟೇಟ್ ದಲ್ಲಾಳಿಯಾಗಿದ್ದ ಜಾಲಹಳ್ಳಿ ಶಶಿ ತಾನು ಉಪಮುಖ್ಯಮಂತ್ರಿ ಆರ್.ಅಶೋಕ್ ಸಂಬಂಧಿ ಎಂದೇ ಚಾಲ್ತಿಯಲ್ಲಿದ್ದ. ಆಗ ಬಿಜೆಪಿ ಸರ್ಕಾರವಿತ್ತಾದ್ದರಿಂದ ಶಶಿಯಿಂದ ದುಡ್ಡು ವಸೂಲಾದಿತೆಂದೇ ನಯನಾ ನಂಬಿದ್ದಳು. ಶುರುವಿನಲ್ಲಿ ರುಪಿಗೆ ಫೋನ್ ಮಾಡಿ ಲಾಟ್‌ಬೂಟ್ ರೋಪು ಹಾಕಿದ ಜಾಲಹಳ್ಳಿ ಶಶಿ ತಾನೊಂದು ಲೇಔಟ್ ಮಾಡ್ತಾ ಇದ್ದೀನಿ, ಅದಕ್ಕೆ ನೀನು ಬಂಡವಾಳ ಹಾಕಿದರೆ ಒಂದಕ್ಕೆ ಡಬ್ಬಲ್ ಕೊಡ್ತೀನಿ ಎಂದು ಹತ್ತು ಲಕ್ಷ ಕಿತ್ತ.

ಹೇಗೂ ಶಶಿ 'ಕೊಟ್ಟಲ್ಲಪ್ಪೋ ಕೈ'ಗೆ ಹಾಕಿದ 30 ಲಕ್ಷ ವಸೂಲಿ ಮಾಡಿ ಕೊಡುತ್ತಾನಾದ್ದರಿಂದ ಬಂದ ದುಡ್ಡಲ್ಲಿ ಸಾಲ ತೀರಿಸಿದರಾಯ್ತು ಎಂದು ನಯನಾ ತನ್ನ ಅಕ್ಕನಿಂದ ಮತ್ತೆ 10 ಲಕ್ಷದ ಸಾಲ ಎತ್ತಿ ಶಶಿಯ ಬಾಯಿಗೆ ಹಾಕಿದ್ದಳು. ಅಕ್ಕ ಅದನ್ನು ತನಗೆ ಪರಿಚಯದ ಫೈನಾನ್ಷಿಯರ್ ಒಬ್ಬನಿಂದ ಮೀಟರ್ ಬಡ್ಡಿಗೆ ತಂದು ಕೊಟ್ಟಿದ್ದಳು.

ಭೂಗತ ದೊರೆಯ ಎಂಟ್ರಿ

ಕ್ರಮೇಣ ಶಶಿ ಕೂಡ ಕೈ ಎತ್ತಿಬಿಟ್ಟ. ಇನ್ನು ತಾಳಿದರೆ ಉಳಿಗಾಲವಿಲ್ಲ ಎನ್ನಿಸಿ ನಯನಾ ಟೀವಿ ಚಾನಲ್ ಒಂದರ ಕ್ರೈಂ ವರದಿಗಾರನೊಬ್ಬನ ಮೊರೆ ಹೊಕ್ಕಳು. ಖತರ್‌ನಾಕ್ ರೌಡಿಗಳ ಪರ ವಹಿಸಿ ಪೊಲೀಸರ ಬಳಿ ರಾಜಿ ಕುದುರಿಸುವುದನ್ನೇ ಕಾಯಕ ಮಾಡಿಕೊಂಡಿದ್ದ ಆ ಕ್ರೈಂ ರಿಪೋರ್ಟರ್ ನಯನಾಳಿಗೆ ಬೆಂಗಳೂರಿನ ಭೂಗತ ದೊರೆಯೊಬ್ಬನನ್ನು ಪರಿಚಯಿಸಿಕೊಟ್ಟ. ಆದರೆ ಭೂಗತ ದೊರೆಗೆ ರುಪಿ ತನಗೆ ಆಶ್ರಯವಿತ್ತಿದ್ದ ಪತ್ರಕರ್ತರನ್ನೇ ತೋರಿಸಿ ಬಾಯಿ ಮುಚ್ಚಿಸಿಬಿಟ್ಟ. ಆ ಭೂಗತ ದೊರೆ ತಾನು ಫೀಲ್ಡಿಗಿಳಿಯದೇ ದಲಿತ ಸಂಘಟನೆಯ ಸೋಗಿನಲ್ಲಿದ್ದ ತನ್ನ ಶಿಷ್ಯನೊಬ್ಬನನ್ನು ನಯನಾಳ ನೆರವಿಗೆ ಛೂಬಿಟ್ಟಿದ್ದ.

ದುರಂತವೆಂದರೆ ನಯನಾಳನ್ನು ಟೀವಿಯ ಕ್ರೈಂ ರಿಪೋರ್ಟರ್, ಭೂಗತ ದೊರೆ, ಆತನ ಬಂಟ ದಲಿತ ನಾಯಕ, ಆತನ ಚೇಲಾಗಳು ಎಲ್ಲಾ ಸೇರಿ ಇನ್ನಿಲ್ಲದಂತೆ ಬಳಸಿಕೊಂಡರು. ಇವರಿಂದ ಬಚಾವಾಗಲು ಮತ್ತೊಂದು ಚಾನಲ್‌ನ ಕ್ರೈಂ ರಿಪೋರ್ಟರ್‌ನನ್ನು ಜೊತೆ ಹಾಕಿಕೊಂಡಳು. ಆತನ ಮೂಲಕ ಇನ್ನೊಂದು ಪ್ರಮುಖ ನ್ಯೂಸ್ ಚಾನಲ್ಲಿನ ವರದಿಗಾರನೂ ನಯನಾಳಿಗೆ ಗಂಟುಬಿದ್ದ. ಪ್ರತಿನಿತ್ಯ ನಯನಳ ಮನೆಯಲ್ಲಿ ಟೀವಿಯ ಕ್ರೈಂ ರಿಪೋರ್ಟರ್‌ಗಳದ್ದೇ ಪಾರ್ಟಿ ಶುರುವಾಯಿತು. ಭೂಗತ ದೊರೆಗೆಂದು ದುಡ್ಡು ಆತನ ದಲಿತ ನಾಯಕ ಬಂಟನಿಗೆಂದು ದುಡ್ಡು, ಪ್ರಾರಂಭದಲ್ಲಿ ಕ್ರೈಂ ರಿಪೋರ್ಟರ್ ಕಿತ್ತಿದ್ದ ದುಡ್ಡು, ಇದಕ್ಕೂ ಮುನ್ನ ವಾರಪತ್ರಿಕೆಯೊಂದರ ವರದಿಗಾರ ಸುಲಿದ ದುಡ್ಡು, ಇವರಿಂದ ಬಚಾವಾಗಲು ಇನ್ನೆರಡು ಟೀವಿ ಚಾನಲ್‌ನ ಕ್ರೈಂ ವರದಿಗಾರರ ಸಂಗ- ಇತ್ಯಾದಿಗಳಿಂದಾಗಿ ಮತ್ತಷ್ಟು ಸಾಲಕ್ಕೆ ಬಿದ್ದಳು.

ಈ ಮಧ್ಯೆ ರುಪಿ ಲಕ್ಷಗಟ್ಟಲೆ ಬಂಡವಾಳ ಹಾಕಿದವರೆಲ್ಲರನ್ನೂ ಯಾಮಾರಿಸಿ 'ಕೊಟ್ಟಲ್ಲಪ್ಪೋ ಕೈ' ಚಿತ್ರವನ್ನು ಬಿಡುಗಡೆ ಮಾಡಿಯೇ ಬಿಟ್ಟ. 2013ರ ಜನವರಿ 11ರಂದು ಆತುರಾತುರವಾಗಿ ಕದ್ದೂ ಮುಚ್ಚಿ ತಾನೇ ನಿಂತು ಥೇಟರುಗಳಿಗೆ ಬಿಟ್ಟ ರುಪಿ ಬೆಂಗಳೂರಿನಿಂದ ಹೊರಭಾಗದ ಏರಿಯಾಗಳಿಗೆ ಮನಸ್ಸಿಗೆ ಬಂದ ರೇಟಿಗೆ ಮಾರಿಕೊಂಡಿದ್ದ. ಈ ಬಗ್ಗೆ ಫಿಲ್ಮ್ ಛೇಂಬರಿಗೆ ನಯನಾ ದೂರು ಕೊಟ್ಟಳಾದರೂ ಫಿಲ್ಮ್ ಛೇಂಬರ್ ನ್ಯಾಯ ಕೊಡುವ ಹೊತ್ತಿಗೆ ವಾರವೇ ಕಳೆದುಹೋಗಿತ್ತು.

ನೆಟ್ಟಗೆ ಕತೆಯೇ ಇಲ್ಲದ, ಕೇವಲ ಸೆಕ್ಸ್ ಒಂದನ್ನೇ ಗುರಿಯಾಗಿಸಿದ್ದ ಕ್ಯಾಮೆರಾ, ಮ್ಯೂಜಿಕ್, ಲೈಟಿಂಗ್ ಇತ್ಯಾದಿ ಸಿನಿಮಾದ ತಲೆಬುಡ ಗೊತ್ತಿಲ್ಲದೆ ಪಕ್ಕಾ ಬ್ಲೂ ಫಿಲ್ಮ್‌ನಂತಿದ್ದ 'ಕೊಟ್ಟಲ್ಲಪ್ಪೋ ಕೈ' ಮೂರೇ ದಿನಕ್ಕೆ ಥೇಟರುಗಳಿಂದ ಎತ್ತಂಗಡಿಯಾಗಿತ್ತು. ಸರಿಯಾಗಿ ಪ್ರಚಾರವನ್ನೇ ಮಾಡದೆ, ಕಸುಬು ಗೊತ್ತಿದ್ದ ವಿತರಕರಿಗೂ ನೀಡದೆ ಕದ್ದೂ ಮುಚ್ಚಿ ಸಿನಿಮಾ ಬಿಡುಗಡೆ ಮಾಡಿ ಬಂದಷ್ಟು ದೋಚಿಕೊಂಡು ರುಪಿ ಪರಾರಿಯಾಗಿದ್ದ.

ಮುಳುಗಿದ ಕನಸು

ಕಪಾಲಿ ಆನಂದ್ ಹಾಕಿದ್ದ 40 ಲಕ್ಷದ ಜೊತೆಗೆ ನಯನಾಳ 20 ಲಕ್ಷ, ಕೊರಿಯರ್ ವೆಂಕಟೇಶ್‌ರ 20 ಲಕ್ಷ ಸೇರಿದಂತೆ ಬರೋಬ್ಬರಿ 1 ಡಜನ್ ಹೂಡಿಕೆದಾರರ ಒಂದೂ ಕಾಲು ಕೋಟಿ ಮೊತ್ತದ ದುಡ್ಡು ರುಪಿ ಮಾಡಿದ ವಂಚನೆಯಿಂದಾಗಿ ಮಣ್ಣುಪಾಲಾಗಿ ಹೋಯಿತು. ಜಾಲಹಳ್ಳಿ ಶಶಿ ಸೈಟನ್ನೂ ಕೊಡಲಿಲ್ಲ, ನಯನಾ ಹಾಕಿದ್ದ 10 ಲಕ್ಷವನ್ನೂ ವಾಪಸ್ಸು ಮಾಡಲಿಲ್ಲ. ಇವರಿಂದ ದುಡ್ಡು ವಸೂಲಿಗೆಂದು ಕ್ರೈಂ ರಿಪೋರ್ಟರ್ ಭೂಗತ ದೊರೆಯನ್ನು ಪರಿಚಯಿಸುತ್ತೇನೆಂದೇ 3 ಲಕ್ಷ ಕಿತ್ತಿದ್ದ. ಆ ನಂತರ ಭೂಗತ ದೊರೆ ಮತ್ತು ಆತನ ದಲಿತ ನಾಯಕ ಚೇಲಾ ಸೇರಿಕೊಂಡು 5 ಲಕ್ಷ ಕಿತ್ತು ಕೈ ಎತ್ತಿದ್ದರು. ಇವರಿಂದ ಬಚಾವಾಗಲು ಇನ್ನೆರಡು ಚಾನಲ್‌ಗಳ ಕ್ರೈಂ ರಿಪೋರ್ಟರ್, ಟ್ಯಾಬ್ಲಾಯ್ಡ್ ಒಂದರ ರಿಪೋರ್ಟರ್, ಇವರ ಮೂಲಕ ವಕ್ಕರಿಸಿದ ಪೊಲೀಸರು, ವಕೀಲರು; ಎಲ್ಲರನ್ನೂ ಸಂಭಾಳಿಸಲು ನಯನಾ ಇನ್ನಷ್ಟು ಮತ್ತಷ್ಟು ಸಾಲ ಮಾಡುತ್ತಲೇ ಹೋದಳು.

'ಅಟ್ಟಹಾಸ' ಮತ್ತು 'ಗಲಾಟೆ ಸಂಸಾರ' ಎಂಬ ಇನ್ನೆರಡು ಚಿತ್ರಗಳಲ್ಲಿ ಸಿಕ್ಕ ಪಾತ್ರ ಕೇವಲ ಐಟಂ ಸಾಂಗಿಗೇ ಸೀಮಿತವಾಗಿತ್ತು. ರುಪಿಗೆ ಚಪ್ಪಲಿ ಸೇವೆ ಮಾಡಿದ್ದನ್ನು ಕಂಡೇ ಬೆಚ್ಚಿಬಿದ್ದ ನಿರ್ಮಾಪಕರು ನಯನಾಳ ಹೆಸರು ಕೇಳಿದರೇನೇ ದೂರ ಸರಿಯುವಂತಾಯ್ತು. ಇಂಥಾ ದುರ್ಗತಿಯಲ್ಲಿ ನಯನಾ ಕೈ ಹಾಕಿದ್ದು ಸೆಕ್ಸ್ ಬ್ಲಾಕ್‌ಮೇಲ್ ದಂಧೆಗೆ. ಮೊದಲೇ ಟೀವಿ ಕ್ರೈಂ ರಿಪೋರ್ಟರ್‌ಗಳು ಗೊತ್ತಿದ್ದರಿಂದ ಅವರನ್ನು ಮುಂದಿಟ್ಟುಕೊಂಡೇ ದುಡ್ಡು ಮಾಡಬಹುದೆಂಬುದು ಆಕೆಯ ಎಣಿಕೆಯಾಗಿತ್ತು. ಈಗ ಅದೇ ಮುಳುವಾಗಿದೆ. ಮಾಡಲಾರದ್ದು ಮಾಡಲು ಹೋಗಿ ಆಗಬಾರದ್ದೇ ಆಗಿದೆ.

ನಿಜ, ನಯನಾ ಪಾಪಿಷ್ಠೆಯೆ. ಆದರೆ ಆಕೆಯನ್ನು ಈ ಪರಿಸ್ಥಿತಿಗೆ ತಂದವರ್‍ಯಾರು? ದುರುಳ ರುಪಿ ಈಗ ಮತ್ತೊಂದು ಹಿಂಡು ಮಿಕಗಳನ್ನು ಹಿಡಿದ 'ಒನ್‌ವೇ' ಎಂಬ ಮತ್ತೊಂದು ದಬ್ಬಾ ಚಿತ್ರದ ಹೆಸರಲ್ಲಿ ನಾಲ್ಕನೇ ಸುತ್ತಿನ ವಂಚನೆಗೆ ಕೈಯಿಟ್ಟಿದ್ದಾನೆ. ಕಾರಲ್ಲಿ ಸುತ್ತಾಡುತ್ತಾನೆ. ಜಾಲಹಳ್ಳಿ ಶಶಿ ಕೈಕೊಟ್ಟು ಕಣ್ಮರೆಯಾಗಿದ್ದಾನೆ. ಭೂಗತ ದೊರೆ ಮತ್ತು ದಲಿತ ಪುಢಾರಿ ಲಕ್ಷ ಎಣಿಸಿಕೊಂಡರೇ ಹೊರತು ನೆರವಾಗಲೇ ಇಲ್ಲ. ವಂಚಿಸಿದ ಕ್ರೈಂ ರಿಪೋರ್ಟರ್‌ಗಳೇ ಈಗ ತಾವು ಸಾಚಾಗಳಂತೆ ನಯನಾಳನ್ನು ಬಾವಿಗೆ ತಳ್ಳಿ ಕಲ್ಲೆತ್ತಿ ಹಾಕುತ್ತಿದ್ದಾರೆ!

ಪತ್ರಿಕೆ, ಟೀವಿಗಳಂತೂ ದಿನಗಟ್ಟಲೇ ಆಕೆಯ ಬೆತ್ತಲೆ ವೀಡಿಯೋ ತೋರಿಸಿಯೇ ಪೌರುಷ ಮೆರೆದಿದ್ದಾರೆ!

ಪರಮ ನಾಶ

ಹಾಗಾದರೆ ಬಿಟ್ಟಿ ಹೆಣ್ಣು ಸಿಕ್ಕಳೆಂದು ಬೆತ್ತಲಾದ ಡಾಕ್ಟರ್‌ಗಳದ್ದೇನೂ ತಪ್ಪಿಲ್ಲವೆ?, ಹೀರೋಯಿನ್ ಮಾಡುತ್ತೇನೆಂದು 20 ಲಕ್ಷ ಕಿತ್ತ ಖದೀಮ ರುಪಿಗೆ ಯಾವುದೇ ಶಿಕ್ಷೆಯಿಲ್ಲವೆ? ಆಕೆಗೆ ನೆರವಾಗುತ್ತೇವೆಂದು ಬಂದ ಪ್ರತಿಯೊಬ್ಬರೂ ಲಕ್ಷಗಟ್ಟಲೇ ಕಿತ್ತು ವಂಚಿಸಿದರಲ್ಲ; ಅದು ನಯನಾ ಬೆತ್ತಲಾಗಿ ದುಡಿದಿದ್ದ ಬ್ಲಾಕ್‌ಮೇಲ್ ದುಡ್ಡೇ ತಾನೆ?

ಹಳ್ಳಕ್ಕೆ ಬಿದ್ದ ಹುಡುಗಿಯ ಬೆನ್ನು ಹತ್ತಿದ ಸಿಸಿಬಿ ಪೊಲೀಸರಿಗೆ ಆಕೆಯ ಪಾಪದ ಪಾಲುದಾರರ್‍ಯಾರೂ ಕಾಣಿಸುತ್ತಿಲ್ಲ ಏಕೆ?

ಬಹುಶಃ ಇವರ್‍ಯಾರೂ ವಂಚಿಸದೇ ಹೋಗಿದ್ದರೆ ಆಕೆಗಿಂತಾ ದುರ್ಗತಿ ಬರುತ್ತಿತ್ತೆ?

ಯಾವ ಹೆಣ್ಣೂ ತನ್ನಿಂತಾನೇ ಬೆತ್ತಲಾಗಿ ಇಂಥದೊಂದು ಅಪಾಯಕ್ಕೆ ಸಿಲುಕಲು ಆಸೆ ಪಡುವುದಿಲ್ಲ. ದುಷ್ಟ ಕೂಟಕ್ಕೆ ಬಲಿಯಾಗಿ ತಾವೂ ದುಷ್ಟರೆನಿಸಿಕೊಂಡ ಈ ಹೆಣ್ಣು ಮಕ್ಕಳ ದುರ್ಗತಿಗೆ ಯಾರೊಬ್ಬರೂ ಏಕೆ ಮರುಗುತ್ತಿಲ್ಲ? ಯಾರೂ ಮಾಡದ ಯಾವ ಅಪರಾಧವನ್ನು ತಾನೇ ಈ ಹುಡುಗಿಯರು ಮಾಡಿದ್ದಾರೆ? ಕ್ಷಮಿಸಲಾರದಂಥ ಅಕ್ಷಮ್ಯವಾ ಅದು? ಪೊಲೀಸರಿಂದ ಬಚಾವಾಗಲು ಹೋಗಿ ಇನ್ನೆಂಥಾ ಕಷ್ಟಕ್ಕೆ ಈ ಹೆಣ್ಣು ಮಕ್ಕಳು ಸಿಲುಕಲಿಕ್ಕಿಲ್ಲ?

ಮಹಿಳಾ ಆಯೋಗದ ಹೊಸ ಅಧ್ಯಕ್ಷೆ ಮಂಜುಳಾ ಮಾನಸ ದಯೆ ತೋರಬೇಕು. ನಯನಾ, ರಿಹಾನಾಳಂಥ ಹುಡುಗಿಯರು ಪೊಲೀಸರಿಂದ ಬಚಾವಾಗಲು ಹೋಗಿ ಇದಕ್ಕಿಂತ ಅಪಾಯಕಾರಿ ಪರಿಸ್ಥಿತಿಗೆ ಸಿಲುಕುವಂತಾಗಬಾರದು. ಕನಿಷ್ಠ ಗೌರವಯುತವಾಗಿ ಕಾನೂನಿಗೆ ತಮ್ಮನ್ನು ಒಪ್ಪಿಸಿಕೊಳ್ಳುವ, ತಮ್ಮ ಅಸಹಾಯಕತೆಯನ್ನು ಸಾಬೀತು ಮಾಡುವ, ತಮ್ಮನ್ನು ಈ ಸ್ಥಿತಿ ತಳ್ಳಿದವರನ್ನು ಬಯಲಿಗೆಳೆಯುವ ಹಕ್ಕಾದರೂ ಇರಬೇಡವೆ?

ಹಳ್ಳಕ್ಕೆ ಬಿದ್ದ ಹೆಣ್ಣು ಮಕ್ಕಳ ವಿರುದ್ಧ [illegible] ಇಷ್ಟೊಂದು ನಿರ್ದಾಯಿಯೆ? ಪಾಪಿಗಳನ್ನು ರಕ್ಷಿಸಲು ಏನೇನು ಬರಬೇಕೆ?

■ ರಾ. ಸೋಮನಾಥ್



ಗೌತಮ ಬುದ್ಧ ಮತ್ತು ಭಾರತೀಯ ಧರ್ಮ

ವಿಶ್ವಕ್ಕೆ ಶ್ರೇಷ್ಠ ಸಂಸ್ಕೃತಿಯನ್ನು ಕೊಟ್ಟ ದೇಶ ಭಾರತ. ವಿಶ್ವದ ಮೊದಲ ನಾಗರಿಕತೆ ಹುಟ್ಟಿದ್ದು ಮಾನವ ನಾಗರಿಕತೆಗೆ ಒಳಪಟ್ಟಿದ್ದು ಭಾರತದಲ್ಲಿಯೇ. ಸಿಂಧೂ ನದಿ ಬಯಲಿನ ನಾಗರಿಕತೆಯೇ ವಿಶ್ವದ ಮೊದಲ ನಾಗರಿಕತೆ. ಕೃಷಿ, ವ್ಯವಸಾಯ, ಪಶುಸಂಗೋಪನೆ, ಲೋಹಗಳ ಬಳಕೆ, ವ್ಯಾಪಾರ, ವಿದೇಶಿ ವ್ಯವಹಾರ, ಹಡಗು ಉದ್ಯಮ, ಸಾಮೂಹಿಕ ಕೃಷಿ ಪದ್ಧತಿ, ಒಂದಾಗಿ ಬಾಳುವ ಜೀವನ ಕ್ರಮ, ಸಹೋದರತೆ, ಸಮಾನತೆಯಿಂದ ಕೂಡಿದ ಸಂಸ್ಕೃತಿಯ ಮಾತೃ ಪ್ರಧಾನ ಆಡಳಿತ ವ್ಯವಸ್ಥೆ ಪ್ರಕೃತಿಯ ಆರಾಧನೆ ಹಾಗೂ ಗುರುಪರಂಪರೆಯ ಬೋಧಿಸತ್ವರ ಉಪಾಸನೆ, ಭೌತವಾದದ ಸಿದ್ಧಾಂತ, ಪ್ರೀತಿ, ದಯೆ, ಕರುಣೆ, ಅಹಿಂಸೆ, ಭ್ರಾತೃತ್ವ, ಶಾಂತಿ ಮೊದಲಾದ ಮಾನವೀಯ ಮೌಲ್ಯಗಳ ಪ್ರತಿಪಾದನೆಯೇ ಧಾರ್ಮಿಕತೆಯಾಗಿತ್ತು. ಇದು ಸುಮಾರು 5000 ವರ್ಷಗಳ ಹಿಂದಿನ ಭಾರತದ ಮೂಲ ನಿವಾಸಿಗಳ ಶ್ರೇಷ್ಠ ಸಂಸ್ಕೃತಿಯ ಪರಿಚಯ. ಇದನ್ನೇ ಸಿಂಧೂ ನದಿ ಬಯಲಿನ ಅಥವಾ ಸಿಂಧೂ ನಾಗರಿಕತೆ ಎನ್ನುತ್ತಾರೆ.

ಆಗಿನ್ನೂ ಭಾರತಕ್ಕೆ ವೈದಿಕ ಧರ್ಮದ ಪ್ರತಿಪಾದಕರಾದ ಆರ್ಯರ ಆಗಮನವಾಗಿರಲಿಲ್ಲ. ಅದಕ್ಕೂ ಮೊದಲೇ ವಿಶ್ವಕ್ಕೆ ಭಾರತದ ಮೂಲ ನಿವಾಸಿಗಳು ಶ್ರೇಷ್ಠ ತತ್ವಶಾಸ್ತ್ರವನ್ನು ಕೊಟ್ಟಿದ್ದರು. ಅದರ ಹೆಸರೇ ಸಾಂಖ್ಯ ದರ್ಶನ ಮತ್ತು ಸಾಂಖ್ಯ ಯೋಗ. ಇದರ ಕರ್ತೃ ಶ್ರೇಷ್ಠ ಭೌತವಾದಿಯಾದ ಕಪಿಲ ಮುನಿ. ಕಪಿಲ ಮುನಿಯು ಸಾಂಖ್ಯರ ಮೂಲಪುರುಷ ಹಾಗೂ ವಿಶ್ವಕ್ಕೆ ಮೊದಲ ತತ್ವಶಾಸ್ತ್ರವನ್ನು ಕೊಟ್ಟಂತಹ ಶ್ರೇಷ್ಠ ತತ್ವಜ್ಞಾನಿ. ಭೌತವಾದಿಯಾಗಿದ್ದ ಕಪಿಲ ಮುನಿಯು ಮಂಡಿಸಿದ ಗ್ರಂಥವಾದ ಸಾಂಖ್ಯದರ್ಶನದಲ್ಲಿ ವಿಶ್ವದ ಉಗಮದ ಬಗ್ಗೆ ಸಂಕ್ಷಿಪ್ತವಾಗಿ ವೈಜ್ಞಾನಿಕ, ವೈಚಾರಿಕ ಚಿಂತನೆಯನ್ನು ಕಾಣಬಹುದು. ಸದಾ ಚಲನಶೀಲವಾದ ಭೌತ ವಸ್ತುವು ಯಾವಾಗಲೂ ಒಂದು ರೂಪದಿಂದ ಬೇರೊಂದು ರೂಪಕ್ಕೆ ಬದಲಾವಣೆ ಹೊಂದುತ್ತಾ ವಿಕಾಸವಾಗುತ್ತಾ ಇರುತ್ತದೆ "ಎಂಬ" ಸಿದ್ಧಾಂತವೇ ಸಾಂಖ್ಯದರ್ಶನದ ಪ್ರಧಾನ ತತ್ವವಾಗಿದೆ. ಕಪಿಲ ಮುನಿಯ ಭೌತವಾದದ ತತ್ವಜ್ಞಾನಗಳನ್ನೊಳಗೊಂಡ ಸಾಂಖ್ಯ ದರ್ಶನವು ಮಾನವರ ಮಾನಸಿಕ ಆರೋಗ್ಯದ ಪ್ರಗತಿಗಾಗಿ ರಚಿತವಾಗಿದ್ದು ಇದರ ಜೊತೆಗೆ ದೈಹಿಕ ಆರೋಗ್ಯವು ಅತ್ಯಗತ್ಯವೆಂದು ತಿಳಿದು ಆಸನ, ಪ್ರಾಣಾಯಾಮಗಳನ್ನು ಮೈಗೂಡಿಸಿಕೊಂಡು ಧ್ಯಾನ ಮತ್ತು ಶಾರೀರಿಕ ವ್ಯಾಯಾಮದ ಜೊತೆಜೊತೆಗೆ ಸಾಗಿದರೆ ಭೌತಿಕ ಪ್ರಗತಿಯು ಸುಲಭ ಸಾಧ್ಯವೆಂದು ತಿಳಿದು ಸಾಂಖ್ಯ ಯೋಗವನ್ನು ರಚಿಸಿದರು. ಇಂತಹ ಉನ್ನತವಾದ ಶ್ರೇಷ್ಠ ಭೌತವಾದದ ತತ್ವಜ್ಞಾನದಿಂದ ರಚಿತವಾದ ಕಪಿಲ ಮುನಿಯ ಸಾಂಖ್ಯದರ್ಶನ ಮತ್ತು ಸಾಂಖ್ಯ ಯೋಗದಿಂದ ಸಿಂದೂ ನದಿ ಬಯಲಿನ ನಾಗರಿಕತೆಯು ವಿಶ್ವದಲ್ಲೇ ಶ್ರೇಷ್ಠ ಸಾಹಿತ್ಯದಿಂದ ಕೂಡಿದ ಸಂಪದ್ಭರಿತ ಜ್ಞಾನವಿಜ್ಞಾನದ ಜನಕನಾಗಿ ರೂಪುಗೊಂಡಿತು. ರಾಗ, ದ್ವೇಷವಿಲ್ಲದ ಸಹಜೀವನ ಯಾವುದೇ ಅಸಮಾನತೆಯಿಲ್ಲದ ಸಮಾನತೆಯ ಸಮಾಜ ಸೋದರತೆ, ಶಾಂತಿ, ಅಹಿಂಸೆಯಿಂದ ಕೂಡಿದ ಧಾರ್ಮಿಕತೆ ಸಿಂದೂ ನದಿ ಬಯಲಿನ ಜನರದ್ದಾಗಿತ್ತು.

ಹೀಗೆ ಸುಖಸಂತೋಷದಿಂದ ಬಾಳುತ್ತಿದ್ದವರ ಬಾಳಲ್ಲಿ ಬರಸಿಡಿಲೊಂದು ಬಡಿಯಿತು. ಕ್ರಿ. ಪೂ. 20ನೇ ಶತಮಾನದಲ್ಲಿ ಭಾರತದ ವಾಯುವ್ಯಗಡಿಯಿಂದ ಮಧ್ಯ ಏಷ್ಯಾದಿಂದ ಬಂದ ಅಲೆಮಾರಿ ಜನಾಂಗವಾದ ಆರ್ಯರ ದಾಳಿಯಿಂದಾಗಿ ಸಿಂಧೂ ನದಿ ಬಯಲಿನ ಶ್ರೇಷ್ಠ ಸಂಸ್ಕೃತಿಯ ನಾಗರಿಕತೆ ನಾಶವಾಯಿತು. ಮೂಲ ನಿವಾಸಿಗಳ ಮುಗ್ಧತೆಯೇ ಅವರಿಗೆ ಮುಳುವಾಯಿತು. ಆರ್ಯರ ದಾಳಿಯ ಮೊದಲೇ ಶರಣಾಗತರಾದ ಜನರನ್ನು ತಮ್ಮ ಗುಲಾಮರನ್ನಾಗಿಸಿದ ಆರ್ಯರು ಅವರನ್ನು ಶೂದ್ರರೆಂದು ಮಾನ್ಯಮಾಡಿ ತಮ್ಮ ನಾಲ್ಕನೇ ವರ್ಣಕ್ಕೆ ಅವರನ್ನು ಸೇರಿಸಿದರು. ತೀವ್ರ ಪ್ರತಿದಾಳಿ ಒಡ್ಡಿದ ಮೂಲ ನಿವಾಸಿ ಜನರನ್ನು ಯುದ್ಧದಲ್ಲಿ ಸೆರೆಹಿಡಿದು ಅವರ ಎಲ್ಲಾ ಮಾನವ ಹಕ್ಕುಗಳನ್ನು ಕಿತ್ತುಕೊಂಡು ಅವರನ್ನು ಊರ ಹೊರಗೆ ವಾಸಿಸುವಂತೆ ಮಾಡಿದರು. ಅವರೇ ಅಂತ್ಯಜರೆಂದು ಗುರುತಿಸಿಕೊಂಡಿರುವ ದಲಿತ ಜನರಾದರು. ಹೀಗೆ ಅನೇಕ ವರ್ಷಗಳವರೆಗೆ ಸಾಮಾಜಿಕ ಅಸ್ಥಿರತೆ ಉಂಟಾಯಿತು. ಇದನ್ನು ಹೋಗಲಾಡಿಸಲು ಮತ್ತು ಮೂಲ ನಿವಾಸಿಗಳನ್ನು ಸಮಾಧಾನ ಪಡಿಸಲು ಅವರ ಪ್ರಕೃತಿತತ್ವದ ಜೊತೆಗೆ ಪುರುಷವೆಂಬ ವಾದವನ್ನು ಸೇರಿಸಿ ಆರ್ಯರು ವೈದಿಕ ಧರ್ಮವನ್ನು ಸ್ಥಾಪಿಸಿದರು.

ಸಿಂಧೂ ನದಿ ಬಯಲಿನ ನಾಗರಿಕತೆಯನ್ನು ನಾಶಗೊಳಿಸಿದ ಆರ್ಯರ ಬಲಿಷ್ಠ ನಾಯಕರನ್ನು ಅವರ ಮರಣಾನಂತರ ದೈವತ್ವಕ್ಕೇರಿಸಿ ಅವರಿಂದ ಇನ್ನಷ್ಟು ಶಕ್ತಿಯನ್ನು ಪಡೆಯಲು ಮತ್ತು ಮೋಕ್ಷಸಾಧನೆಗಾಗಿ ಪ್ರಾಣಿಗಳನ್ನು ಬಲಿಕೊಡುವಂತಹ ಯಜ್ಞಯಾಗಾದಿಗಳು ಪ್ರಾರಂಭವಾದವು. ಆರ್ಯ ನಾಯಕರ ಶೌರ್ಯದ ಕುರಿತು ಕಾವ್ಯಗಳು ರಚಿತವಾದವು. ಇವುಗಳೇ ವೇದಗಳು. ಯಜ್ಞಯಾಗಾದಿಗಳನ್ನು ಮಾಡುತ್ತಾ ಬ್ರಾಹ್ಮಣರು ಸಮಾಜದ ಮೇಲ್‌ಸ್ತರದಲ್ಲಿದ್ದು ವಿದ್ಯೆ ಮತ್ತು ಜ್ಞಾನದ ವಾರಸುದಾರರಾದರು. ಅವರ ಕೆಳಗೆ ಕ್ಷತ್ರಿಯರು ರಾಜ್ಯ ವಿಸ್ತರಣೆ ಮತ್ತು ರಾಜ್ಯಾಡಳಿತವನ್ನು ಮಾಡುತ್ತಾ ಬ್ರಾಹ್ಮಣರಿಗೆ ಯಜ್ಞಯಾಗಗಳನ್ನು ಮಾಡಲು ಜನರ ತೆರಿಗೆಯ ಸಂಪತ್ತಿನ ಬಹುಪಾಲನ್ನು ವ್ಯಯಿಸುತ್ತಿದ್ದರು.



ಇವರ ಕೆಳಗೆ ಆರ್ಯರ ಮೂರನೇ ವರ್ಣದವರಾದ ವ್ಯಾಪಾರಿ ವರ್ಗ- ಇವರೇ ವೈಶ್ಯರು. ಇವರುಗಳು ಆರ್ಥಿಕವಾಗಿ ಬಲಿಷ್ಠರಾಗಿದ್ದರೂ ಸಂಪತ್ತಿನ ಪೂರ್ಣ ಹಕ್ಕು ಅವರಿಗಿರಲಿಲ್ಲ ಮತ್ತು ಧಾರ್ಮಿಕವಾಗಿ ಮೋಕ್ಷಸಾಧನೆಗೆ ಅವರಿಗೆ ಅವಕಾಶವಿರಲಿಲ್ಲ. ಇನ್ನು ನಾಲ್ಕನೇ ವರ್ಣದವರೇ ಭಾರತದ ಮೂಲ ನಿವಾಸಿಗಳಾದ ಶೂದ್ರರು. ಇವರು ಕೃಷಿ ವ್ಯವಸಾಯ ಪಶುಸಂಗೋಪನೆ ಮಾಡುತ್ತಾ ಆರ್ಯ ದ್ವಿಜವರ್ಣದವರ ಸೇವಕರಾಗಿ ಸೇವೆಯನ್ನು ಮಾಡುತ್ತಾ ಗುಲಾಮಗಿರಿಯ ಜೀವನವನ್ನು ನಡೆಸುತ್ತಿದ್ದರು. ಅವರಿಗೆ ವಿದ್ಯೆ ಮತ್ತು ಅಧಿಕಾರಗಳು ನಿಷೇಧಿಸಲ್ಪಟ್ಟವು. ಅವರಿಗೆ ಯಾವುದೇ ಸಂಸ್ಕಾರಗಳಿರಲಿಲ್ಲ. ಇನ್ನು ಅಂತ್ಯಜರಾದ ದಲಿತರು ಎಲ್ಲಾ ಮಾನವ ಹಕ್ಕುಗಳಿಂದ ವಂಚಿತರಾದರು. ಇವರ ಜೀವನವಂತೂ ಪ್ರಾಣಿಗಳಿಗಿಂತ ಕೀಳಾಗಿತ್ತು. ಈ ಮೂಲಕ ಆರ್ಯ ವೈದಿಕ ಧರ್ಮವು ಸಂಪೂರ್ಣ ಮಾನವ ವಿರೋಧಿಯಾಗಿತ್ತು. ರಾಜ್ಯವು ಕ್ಷತ್ರಿಯ ರಾಜರಿಂದ ನಡೆಸಲ್ಪಟ್ಟರೂ ಸಮಾಜದ ಸಂಪೂರ್ಣ ಹತೋಟಿ ಆಡಳಿತ ಅಧಿಕಾರ ಬ್ರಾಹ್ಮಣರ ಕೈಯಲ್ಲಿತ್ತು. ಬ್ರಾಹ್ಮಣರಿಗೆ ಯಾರನ್ನೂ ಶಿಕ್ಷಿಸುವ ಅಥವಾ ಅಧಿಕಾರದಿಂದ ಉಚ್ಚಾಟಿಸುವ ಪರಮಾಧಿಕಾರವಿತ್ತು. ಈ ಕಾರಣಕ್ಕಾಗಿಯೇ ಕ್ಷತ್ರಿಯರು ಮತ್ತು ಬ್ರಾಹ್ಮಣರಿಗೆ ವೈಮನಸ್ಸು ಉಂಟಾಗಿ ಆರ್ಯರೊಳಗೆ ಆಂತರಿಕ ಸಂಘರ್ಷ ಉಂಟಾಯಿತು.

ಬಹುತೇಕ ಕ್ಷತ್ರಿಯರು ಬ್ರಾಹ್ಮಣ ಶ್ರೇಷ್ಠತೆಯ ವೇದಗಳ ಪ್ರಾಮಾಣ್ಯವನ್ನು ತಿರಸ್ಕರಿಸಿ ಅದರಿಂದ ಹೊರಬಂದು ಉಪನಿಷತ್ತುಗಳನ್ನು ರಚಿಸಿದರು. ಜನರ ಶ್ರಮದ ಬಹುಪಾಲನ್ನು ದೋಚುತ್ತಿರುವ ಯಜ್ಞಯಾಗಾದಿಗಳಿಂದ ಬೇಸತ್ತ ಜನರು ಉಪನಿಷತ್ತಿಗೆ ಮಾರುಹೋದರು. ಸೃಷ್ಟಿಕರ್ತನಾದ ಭಗವಂತನು ನಿರ್ಗುಣನು, ನಿರಾಕಾರನು ಆಗಿದ್ದು ಏಕದೇವೋಪಾಸನೆಯೇ ಅದರ ವಿಚಾರವಾಗಿತ್ತು. ಮೋಕ್ಷಸಾಧನೆಗೆ ಪರಮಾತ್ಮನ ಅನುಗ್ರಹಕ್ಕೆ ಧ್ಯಾನ ಮತ್ತು ತಪಸ್ಸುಗಳಿಂದ ಆರಾಧಿಸಬಹುದೆಂದು ಉಪನಿಷತ್ತು ಸಾರಿತು. ಕ್ರಿ. ಪೂ. 8ನೇ ಶತಮಾನದಲ್ಲಿ ನಡೆದಂತಹ ಈ ಬೆಳವಣಿಗೆ ಅರಾಜಕತೆಗೆ ಕಾರಣವಾಯಿತು. ಹಾಗೂ ವೈದಿಕ ಧರ್ಮದ ಉನ್ನತಿಗೆ ತಡೆಯಾಯಿತು. ಇದೇ ಸಂದರ್ಭದಲ್ಲಿ ವೈದಿಕ ಧರ್ಮದ ವಿರುದ್ಧ ಸಿಡಿದೆದ್ದ ಆರ್ಯ, ವೈಶ್ಯರು ಮೋಕ್ಷ ಸಾಧನೆಗೆ ವೈಶ್ಯರಿಗೆ ಅವಕಾಶವಿಲ್ಲವೆಂದು ಸಾರಿದ ಬ್ರಾಹ್ಮಣ ಶ್ರೇಷ್ಠತೆಯ ವೇದಗಳನ್ನು ತಿರಸ್ಕರಿಸಿ ಅದರಿಂದ ಹೊರಬಂದು ಅಹಿಂಸೆಯ ಪರಮಧರ್ಮವನ್ನು ಸ್ಥಾಪಿಸಿದರು. ಇದೇ ಜೈನ ಧರ್ಮವಾಯಿತು.

ಈ ಎಲ್ಲಾ ಬೆಳವಣಿಗೆಗಳು ಮೂಲ ನಿವಾಸಿಗಳಾದ ಶೂದ್ರರ ಸ್ವಾಭಿಮಾನವನ್ನು ಮರುಸ್ಥಾಪಿಸಲು ಅನುಕೂಲವಾಯಿತು. ಇದರಿಂದಾಗಿ ಶೂದ್ರರ ಆಡಳಿತದ ಅನೇಕ ಸಣ್ಣಪುಟ್ಟ ಸ್ವತಂತ್ರ ಗಣರಾಜ್ಯಗಳ ಉದಯವಾಯಿತು. ಮಾತ್ರವಲ್ಲ ಮಗಧ, ಕೋಸಲಗಳಂತಹ ಬೃಹತ್ ರಾಜ ಪ್ರಭುತ್ವದ ಸಾಮ್ರಾಜ್ಯಗಳು ಶೂದ್ರರಿಂದ ಸ್ಥಾಪಿತವಾದವು. ಇವುಗಳೆಲ್ಲವೂ ವೈದಿಕ ಧರ್ಮದ ಚಾತುರ್ವರ್ಣ ವ್ಯವಸ್ಥೆಯನ್ನು ಸಂಪೂರ್ಣ ನಿಷೇಧಿಸಿದವು. ಆದರೂ ಯಜ್ಞಯಾಗಗಳನ್ನು ನಿಷೇಧಿಸಲಿಲ್ಲ. ಅದಾಗಲೇ ಭೌತವಾದದಿಂದ ಭಾವನಾವಾದಿಗಳಾಗಿ ಮಾರ್ಪಟ್ಟ ಮೂಲ ನಿವಾಸಿಗಳು ಆತ್ಮ, ದೇವರು, ಸ್ವರ್ಗ, ನರಕ, ಪುನರ್‌ಜನ್ಮ, ಪರಮಾತ್ಮ ಎಂಬ ಮೂಢನಂಬಿಕೆಯ ವೈದಿಕ ಸಿದ್ಧಾಂತಗಳಿಗೆ ಮಾರು ಹೋಗಿದ್ದರು.

ಬುಡಕಟ್ಟು ಮೂಲ ನಿವಾಸಿಗಳ ಸ್ವತಂತ್ರ ಗಣರಾಜ್ಯದಲ್ಲಿ ಪ್ರಕೃತಿ ಆರಾಧನೆ ಜೊತೆಗೆ ಬೋಧಿಸತ್ವರನ್ನು ಮತ್ತು ಮುನಿಗಳನ್ನು ಆರಾಧಿಸುವ ಕ್ರಮವಿತ್ತು. ಆದರೆ ಮೂಲನಿವಾಸಿಗಳಿಂದ ಸ್ಥಾಪಿಸಲ್ಪಟ್ಟ ರಾಜಪ್ರಭುತ್ವದ ಕೋಸಲ ಮತ್ತು ಮಗಧ ಸಾಮ್ರಾಜ್ಯಗಳಲ್ಲಿ ಪ್ರಾಣಿ ಬಲಿಗಳಿಂದ ನಡೆಸಲ್ಪಡುವ ಯಜ್ಞಯಾಗಗಳು ರಾಜಾಶ್ರಯದಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದವು. ಇದರಿಂದಾಗಿ ಕೃಷಿಕರು ತುಂಬಾ ನಷ್ಟಕ್ಕೊಳಗಾದರು. ಪ್ರತಿನಿತ್ಯವು ಸಾವಿರಾರು ಪಶುಗಳನ್ನು ಯಜ್ಞಯಾಗಗಳಿಗೆ ಬಲಿಕೊಡಲ್ಪಾಗುತ್ತಿತ್ತು. ಒಬ್ಬೊಬ್ಬ ದೇವನಿಗೂ ಒಂದೊಂದು ಬಣ್ಣಗಳ ಗುಣಗಳನ್ನು ಹೊಂದಿದ ಹಸುಗಳನ್ನು ಯಜ್ಞಕ್ಕೆ ಬಲಿಕೊಡಲಾಗುತ್ತಿತ್ತು. ರಾಜರುಗಳು ತಮ್ಮ ಶಕ್ತಿವರ್ಧನೆಗಾಗಿ ಮತ್ತು ಬ್ರಾಹ್ಮಣರು ಮೋಕ್ಷಸಾಧನೆಗಾಗಿ ನಡೆಸುತ್ತಿದ್ದ ಇಂತಹ ಪ್ರಾಣಿಬಲಿಗಳ ಯಜ್ಞಯಾಗಗಳಿಂದ ಕೃಷಿಕರು ತಮ್ಮ ಕೃಷಿ ಕೆಲಸಕ್ಕೆ ನೆರವಾಗುತ್ತಿದ್ದ ಪಶುಗಳನ್ನು ಒಲ್ಲದ ಮನಸ್ಸಿನಿಂದ ಒಪ್ಪಿಸಬೇಕಾಗಿತ್ತು. ವಿರೋಧಿಸಿದರೆ ಒಂದೆಡೆ ಪ್ರಭುತ್ವದ ಶಿಕ್ಷೆಗೊಳಗಾಗುವ ಭೀತಿ ಮತ್ತೊಂದೆಡೆ ದೇವತೆಗಳ ಕೋಪಕ್ಕೆ ಬಲಿಯಾಗುತ್ತೀರಿ ಎಂಬ ಭಯವನ್ನು ಅದಾಗಲೇ ಬ್ರಾಹ್ಮಣರು ಅವರ ಮನಸ್ಸಿನಲ್ಲಿ ಬಿತ್ತಿದ್ದರು. ಇಂತಹ ಕ್ಲಿಷ್ಟಕರವಾದ ದಿನಗಳಲ್ಲಿ ಅವರ ಬಾಳಿಗೆ ಬೆಳಕಾಗಿ ಬಂದವರೇ ಭಗವಾನ್ ಬುದ್ಧರು.

ಹಿಮಾಲಯದ ಸುಂದರ ತಪ್ಪಲು ಪ್ರದೇಶದಲ್ಲಿ ಹತ್ತಾರು ಬುಡಕಟ್ಟು ಗಣರಾಜ್ಯಗಳಿದ್ದವು. ಅವುಗಳಲ್ಲಿ ಶಾಕ್ಯರ ಆಡಳಿತದ ಕಪಿಲವಸ್ತು, ಲಿಚ್ಛವಿಗಳ ಆಡಳಿತದ ವೈಶಾಲಿ, ವಿದೇಹರ ಆಡಳಿತದ ಮಿಥಿಲ, ನಾಯಕರುಗಳ ಆಡಳಿತದ ವಸಾಲಿ, ಬುಲ್ಲಿಯರುಗಳ ಆಡಳಿತ ಅಲ್ಲಿಕಪ್ಪದ, ಕಳಮಾರುಗಳು ಆಡಳಿತದ ಕೆಸಪುಟ್ಟದ, ಬಗ್ಗರು ಆಡಳಿತದ ಸಮಸಮಾಚಿಟ್ಟ, ಮೌರ್ಯರ ಆಡಳಿತದ ಹಿಪ್ಪಲಿವನ, ಮಲ್ಲರ ಆಡಳಿತದ ಪವದ ಮತ್ತು ಮಲ್ಲರನಾಯರ ಆಡಳಿತದ ಕುಶಿನಾರ ಮೊದಲಾದವು ಗಣತಂತ್ರ ವ್ಯವಸ್ಥೆಯ ಆಡಳಿತ ರಾಜ್ಯಗಳಾಗಿತ್ತು. ಶಾಕ್ಯರಾಜ್ಯವು ಕಪಿಲ ಮುನಿಯ ಪುಣ್ಯಭೂಮಿಯಾಗಿದ್ದು ಸಾಂಖ್ಯದರ್ಶನವನ್ನು ಕಪಿಲ ಮುನಿಯು ರಚಿಸಿದ್ದು ಇಲ್ಲಿಯೇ ಆದ್ದರಿಂದ ಕಪಿಲವಸ್ತುವು ಶಾಕ್ಯರ ರಾಜಧಾನಿಯಾಯಿತು. ಶಾಕ್ಯಸಂಘದ ಚುನಾಯಿತ ನಾಯಕನನ್ನು ರಾಜನೆಂದು ಕರೆಯುತ್ತಿದ್ದರು. ಕ್ರಿ. ಪೂ. 6ನೇ ಶತಮಾನದಲ್ಲಿ ಕಪಿಲವಸ್ತುವನ್ನು ಶುದ್ಧೋದನನೆಂಬ ಶಾಕ್ಯನಾಯಕನು ಆಳುತ್ತಿದ್ದನು. ಶುದ್ಧೋದನ ಮತ್ತು ಆತನ ಪತ್ನಿ ಮಹಾಮಾಯೆಯ ಮಗನಾಗಿ ಸಿದ್ಧಾರ್ಥ ಗೌತಮನು ಕ್ರಿ. ಪೂ. 627ರಲ್ಲಿ ವೈಶಾಖ ಪೂರ್ಣಿಮೆಯಂದು ಜನಿಸಿದನು.

ಬಾಲ್ಯದಲ್ಲೇ ಭೌತವಾದಿಯಾಗಿದ್ದ ಸಿದ್ಧಾರ್ಥನು ಸಾಂಖ್ಯದರ್ಶನ ಮತ್ತು ಸಾಂಖ್ಯಯೋಗವನ್ನು ಚೆನ್ನಾಗಿ ಅಭ್ಯಸಿಸಿದನು. ಸಿದ್ಧಾರ್ಥನ ಮನಸ್ಸು ಆಗಲೇ ಸತ್ಯಾನ್ವೇಷಣೆಯತ್ತ ತಿರುಗಿತು. ತನ್ನ ಹೆಚ್ಚಿನ ಸಮಯವನ್ನು ಅಧ್ಯಯನ, ಯೋಗ ಮತ್ತು ಕೃಷಿ ಚಟುವಟಿಕೆಗಳಿಗೆ ಅವನು ತೊಡಗಿಸಿಕೊಳ್ಳುತ್ತಿದ್ದನು. ಉತ್ತಮ ಕೃಷಿಕನಾಗಿದ್ದ ಸಿದ್ಧಾರ್ಥನು ನೇಗಿಲ ಜೊತೆಗೆ ಎತ್ತುಗಳೊಡನೆ ಹಾಡುತ್ತಾ ಉಳುಮೆಯಲ್ಲಿ ತೊಡಗಿದನೆಂದರೆ ಪಶುಪಕ್ಷಿಗಳು ನಿಬ್ಬೆರಗಾಗುತ್ತಿದ್ದವು ಎಂದು ತ್ರಿಪೀಠಕದಲ್ಲಿ ಉಲ್ಲೇಖವಿದೆ. ಗೌತಮನಿಗೆ 29 ವರ್ಷ ತುಂಬಿದಾಗ ಘಟನೆಯೊಂದು ನಡೆಯಿತು. ಈ ಘಟನೆ ಸಿದ್ಧಾರ್ಥ ಗೌತಮನು ರಾಜ್ಯ ತೊರೆಯುವಂತೆ ಮಾಡಿತು. ಶಾಕ್ಯ ಮತ್ತು ಕೋಲಿಯ ರಾಜ್ಯಗಳು ಅಕ್ಕಪಕ್ಕದ ರಾಜ್ಯಗಳಾಗಿದ್ದು ಎರಡೂ ರಾಜ್ಯಗಳ ನಡುವೆ ರೋಹಿಣಿ ನದಿಯು ಹರಿಯುತ್ತಿತ್ತು. ಸದಾ ಬೇಸಿಗೆಯಲ್ಲಿ ಕೃಷಿಗಾಗಿ ನದಿ ನೀರಿನ ಹಂಚಿಕೆಯಲ್ಲಿ ಸಣ್ಣಪುಟ್ಟ ಘರ್ಷಣೆಗಳಾಗುತ್ತಿದ್ದವು. ಆದರೆ ಅಂದು ಅದು ಯುದ್ಧಕ್ಕೆ ನಾಂದಿ ಹಾಡಿತು. ಶಾಕ್ಯರು ಕೋಲಿಯರನ್ನು ಸರ್ವನಾಶ ಮಾಡುವ ತೀರ್ಮಾನಕ್ಕೆ ಬಂದಿದ್ದರು. ಯುದ್ಧಕ್ಕಾಗಿ ಶಾಕ್ಯಸಂಘದ ಸಂಸತ್ತಿಗೆ ಪ್ರಸ್ತಾಪನೆ ಸಲ್ಲಿಸಲಾಯಿತು. ಇದನ್ನು ಸಿದ್ಧಾರ್ಥನು ಖಡಾಖಂಡಿತವಾಗಿ ವಿರೋಧಿಸಿದನು. ಯುದ್ಧದಿಂದ ಅನೇಕ ಸಾವುನೋವುಗಳಾಗುತ್ತದೆ. ನೀರಿಗಾಗಿ, ಸಂಪತ್ತಿಗಾಗಿ ಮಾನವರ ಮಾರಣ ಹೋಮ ಸಲ್ಲದು ಎಂದು ಶಾಕ್ಯ ಸಂಘದ ಮುಖಂಡರುಗಳಿಗೆ ಮನವಿ ಮಾಡಿದನು. ಶಾಂತಿಯಿಂದ ಮಾತುಕತೆ ಮೂಲಕ ಯಾವುದೇ ಗಂಭೀರ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯ ಎಂದು ತಿಳಿಸಿದನು. ಸಿದ್ಧಾರ್ಥನ ಮಾತಿಗೆ ಶಾಕ್ಯಸಂಘದ ಅನೇಕ ಪದಾಧಿಕಾರಿಗಳು, ಪ್ರತಿನಿಧಿಗಳು ಮುಖಂಡರುಗಳು ಒಪ್ಪಿಗೆ ಸೂಚಿಸಿದರು. ಶಾಕ್ಯರ ಇಬ್ಬರು ಮತ್ತು ಕೋಲಿಯರ ಇಬ್ಬರು ಹಾಗೂ ವಜ್ಜಿಗ ಗಣರಾಜ್ಯದ ಒಬ್ಬ ಹಿರಿಯ ಸದಸ್ಯರ ಸಮಿತಿಯಿಂದ ಶಾಂತಿ ಮಾತುಕತೆಯ ಮೂಲಕ ಎಲ್ಲರಿಗೂ ಒಪ್ಪಿಗೆಯಾಗುವ ಶಾಂತಿಸೂತ್ರವೊಂದನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತು.

ಆದರೆ ಬಾಲ್ಯದಿಂದಲೇ ಸಿದ್ಧಾರ್ಥ ಗೌತಮನನ್ನು ವಿರೋಧಿಸುತ್ತಿದ್ದ ಶಾಕ್ಯ ಸಂಘದ ಸೇನಾ ನಾಯಕ ದೇವದತ್ತನು ನಿರ್ಣಯದ ವಿರುದ್ಧ ಧ್ವನಿ ಎತ್ತಿದನು. ಗೌತಮನ ಶಾಂತಿಸೂತ್ರದಿಂದ ಶಾಕ್ಯರಿಗೆ ತುಂಬಾ ಅನ್ಯಾಯವಾಗಿದೆ, ಅದು ಸಂಪೂರ್ಣ ಕೋಲಿಯರ ಪರವಾಗಿದೆ, ಸಿದ್ಧಾರ್ಥ ಗೌತಮನು ತನ್ನ ತಾಯಿಯ ಕುಲದವರಾದ ಕೋಲಿಯರಿಗೆ ಹೆಚ್ಚಿನ ಲಾಭವಾಗುವಂತೆ ಮಾಡಿದ್ದಾನೆ ಎಂದು ಆರೋಪಿಸಿದನು. ಹಾಗೂ ಶಾಕ್ಯ ಸಂಘಕ್ಕೆ ದೂರನ್ನು ದಾಖಲಿಸಿದನು ಹಾಗೂ ಶಾಕ್ಯ ಸಂಘದ ಪದಾಧಿಕಾರಿಗಳೆಲ್ಲರೂ ಸಿದ್ಧಾರ್ಥನ ವಿರುದ್ಧ ಮತಹಾಕುವಂತೆ ಮಾಡುವಲ್ಲಿ ಯಶಸ್ವಿಯಾದನು. ಇದರಿಂದಾಗಿ ಸಿದ್ಧಾರ್ಥನ ವಿರುದ್ಧ ಹಕ್ಕುಚ್ಯುತಿ ಮಂಡನೆಯಾಯಿತು. ಕೊನೆಗೆ ಸಿದ್ಧಾರ್ಥನಿಗೆ ಮೂರು ಷರತ್ತುಗಳನ್ನು ವಿಧಿಸಲಾಯಿತು. ಒಂದು ರಾಜ್ಯ ತ್ಯಾಗ, ಎರಡು ಸಿದ್ಧಾರ್ಥ ಗೌತಮನ ಕುಟುಂಬಸ್ಥರ ಭೂಮಿ ಹಾಗೂ ಸಂಪತ್ತಿನ ಮುಟ್ಟುಗೋಲು, ಮೂರು ಮರಣದಂಡನೆ. ಇವುಗಳಲ್ಲಿ ಯಾವುದಾದರೊಂದನ್ನು ಆಯ್ಕೆ ಮಾಡುವಂತೆ ಸಿದ್ಧಾರ್ಥನಿಗೆ ಆದೇಶಿಸಲಾಯಿತು. ಮೊದಲನೆಯದನ್ನು ಆಯ್ದುಕೊಂಡ ಸಿದ್ಧಾರ್ಥನು ರಾಜ್ಯ ತ್ಯಾಗ ಮಾಡಿದನು. ಅರಮನೆಯಿಂದ ಹೊರಟ ಸಿದ್ಧಾರ್ಥನು ಕಪಿಲವಸ್ತುವಿನ ಅರಣ್ಯದಲ್ಲಿ ಆಶ್ರಮ ಮಾಡಿಕೊಂಡಿದ್ದ ಭಾರದ್ವಜ ಮುನಿಗಳಿಂದ ಪರಿವ್ರಾಜಕ ದೀಕ್ಷೆಯನ್ನು ಪಡೆದು ಅಲ್ಲಿಂದ ಬಿಂಬಸಾರ ರಾಜನು ಆಡಳಿತ ನಡೆಸುತ್ತಿದ್ದ ಮಗಧ ರಾಜ್ಯಕ್ಕೆ ತೆರಳಿದನು. ಮಗಧ ರಾಜಧಾನಿಯಿಂದ ತುಸುದೂರದಲ್ಲಿರುವ ಪಾಂಡರ ಬೆಟ್ಟದ ಬುಡದಲ್ಲಿ ಪರ್ಣಕುಟೀರವೊಂದನ್ನು ಕಟ್ಟಿ ವಾಸಿಸಿದನು. ಪ್ರತಿನಿತ್ಯವೂ ಮುಂಜಾನೆ ಭಿಕ್ಷಾಟನೆ ಮಾಡಲು ಬರುತ್ತಿದ್ದ ಸಿದ್ಧಾರ್ಥ ಗೌತಮನನ್ನು ಕಂಡ ಜನರು ತೇಜಸ್ಸಿನಿಂದ ಕೂಡಿದ ಯುವಮುನಿಗೆ ವಂದಿಸಿ ಅವನಿಗೆ ಅನ್ನಾಹಾರವನ್ನು ಕೊಡುತ್ತಿದ್ದರು. ಈ ವಿಷಯ ಮಗಧ ರಾಜ ಬಿಂಬಸಾರನಿಗೆ ತಿಳಿದಾಗ ಅವನು ಗೌತಮನನ್ನು ಭೇಟಿಯಾದನು. ರಾಜ್ಯ ತೊರೆದ ವಿಷಯ ತಿಳಿದಾಗ ಬಿಂಬಸಾರನು ಗೌತಮನಿಗೆ "ನಿನಗೆ ಅರ್ಧ ರಾಜ್ಯವನ್ನು ಹಾಗೂ ಸೈನ್ಯವನ್ನು ಕೊಡುತ್ತೇನೆ. ನೀನು ರಾಜನಾಗಿ ಬದುಕಬೇಕೇ ಹೊರತು ಸನ್ಯಾಸಿಯಾಗಿ ಅಲ್ಲ" ಎಂದು ತಿಳಿಹೇಳಿದನು.

...ನು ಎಷ್ಟೇ ವಿನಂತಿಸಿದರೂ ಅವಕಾಶವ ...ು "ನನಗೆ ವಿಶ್ವದ ಮಾನವರ ದುಃಖ ನಿವಾರಣೆಯ ...ಯಬೇಕಿದೆಯೇ ಹೊರತು ಸುಖ ಸಂಪತ್ತಿನ ...ವ್ಯಾಮೋಹವೂ ನನಗಿಲ್ಲ" ಎಂದು ಹೇಳಿದನು. ...ನ ವಿಶ್ವಶಾಂತಿಯ ಅನುಕಂಪಭರಿತ ಹೃದಯವನ್ನು ...ವಾದ ಬಿಂಬಸಾರನು ಗೌತಮನಿಗೆ ಸಾಷ್ಟಾಂಗ ...ಿ ಅಲ್ಲಿಂದ ತೆರಳಿದನು. ಇದೇ ಸಂದರ್ಭದಲ್ಲಿ ...ಗೆ ಶಾಂತಿಯ ಸುವಾರ್ತೆಯೊಂದು ತಲುಪಿತು.

ಗೌತಮನಿಂದ ಪರಿವ್ರಾಜಕರಾದ ಐದು ಜನ ...ುತ್ರರು ಗೌತಮನನಲ್ಲಿ ತಾವು ಕಪಿಲವಸ್ತುವನ್ನು ...ಿದನಂತರ ಕಪಿಲವಸ್ತುವಿನಲ್ಲಿ ತಮ್ಮನ್ನು ಮರಳಿ ...ನತೆ ಹಾಗೂ ಕೋಲಿಯರ ವಿರುದ್ಧ ಯಾವುದೇ ...ಗಳು ನಡೆಯಬಾರದು ಎಂದು ಶಾಕ್ಯ ರಾಜ್ಯದ ...ರೂ ಸಂಘಟಿತರಾಗಿ ದೊಡ್ಡ ಚಳವಳಿಯೊಂದನ್ನು ...ಿಂದು ತಿಳಿಸಿದರು ಹಾಗೂ ಜನರ ಪ್ರತಿಭಟನೆಗೆ ...ದ ಶಾಕ್ಯಸಂಘವು ಕೋಲಿಯರನ್ನು ತಮ್ಮ ಸೋದರ ...ಗಳೆಂದು ಸಭೆಯಲ್ಲಿ ಸರ್ವಾನುಮತದಿಂದ ...ನಿಸಿ ಮುಂದೆ ಯಾವತ್ತೂ ಅವರೊಂದಿಗೆ ಯುದ್ಧವು ...ಬೆಂದು ನಿರ್ಣಯಿಸಿದ್ದರು. ಜೊತೆಗೆ ನದಿ ನೀರಿನ ...ಮನ್ನು ಗೌತಮನ ಶಾಂತಿಸೂತ್ರದಂತೆ ಬಗೆಹರಿಸುವ ...ಕೈಗೊಂಡಿದ್ದರು. ಈ ಸುವಾರ್ತೆಯನ್ನು ಕೇಳಿದ ...ನು ತುಂಬಾ ಸಂತೋಷಗೊಂಡ. ಆದರೆ ಶಾಕ್ಯ ...ವರು ಮರಳಿಬರಬೇಕು ಎಂದು ಎಷ್ಟೇ ...ಸಿದರೂ ಗೌತಮ ನಿರಾಕರಿಸಿದ. "ನನಗೆ ಜ್ಞಾನ ಪ್ರಾಪ್ತಿಯಾದ ಬಳಿಕ ರಾಜ್ಯಕ್ಕೆ ಭೇಟಿ ...ನೆ" ಎಂದು ತಿಳಿಸಿದ.

...ಗೆ ಮುಂದುವರಿದ ಗೌತಮನು ಮಗಧದಿಂದ ...ರಾಜ್ಯಕ್ಕೆ ಅಲ್ಲಿಂದ ವಂಗ, ಕಳಿಂಗ, ಕುರು, ಪಾಂಚಾಲ, ...ರಿದಂತೆ ದೇಶಾದ್ಯಂತ ಬರಿಗಾಲಿನಲ್ಲಿ ಸುಮಾರು ...ರ್ಷಗಳ ಕಾಲ ನಡೆದಾಡುತ್ತಾ ದುಃಖದಿಂದ ತುಂಬಿದ ... ಮೌಢ್ಯತೆ ಎಂಬ ಅಂಧಕಾರವೇ ಕಾರಣವೆಂದು ...ೊಂಡ. ಇದನ್ನು ಹೋಗಲಾಡಿಸಲು ಮಾನವರ ...ಬೆಳಕಾಗಿ ನಿಲ್ಲಬೇಕು ಎಂದು ನಿರ್ಧರಿಸಿದ. ...ದ ತಪಸ್ಸಿನಿಂದ ಮೋಕ್ಷವೆಂಬ ಭ್ರಮೆಯಲ್ಲಿರುವ ...ಪಕರನ್ನು ಕುರಿತು ಮಾನವರ ಏಳಿಗೆಗಾಗಿ ...ಂದು ತಿಳಿಸಿದ. ಪುರುಷಾಕಾರದ ದೇವರು ಎಂಬ ...ಯು ಸದಾ ದೌರ್ಜನ್ಯ ಮತ್ತು ಪುರೋಹಿತಶಾಹಿಗೆ ...ಡಿಕೊಟ್ಟಿದೆ, ಅಂತಹ ಭಾವನೆಯ ತಲೆಯನ್ನು ...ಚ್ಚಿ ಉರುಳಿಸಿದ ಹೊರತು ದೌರ್ಜನ್ಯ ಮತ್ತು ...ಹಿತಶಾಹಿ ನಿಲ್ಲುವುದಿಲ್ಲವೆಂದು ಸಾರಿದ. ...ರನ್ನು ವರ್ಣಗಳ ಹೆಸರಿನಲ್ಲಿ ವಿಭಜಿಸಿದ ...ರ್ಣ ಪದ್ಧತಿಯನ್ನು ಪ್ರತಿಪಾದಿಸುವ ವೇದಗಳನ್ನು ...ದ ಗೌತಮನು ಬ್ರಾಹ್ಮಣನು ಹುಟ್ಟಿನಿಂದಲೇ ...ನ್ನುವ ವೇದಪ್ರಾಮಾಣ್ಯವನ್ನು ಖಡಾಖಂಡಿತ ...ಸುವಂತೆ ಕರೆನೀಡಿದ. ಹುಟ್ಟಿನಿಂದ ಯಾರೂ ... ಗುಣ, ಸ್ವಭಾವದಿಂದ ಶುಚಿಮನಸ್ಸಿನಿಂದ ಮಾಡುವ ...ಗಳಿಂದ ಕೂಡಿದ ಕರ್ಮದಿಂದ ಮಾತ್ರವೇ ...ು ಶ್ರೇಷ್ಠರಾಗಬಲ್ಲರು ಎಂದು ತಿಳಿಸಿದ. ದೌರ್ಜನ್ಯ, ... ಶೋಷಣೆ, ಗುಲಾಮಗಿರಿಯನ್ನು ತೀವ್ರವಾಗಿ ...ಸಿದ ಗೌತಮನು ಮಾನವರಲ್ಲಿನ ಮೇಲುಕೀಳೆಂಬ ...ಭಾವವು ಮಾನವ ವಿರೋಧಿಯಾಗಿದ್ದು ಇದು ... ಪ್ರಗತಿಗೆ ವಿರೋಧಿಯಾಗಿದೆಯೆಂದು, ವಿಶ್ವದ ...ಲ್ಲರೂ ಸಮಾನರೆಂದು ಸಾರಿದ.

...ತ್ತೆಂಬುವುದು ಹೇಗೆ ರಾಜನೊಬ್ಬನ ಸೊತ್ತಲ್ಲವೋ ... ವಿದ್ಯೆಯೆಂಬುವುದು ಕೇವಲ ಬ್ರಾಹ್ಮಣರ ...ಲ್ಲವೆಂದು ಗೌತಮ ವಾದಿಸಿದ. ಅನೇಕ ರಾಜರುಗಳ ...ದಿಂದ ವಿದ್ಯಾಲಯಗಳನ್ನು ಸ್ಥಾಪಿಸಿ ಸರ್ವರಿಗೂ ...ನೆ ಮಾಡಲು ಅನುವಾದ. ಮೋಕ್ಷಕ್ಕಾಗಿ ಮತ್ತು ...ಶತ್ರುವನ್ನು ಗೆಲ್ಲಲು ಮುಗ್ಧ ಪ್ರಾಣಿಗಳನ್ನು ...ಟ್ಟು ನಡೆಸುವಂತಹ ಯಜ್ಞಯಾಗಾದಿಗಳನ್ನು ...ಶು ನಾಶವೆಂದು ಖಂಡಿಸಿದ. ಹೀಗೆ ಗೌತಮನು ...ಸಾಮಾಜಿಕ ಪರಿವರ್ತನೆಯನ್ನು ಮಾಡುತ್ತಾ ತನ್ನ ...ದುಗಳನ್ನು ಮುಕ್ತವಾಗಿ ಮಂಡಿಸುತ್ತಾ ಸಾಗಿದ.

...ರೆ ಮಾನವರ ಪ್ರಗತಿಗಾಗಿ ಶಾಶ್ವತ ...ವೊಂದನ್ನು ರೂಪಿಸಲು ಪ್ರಬಲವಾದ ...ವೊಂದರ ಅವಶ್ಯಕತೆಯಿತ್ತು, ಭಾರತದ ...ವಾಸಿಗಳ ಸ್ವಾಭಿಮಾನವನ್ನು, ಅವರ ಹಕ್ಕು ...ನ್ನು ಮರುಸ್ಥಾಪಿಸುವುದರ ಜೊತೆಗೆ ಎಲ್ಲಾ ...ನರು ಒಪ್ಪುವಂತಹ ಭೌತವಾದದ ಶಾಂತಿಸೂತ್ರದ ...ಣೆಯ ಸಿದ್ಧಾಂತವೊಂದನ್ನು ಗೌತಮನಿಗೆ ...ಬೇಕಾಗಿತ್ತು, ಇದಕ್ಕಾಗಿ ಗೌತಮನು ಮೂರು ...ಪ್ಪ ಮಾಡಿಕೊಂಡ. ಒಂದು: ಮನುಷ್ಯನನ್ನು ಉತ್ತಮ ...ಮಾರ್ಗದಲ್ಲಿ ನಡೆಸುವುದು, ಎರಡು: ಸತ್ಯವನ್ನು ... ಮಾನವರನ್ನು ಸ್ವತಂತ್ರರನ್ನಾಗಿ ಮಾಡುವುದು; ...ಮಾನವರ ಅಜ್ಞಾನ ಮನೋಭಾವವನ್ನು ... ಮಾಡುವುದು.

...ವನ್ನು ಕಾರ್ಯರೂಪಕ್ಕೆ ತರಲು ಸಂಪೂರ್ಣ ಜ್ಞಾನದ ಅವಶ್ಯಕತೆ ತನಗಿದೆ ಎಂದು ಅರ್ಥಮಾಡಿಕೊಂಡ. ಮುಂದುವರಿದು ಇಂದಿನ ಬಿಹಾರದ ಗಯಾ ಸಮೀಪದ ನಿರಂಜನಾ ನದಿಯ ತುಸುದೂರದಲ್ಲಿ ಬೋಧಿವೃಕ್ಷದ ಕೆಳಗೆ ಧ್ಯಾನದಲ್ಲಿ ಮಗ್ನನಾದ. ಸತತ 45 ದಿನಗಳ ಈ ಅಧ್ಯಯನಕ್ಕಾಗಿ ಗೌತಮನು ಸಂಕಲ್ಪವೊಂದನ್ನು ಮಾಡಿದ. ದೇಹದ ಮಾಂಸಖಂಡಗಳು ಕಮರಿಹೋದರೂ, ರಕ್ತ ಬತ್ತಿ ದೇಹವು ಕಟ್ಟಿಗೆಯಂತಾದರೂ, ನರನಾಡಿಗಳಲ್ಲಿರುವ ರಕ್ತ ಚಲನೆ ನಿಂತುಹೋದರೂ ತನಗೆ ಜ್ಞಾನೋದಯವಾಗದೆ ಈ ಸ್ಥಳದಿಂದ ಕದಲುವುದಿಲ್ಲವೆಂದು ಪ್ರತಿಜ್ಞೆ ಕೈಗೊಂಡ. ಹಾಗೆಯೇ ಪ್ರಶಾಂತ ವಾತಾವರಣದಿಂದ ಉತ್ತೇಜನ ಪಡೆದು ಜ್ಞಾನ ಶಕ್ತಿಯನ್ನು ವೃದ್ಧಿಸಿಕೊಂಡ. ಧ್ಯಾನ ಮಾರ್ಗ ಸಮಾಧಿಯಲ್ಲಿ ತಲ್ಲೀನನಾದ. ಅದರಿಂದಾಗಿ ಪಡೆದ ಚಿತ್ತ ಏಕಾಗ್ರತೆಯ ಜ್ಞಾನದಿಂದ ಪ್ರಥಮ ಧ್ಯಾನಾವಸ್ಥೆಯನ್ನು ಪಡೆದ. ನಂತರ ದ್ವಿತೀಯ, ತೃತೀಯ, ಚತುರ್ಥ ಧ್ಯಾನಾವಸ್ಥೆಯನ್ನು ಸಾಧಿಸಿಕೊಂಡ. ಏಕಾಗ್ರತೆಯ ನಾಲ್ಕು ಹಂತಗಳ ಧ್ಯಾನದಿಂದ ಸಿದ್ಧಾರ್ಥನು ಎಲ್ಲಾ ಬಗೆಯ ಭಾವಾಲೋಚನೆಗಳನ್ನೆಲ್ಲಾ ತಿಳಿದುಕೊಂಡು ವ್ಯಾಮೋಹಗಳ ಅಪರಿಶುದ್ಧತೆಯಿಂದ ಪರಿಶುದ್ಧತೆ ಹೊಂದಿ ಸೂಕ್ಷ್ಮ ಧ್ಯಾನ ಗಮ್ಯತೆಯನ್ನು ಗಳಿಸಿಕೊಂಡ. ಆವನ ಮನಸ್ಸು ಶಾಂತಿಯ ನಿರ್ಮಲ ಉನ್ನತ ಮಟ್ಟದ ಬೌದ್ಧಿಕ ದೃಢತೆಯನ್ನು ಪಡೆಯಿತು. ಪ್ರಜ್ಞಾವಸ್ಥೆಯ ಮನಸ್ಸಿನಲ್ಲಿ ಮಾನವನ ಜನನ-ಮರಣ, ಸಾವುನೋವುಗಳ ಸೂಕ್ಷ್ಮಾತಿಸೂಕ್ಷ್ಮ ವಿಚಾರಗಳನ್ನು ಸ್ಮೃತಿ



ಪಟಲಕ್ಕೆ ತಂದುಕೊಂಡ. ಇದರಿಂದ ಮನಸ್ಸನ್ನು ಪರಿಶುದ್ಧಗೊಳಿಸಿಕೊಂಡು ಆ ಪರಿಶುದ್ಧ ಮನಸ್ಸನ್ನು ಪ್ರಪಂಚದಲ್ಲಿನ ಎಲ್ಲಾ ಜೀವರಾಶಿಗಳು ಒಂದೊಂದು ಸ್ಥಿತಿಯಲ್ಲಿ ಜನಿಸಿ, ಗೋಚರಿಸಿ, ಗತಿಸಿ ಮರೆಯಾಗುತ್ತಿರುವ ನಿರಂತರ ಜೀವನ ಹೋರಾಟ ಸೂಚಿಸುವ ಜ್ಞಾನಗ್ರಹಣ ಶಕ್ತಿಯೆಡೆಗೆ ನಿರ್ದೇಶಿಸಿದ. ಇಲ್ಲಿನ ಜೀವರಾಶಿಗಳು ಬಗೆಬಗೆಯ ಸಂತೋಷ, ಸಂಕಟ, ನೋವು, ದುಃಖಗಳಿಂದ ಪರಿಪರಿಯಾಗಿ ಗೋಚರಿಸುವುದನ್ನು ಕಂಡ. ಅವುಗಳು ದುಃಖದ ಮಡುವಿನಲ್ಲಿ ತೊಳಲಾಡುತ್ತಿರುವ ದೃಶ್ಯಗಳ ಗ್ರಹ್ಯತೆಯನ್ನು ಅರಿತುಕೊಂಡ. ಜನನ-ಮರಣವು ಅವರವರ ಕರ್ಮಾನುಸಾರ ಉತ್ತಮ ಇಲ್ಲವೆ ಅಧೋಗತಿಯ ಜೀವನ ಯಾತ್ರೆಗಳಲ್ಲಿ ಗೋಚರಿಸಿ ಪರಿಪರಿಯಾಗಿ ತೊಳಲಾಡುತ್ತಿರುವುದನ್ನು ಗ್ರಹಿಸುತ್ತಾ ಸತ್ಯಾಂಶವನ್ನು ತಿಳಿಯುತ್ತಾ ಪರಮಜ್ಞಾನ ಪರಿಧಿಗೆ ತಲುಪಿದ.

ಕೊನೆಗೆ ಗೌತಮನು ತನ್ನಲ್ಲಿ ಇನ್ನೂ ಉಳಿದಿರಬಹುದಾದ ಅಜ್ಞಾನವನ್ನು ಪೂರ್ಣ ನಿವಾರಿಸಿಕೊಂಡು ಪರಿಶುದ್ಧ ಮನಸ್ಸನ್ನು ಮಾನವರ ದುಃಖ ನಿವಾರಣೆಯ ಮಾರ್ಗದತ್ತ ಹರಿಯಬಿಟ್ಟ. ದುಃಖದ ಅರಿವು, ದುಃಖಕ್ಕೆ ಮೂಲಕಾರಣ, ದುಃಖ ಪ್ರಕಾರ ಹಾಗೂ ದುಃಖ ನಿವಾರಣಾ ಮಾರ್ಗಗಳನ್ನು ಕಂಡುಕೊಂಡ. ಒಂದು ವೈಶಾಖ ಹುಣ್ಣಿಮೆಯ ರಾತ್ರಿ ಕೊನೆಗೂ ಗೌತಮನು ಸಮ್ಯಕ್ ಜ್ಞಾನವನ್ನು ಪಡೆದು ಸಮ್ಮಾಸಂಬುದ್ಧನಾದ.

ಹೀಗೆ ಸತ್ಯಾನ್ವೇಷಣೆಯಿಂದ ಬೋಧಿ ಜ್ಞಾನವನ್ನು ಪಡೆದ ಬುದ್ಧರು ತಮ್ಮ ಮಾರ್ಗವನ್ನು ರೂಪಿಸಿಕೊಂಡ ಮೇಲೆ ಅವರ ಮನಸ್ಸಿನಲ್ಲಿ ಒಂದು ಸಂಶಯ ಹುಟ್ಟಿತು. ತನ್ನ ಸಿದ್ಧಾಂತವನ್ನು ಬೇರೆಯವರಿಗೆ ಬೋಧಿಸಬೇಕೋ ಅಥವಾ ತನ್ನ ವೈಯಕ್ತಿಕ ಪರಿಪೂರ್ಣತೆಗೋಸ್ಕರ ಉಳಿದ ಜೀವನವನ್ನು ಮುಡುಪಾಗಿಡಬೇಕೋ? ಅವರು ಹೀಗೆ ಗೊಂದಲಕ್ಕೆ ಬೀಳಲು ಒಂದು ಕಾರಣವಿತ್ತು. ಅವರಿಗೆ ಸತ್ಯಾನ್ವೇಷಣೆಯಿಂದ ಹೊಸ ಸಿದ್ಧಾಂತವೊಂದು ದೊರಕಿತ್ತು ನಿಜ, ಆದರೆ ಭೌತವಾದದಿಂದ ಅದಾಗಲೇ ಮೂಲ ಭಾರತೀಯರು ಸೇರಿದಂತೆ ಇತರರು ಕೂಡಾ ಭಾವನಾವಾದದೆಡೆಗೆ ತೆರಳಿದ್ದರಿಂದ ಅವರು ಅದನ್ನು ಒಪ್ಪಿಕೊಳ್ಳುವುದು, ಅದನ್ನು ಅನುಸರಿಸುವುದು ಬಹಳ ಕಷ್ಟವಾಗಿತ್ತು, ವಿವೇಚನೆಯ ವಿವೇಕಗಳಿಗೂ ಅದು ಬಹಳ ಸೂಕ್ಷ್ಮವಾಗಿತ್ತು, ದೇವರು, ಆತ್ಮ, ಪುನರ್‌ಜನ್ಮ, ಮೋಕ್ಷ ಮುಂತಾದ ಮೌಢ್ಯತೆಯ ಸಂಕೋಲೆಗಳಿಂದ ಜನತೆ ಬಿಡುಗಡೆ ಹೊಂದುವುದು ಕಠಿಣವಾಗಿತ್ತು, ಯಜ್ಞಯಾಗಗಳಲ್ಲಿನ ನಂಬಿಕೆಯನ್ನು ತೊರೆಯುವುದು ಜನರಿಗೆ ಕಠಿಣವಾಗಿತ್ತು, ಕರ್ಮ ಸಿದ್ಧಾಂತದಲ್ಲಿನ ನಂಬಿಕೆಯನ್ನು ತ್ಯಜಿಸುವುದು ಜನರಿಗೆ ಕಠಿಣವಾಗಿತ್ತು, ಆತ್ಮದ ಅಮರತ್ವದಲ್ಲಿನ ನಂಬಿಕೆಯನ್ನು ತೊರೆಯುವುದು ಜನರಿಗೆ ಕಠಿಣವಾಗಿತ್ತು, ಹಾಗೂ ಜಗತ್ತಿನಲ್ಲಿರುವ ಸಂಯುಕ್ತ ವಸ್ತುಗಳೆಲ್ಲವೂ ನಾಶಹೊಂದಲೇಬೇಕು; ಸತ್ತನಂತರ ಏನೂ ಉಳಿಯುದಿಲ್ಲ; ಆತ್ಮವೆಂಬುವುದು ಕೇವಲ ಭ್ರಮೆಯೆಂಬ ಸಿದ್ಧಾಂತವನ್ನು ಜನತೆ ಒಪ್ಪುವುದು ಕಠಿಣವಾಗಿತ್ತು, ಯಾಕೆಂದರೆ ಜನತೆಗೆ ಸ್ವಾರ್ಥದಲ್ಲಿಯೇ ಆಸಕ್ತಿ, ಅದರಲ್ಲೇ ಆನಂದ. ಸ್ವಾರ್ಥತೆಗಿಂತ ನಿಸ್ವಾರ್ಥತೆಯೇ ಮೇಲು, ಸರ್ವ ಮಾನವರ ಪ್ರಗತಿಯೇ ವಿಶ್ವ ಕಲ್ಯಾಣವೆಂಬ ಬುದ್ಧರ ಹೊಸ ಸಿದ್ಧಾಂತವನ್ನು ಜನತೆ ಒಪ್ಪಿಕೊಳ್ಳುವುದು ಕಠಿಣವಾಗಿತ್ತು, ಒಂದು ವೇಳೆ ಹೊಸ ಸಿದ್ಧಾಂತವನ್ನು ಭೋದಿಸಿದರೂ ಜನರು ಅದನ್ನು ಅರ್ಥಮಾಡಿಕೊಳ್ಳದಿರಬಹುದು, ಒಪ್ಪಿಕೊಂಡರೂ ಅದನ್ನು ಆಚರಿಸದಿರಬಹುದು. ಆಗ ಅದರಿಂದಾಗಿ ಅವರಿಗೆ ವೃಥಾ ಬೇಸರ ಮತ್ತು ಬೋಧಿಸುವವನಿಗೂ ವ್ಯರ್ಥವಾಗುತ್ತದೆ. ಅದರಬದಲು ಸನ್ಯಾಸಿಯಂತೆ ಪ್ರಪಂಚದಿಂದ ದೂರ ಉಳಿದು ಈ ಸಿದ್ಧಾಂತವನ್ನು ತನ್ನ ಪರಿನಿರ್ವಾಣಕ್ಕಾಗಿ ಮಾತ್ರವೇ ಬಳಸಿಕೊಂಡು ತಾನೊಬ್ಬನಾದರೂ ಸತ್ಯದ ದಾರಿಯಲ್ಲಿ ಜೀವನವನ್ನು ಸಾಧಿಸಬೇಕೋ ಎಂಬ ವಿಚಾರವೊಂದು ಬುದ್ಧರನ್ನು ಕಾಡಲಾರಂಭಿಸಿತು. ಆದರೆ ಮನಸ್ಸಿನೊಳಗಿನ ತುಮುಲವೊಂದನ್ನು ತಹಬಂದಿಗೆ ತಂದುಕೊಂಡ ಬುದ್ದರು ಮತ್ತೆ ಮತ್ತೆ ಯೋಚಿಸಿದರು.

ಪ್ರಪಂಚವು ವಿನಾಶದ ಕಡೆಗೆ ಹೋಗುತ್ತಿದೆ. ಸಂಪೂರ್ಣ ಜ್ಞಾನವನ್ನು ಪಡೆದ ನಾನು ಒಂದು ವೇಳೆ ನನ್ನ ಸಿದ್ಧಾಂತವನ್ನು ಜನತೆಗೆ ಬೋಧಿಸುವುದರ ಬದಲು ನಿವೃತ್ತಿಯ ಕಡೆಗೆ ತಿರುಗಿದರೆ ಪ್ರಪಂಚವು ನಿಜವಾಗಿಯೂ ನಾಶವಾಗುತ್ತದೆ. ಈಗ ನಾನು ಹಿಂದಿನ ಸಿದ್ಧಾರ್ಥನಲ್ಲ, ನಾನೀಗ ಬುದ್ಧನಾಗಿದ್ದೇನೆ. ಪರಿಪೂರ್ಣ ಜ್ಞಾನ ಪಡೆದ ಜ್ಞಾನಿಯಾಗಿದ್ದಾನೆ. ಹೀಗಿರುವಾಗ ಈ ಜ್ಞಾನವನ್ನು ಪ್ರಪಂಚಕ್ಕೆ ನೀಡಲು ನಿರಾಕರಿಸಬಾರದು. ತಪ್ಪು ಮಾಡುತ್ತಿರುವ ಜನತೆಯನ್ನು ಮತ್ತು ತಪ್ಪುಹಾದಿಯಲ್ಲಿ ಸಾಗುತ್ತಿರುವ ಮಾನವ ಕುಲವನ್ನು ರಕ್ಷಿಸುವುದು ಒಬ್ಬ ಮಾನವನಾಗಿ 'ನನ್ನ ಆದ್ಯ ಕರ್ತವ್ಯವಲ್ಲವೇ? ಹಾಗೆ ಮಾಡದೇ ಇದ್ದಲ್ಲಿ ನಾನು ನಿಜವಾಗಿಯೂ ಸ್ವಾರ್ಥಿಯಾಗುತ್ತೇನೆ. ಈ ಹಿಂದೆ ನಮ್ಮ ದೇಶದಲ್ಲಿ ಅನೇಕ ಉದ್ದೇಶಪೂರಿತ ತಪ್ಪುಗಳಿಂದೆ ಕೂಡಿದ ಸಿದ್ಧಾಂತಗಳು ಬೋಧಿಸಲ್ಪಟ್ಟವು. ಅವು ಈಗಲೂ ಮುಂದುವರಿಯುತ್ತಿದೆ. ತಪ್ಪು ಬೋಧನೆಗಳಿಂದ ಅಧೋಗತಿಗೆ ಹೋಗುತ್ತಿರುವ ಮುಗ್ಧರು, ಅಮಾಯಕರನ್ನು ತಪ್ಪು ದಾರಿಯಿಂದ ಸರಿದಾರಿಗೆ ತರಲಾದರೂ ನಾನು ನನ್ನ ಸಿದ್ಧಾಂತದ ಬಾಗಿಲನ್ನು ತೆರೆಯಲೇ ಬೇಕು. ಶುದ್ಧ ಜ್ಞಾನವನ್ನು ಪಡೆದಿರುವ ನಾನು ಹಾಗೂ ದುಃಖವನ್ನು ಜಯಿಸಿರುವ ನಾನು ದುಃಖವನ್ನು ಅನುಭವಿಸುತ್ತಿರುವವರ ಮೇಲೆ ಕೃಪಕಟಾಕ್ಷ ತೋರಲೇ ಬೇಕು. ದುಃಖದಿಂದ ಕೂಡಿದ ಪ್ರಪಂಚವನ್ನು ಸತ್ಯದ ಹಾದಿಯಲ್ಲಿ ಮುನ್ನಡೆಸಬೇಕು. ಸನ್ಯಾಸಿಯಂತೆ ಕೈಕಟ್ಟಿಕುಳಿತುಕೊಳ್ಳುವುದು ಅಥವಾ ಏನಾದರಾದಗಲಿ ನನಗೇನು ಎಂದು ಸುಮ್ಮನಿರುವುದು ತಪ್ಪಾಗುತ್ತದೆ. ಇಲ್ಲಿ ಮುಖ್ಯವಾಗಿ ಅಗತ್ಯವಾದುದೇನೆಂದರೆ ಪ್ರಪಂಚದಿಂದ ತಪ್ಪಿಸಿಕೊಳ್ಳುವುದಲ್ಲ ಬದಲಾಗಿ ಪ್ರಪಂಚವನ್ನು ಬದಲಾಯಿಸುವುದು ಮತ್ತು ಅದನ್ನು ಉತ್ತಮಗೊಳಿಸುವುದು. ನನ್ನ ಸಿದ್ಧಾಂತದ ಪ್ರಚಾರದಿಂದ ಜಗತ್ತಿನ ದುಃಖ ನಿವಾರಣೆಯಾಗುವುದಾದರೆ ನಿಷ್ಕ್ರಿಯ ಮೂರ್ತಿಯಂತೆ ಸುಮ್ಮನೆ ಕುಳಿತುಕೊಳ್ಳುವ ಬದಲು ಜಗತ್ತಿನ ಮಾನವರ ಏಳಿಗೆಗಾಗಿ ಜಗತ್ತಿನ ಸೇವೆ ಮಾಡುವುದು ಉತ್ತಮವೆಂದು ತಿಳಿದುಕೊಂಡರು.

ಕೊನೆಗೆ ಎರಡು ತಿಂಗಳ ಬಳಿಕ ತಾನು ಪಡೆದ ಬುದ್ಧತ್ವವನ್ನು ಆಷಾಢ ಪೂರ್ಣಿಮೆಯ ದಿನದಂದು ಸಾರಾನಾಥ ಎಂಬಲ್ಲಿ ಐದು ಜನ ಬಿಕ್ಕುಗಳಿಗೆ ಪ್ರಥಮವಾಗಿ ಧಮ್ಮೋಪದೇಶ ಮಾಡಿದರು. ಕೌಂಡಿನ್ಯ, ಅಸ್ಸಜಿ, ಮಹಾನಾಮ, ವಪ್ಪ, ಬದ್ದಿಯ ಈ ಐದು ಜನರೇ ಗೌತಮ ಬುದ್ಧರ ಪ್ರಥಮ ಶಿಷ್ಯರು. ಈ ಐವರು ಶಿಷ್ಯರಿಗೆ ಬುದ್ಧ ಧಮ್ಮದ ಪರಿವ್ರಾಜಕ ದೀಕ್ಷೆಯನ್ನು ಕೊಟ್ಟು ಪ್ರಥಮವಾಗಿ ಅವರಿಗೆ ಪ್ರಾಣಹತ್ಯೆ ಮಾಡದಿರುವುದು, ಕಳ್ಳತನ ಮಾಡದಿರುವುದು, ವ್ಯಭಿಚಾರ ಮಾಡದಿರುವುದು, ಸುಳ್ಳು ಹೇಳದಿರುವುದು, ಮದ್ಯಪಾನ ಅಮಲು ಪದಾರ್ಥಗಳನ್ನು ಸೇವಿಸದಿರುವ ಮತ್ತು ಅವುಗಳಿಂದ ವಿಮುಖರಾಗುವ ಪಂಚಶೀಲವನ್ನು ಬೋಧಿಸಿದರು. ನಂತರ ಬಿಕ್ಕು ದೀಕ್ಷೆಯನ್ನು ನೀಡಿ ಅಷ್ಟಶೀಲವನ್ನು ಬೋಧಿಸಿದರು. ತದನಂತರ ಬುದ್ಧರು ತಮಗೆ ಪರಿಪೂರ್ಣ ಜ್ಞಾನದ ಪ್ರಾರಂಭದಲ್ಲಿ ಪ್ರಾಪ್ತಿಯಾದ ನಾಲ್ಕು ಶ್ರೇಷ್ಠ ಸತ್ಯವನ್ನು ಬೋಧಿಸಿದರು. ಅವುಗಳು ಕ್ರಮವಾಗಿ 1. ದುಃಖ ಸತ್ಯ 2. ದುಃಖ ಸಮುದಯ ಸತ್ಯ 3. ದುಃಖ ನಿರೋಧ ಸತ್ಯ 4. ದುಃಖ ನಿರೋಧ ಮಾರ್ಗ ಸತ್ಯ. ತದನಂತರ ಶೀಲ, ಸಮಾಧಿ, ಪ್ರಜ್ಞೆಯೆಂಬ ತ್ರಿಸರಣ ಸಂಸ್ಕಾರವನ್ನು ಬೋಧಿಸಿದರು. ಜೊತೆಗೆ ನಾಲ್ಕು ಶ್ರೇಷ್ಠ ತತ್ವಗಳಾದ ಮೈತ್ರಿ, ಕರುಣೆ, ಮುದಿತ, ಉಪೇಕ್ಷಾವನ್ನು ತಿಳಿಸಿದರು. ದುಃಖ ನಿವಾರಣೆಗಾಗಿ ಮೌಢ್ಯತೆಯಿಲ್ಲದ ವೈಚಾರಿಕತೆ, ವೈಜ್ಞಾನಿಕ ವಿಚಾರಗಳಿರುವ ಸುಲಭ ಸರಳ ವಿಧಾನವಾದ ಶಾಂತಿ, ಅಹಿಂಸೆ, ಕರುಣೆ, ಸಮಂತೆಯೆಂಬ ತತ್ವಗಳನ್ನೊಳಗೊಂಡ ಮಧ್ಯಮಾ ಮಾರ್ಗವಾದ ಅಷ್ಟಾಂಗ ಮಾರ್ಗವನ್ನು ಸಾಧಕರಿಗೆ ಬೋಧಿಸಿದರು. ಅವುಗಳು ಕ್ರಮವಾಗಿ 1. ಶುದ್ಧವಾದ ದೃಷ್ಟಿಕೋನ, 2. ಶುದ್ಧವಾದ ಆಶೋತ್ತರ, 3. ಶುದ್ಧವಾದ ಮಾತು, 4. ಶುದ್ಧವಾದ ಕಾರ್ಯಪ್ರವೃತ್ತಿ 5. ಶುದ್ಧವಾದ ಜೀವನವೃತ್ತಿ 6 ಶುದ್ಧವಾದ ಪ್ರಯತ್ನ, 7 ಶುದ್ಧವಾದ ಸ್ಮರಣೆ, 8 ಶುದ್ಧವಾದ ಮಾನಸಿಕ ದೃಢನಿರ್ಧಾರ ಮತ್ತು ಏಕಾಗ್ರತೆ. ತದನಂತರ ದ್ವಾದಶನಿಧಾನಗಳನ್ನು ತಿಳಿಸಿದರು. ಹಾಗೂ ಅದಕ್ಕೆ ಕ್ರಾಂತಿಕಾರಕವಾದ ಸೂತ್ರವನ್ನು ಬೋಧಿಸಿದರು.


ಹೀಗೆ ಬುದ್ಧರು ತಾನು ಕಂಡುಕೊಂಡ ಸತ್ಯವನ್ನು ಶಿಷ್ಯರಿಗೆ ಭೋದಿಸುತ್ತಾ ಧಮ್ಮಚಕ್ರವನ್ನು ಉಳಿಸಿದರು. ಮಾರನೇ ದಿನ ಯಶನೆಂಬ ವರ್ತಕನೊಬ್ಬನು ತನ್ನ 54 ಜನ ಅನುಯಾಯಿಗಳೊಂದಿಗೆ ಬುದ್ಧರ ಬಳಿ ಬಂದು ಧಮ್ಮೋಪದೇಶ ನೀಡುವಂತೆ ಮತ್ತು ತಮ್ಮನ್ನು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸುವಂತೆ ವಿನಂತಿಸಿಕೊಂಡ. ಬುದ್ಧರು ಅವರೆಲ್ಲರಿಗೂ ಧಮ್ಮ ದೀಕ್ಷೆಯನ್ನು ಕೊಟ್ಟು 60 ಜನ 'ಬಿಕ್ಕುಗಳ' ಸಂಘವನ್ನು ಸ್ಥಾಪಿಸಿದರು. ನಂತರ ಬುದ್ಧರು ಬಿಕ್ಕುಗಳನ್ನು ಕುರಿತು ಸಹೋದರರೆ ಜಗತ್ತಿನ ಸಂಯುಕ್ತ ವಸ್ತುಗಳೆಲ್ಲವೂ ನಾಶಹೊಂದಲೇ ಬೇಕು, ಇಲ್ಲಿ ಶಾಶ್ವತವಾದುದು ಯಾವುದೂ ಇಲ್ಲ. ಧಮ್ಮವನ್ನು ಅನುಸರಿಸಿಕೊಂಡು ಜಗತ್ತನ್ನು ಪ್ರೀತಿಸಿರಿ. ಲೋಕದ ಮೇಲೆ ಕರುಣೆ ಇಟ್ಟು ಬಹುಜನರ ಹಿತಕ್ಕಾಗಿ ಬಹುಜನರ ಒಳಿತಿಗಾಗಿ ಶ್ರಮಿಸಿರಿ. ಸಕಲ ಜೀವಿಗಳಿಗೂ ದಯೆ ತೋರಿರಿ. ಮಾನವರಲ್ಲಿನ ಮೇಲು-ಕೀಳು ಎಂಬ ಅಸಮಾನತೆಯನ್ನು ಕಿತ್ತೊಗೆಯಿರಿ. ವಿಶ್ವದ ಮಾನವರೆಲ್ಲರೂ ಸಮಾನರೆಂದು ಸಾರಿ ಎಂದು ಕರೆಕೊಟ್ಟರು. ಬುದ್ಧರ ಧಮ್ಮೋಪದೇಶದಿಂದ ಪ್ರಭಾವಿತರಾದ ಜನತೆ ಸಾಗರೋಪಾದಿಯಲ್ಲಿ ಧಮ್ಮದೀಕ್ಷೆಯನ್ನು ಪಡೆದರು. ಮಗಧ ರಾಜ ಬಿಂಬಸಾರ, ಕೋಸಲ ರಾಜ ಪ್ರಸೇನಜೀತ ಸೇರಿದಂತೆ ಸ್ವತಂತ್ರ ಗಣರಾಜ್ಯದ ಎಲ್ಲಾ ಪ್ರಜೆಗಳು, ಮುಖಂಡರು, ನಾಯಕರು ಧಮ್ಮ ದೀಕ್ಷೆಯನ್ನು ಪಡೆದು ಧನ್ಯತೆಯ ಬುದ್ಧ ಮಾರ್ಗದಲ್ಲಿ ಪ್ರಗತಿಯ ಕಡೆಗೆ ಸಾಗಿದರು. ಇದನ್ನು ಗಮನಿಸಿದ ಗೃದ್ಧ ಕೂಟ ಪರ್ವತದ 150 ಜನ ಬ್ರಾಹ್ಮಣ ಕುಟುಂಬಸ್ಥರು ಗೌತಮ ಬುದ್ಧರನ್ನು ಬರಮಾಡಿಕೊಂಡು ಅವರ ಧಮ್ಮೋಪದೇಶವನ್ನು ಆಲಿಸಿ ಧಮ್ಮದೀಕ್ಷೆಯನ್ನು ಪಡೆದರು. ಹಾಗೆಯೇ ಉತ್ತಾರವತಿಯ 500 ಜನ ಬ್ರಾಹ್ಮಣರು ಧಮ್ಮದೀಕ್ಷೆಯನ್ನು ಪಡೆದು ಸತ್ಯದ ಮಾರ್ಗದಲ್ಲಿ ಸಾಗಿದರು. ಗೌತಮ ಬುದ್ಧರು ಜಾತಿ ಮತ್ತು ವರ್ಣಗಳ ಭೇದವಿಲ್ಲದೆ ಸಕಲ ಮಾನವರಿಗೂ ಧಮ್ಮದೀಕ್ಷೆಯನ್ನು ನೀಡುತ್ತಾ ದೇಶಾದ್ಯಂತ ಸಂಚರಿಸಿ ಸರ್ವರನ್ನು ಸತ್ಯದ ಸನ್ಮಾರ್ಗದಲ್ಲಿ ಕೊಂಡೊಯ್ದರು.

ಹೀಗೆ ಮಾನವೀಯ ಮೌಲ್ಯಗಳುಳ್ಳ ತತ್ವ ಸಿದ್ಧಾಂತವನ್ನು ಬಹಳ ಸ್ಪಷ್ಟವಾಗಿ ಪ್ರತಿಪಾದಿಸಿದ ಮತ್ತು ಅದನ್ನು ಅನುಸರಿಸಿದ ವಿಶ್ವದ ಮೊದಲ ಮಾನವತಾವಾದಿ ಗೌತಮ ಬುದ್ಧರಾಗಿದ್ದಾರೆ. ಮಾತ್ರವಲ್ಲ ಜಗತ್ತಿಗೆ ಬೆಳಕನ್ನು ನೀಡಿದ ಬುದ್ಧರು ಶಾಂತಿ, ಜ್ಞಾನ, ಕರುಣೆಯನ್ನು ಸಾರಿದ ಮಹಾನ್ ಗುರುವಾಗಿದ್ದಾರೆ, ಶ್ರೇಷ್ಠ ಗುರುವಾಗಿದ್ದಾರೆ. ಇಂದು ಆಷಾಢ ಹುಣ್ಣಿಮೆಯನ್ನು ಜಗತ್ತಿನಾದ್ಯಂತ ಇರುವ ಬೌದ್ಧರು ಗುರುಪೂರ್ಣಿಮೆಯೆಂದು ಶ್ರದ್ಧೆಯಿಂದ ಆಚರಿಸುತ್ತಾರೆ. ಪಾಲಿಕೃತಿಯೊಂದು ಹೇಳುವಂತೆ "ಸೂರ್ಯ ಹಗಲಿನಲ್ಲಿ ಮಾತ್ರವೇ ಬೆಳಗುತ್ತಾನೆ, ಚಂದ್ರ ರಾತ್ರಿಯನ್ನು ಪ್ರಕಾಶಮಾನವನ್ನಾಗಿಸುತ್ತಾನೆ, ಗುರಾಣಿಯನ್ನು ತೊಟ್ಟಾಗ ಯೋಧನು ಶೋಭಿಸುತ್ತಾನೆ, ಯೋಗಿಯು ಧ್ಯಾನದಲ್ಲಿದ್ದಾಗ ಶೋಭಿಸುತ್ತಾನೆ ಆದರೆ ಬುದ್ಧರು ತನ್ನ ಸ್ವಯಂಪ್ರಭೆಯಿಂದ ಹಗಲಿನಲ್ಲೂ ರಾತ್ರಿಯಲ್ಲೂ ನಿರಂತರವಾಗಿ ಶೋಭಿಸುತ್ತಾರೆ."

• ಬಿ. ಧಮ್ಮಾನಂದ









ನ್ಯಾಯ, ನೈತಿಕ ಅವನತಿ ಮತ್ತು ಪುನಃಶ್ಚೇತರಿಕೆ

2002ರ ಸೆಪ್ಟಂಬರ್‌ನಲ್ಲಿ ಗುಜರಾತಿನ ಅಕ್ಷರಧಾಮ ಮಂದಿರದ ಮೇಲೆ ನಡೆದ ಭಯೋತ್ಪಾದಕ ದಾಳಿ 30 ಜನರ ಪ್ರಾಣವನ್ನು ಬಲಿ ತೆಗೆದುಕೊಳ್ಳುವುದರೊಂದಿಗೆ ಅನೇಕರನ್ನು ಗಾಯಾಳುಗಳಾಗಿಸಿತ್ತು. ತರುವಾಯ ದೆಹಲಿಯಿಂದ ರಾಷ್ಟ್ರೀಯ ಭದ್ರತಾ ಪಡೆಯ ಸಹಾಯ ಕೋರಲಾಯಿತು. ಭದ್ರತಾ ಪಡೆಯ ಜವಾನರು ಹಾಗೂ ದಾಳಿಕೋರರ ಮಧ್ಯೆ ನಡೆದ ಗುಂಡಿನ ಕಾಳಗದಲ್ಲಿ ದಾಳಿಕೋರರಿಬ್ಬರೂ ಸಾವನ್ನಪ್ಪಿದರು. ದಾಳಿಗೆ ಸಂಬಂಧಪಟ್ಟಂತೆ ಆರು ಮಂದಿ ಮುಸ್ಲಿಮರನ್ನು ಬಂಧಿಸಿ ಅವರ ವಿರುದ್ಧ ಪ್ರಕರಣ ದಾಖಲಿಸಲಾಯಿತು. ಅಹಮದಾಬಾದಿನ ವಿಶೇಷ ಪೋಟಾ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಆರೂ ಮಂದಿ ತಪ್ಪಿತಸ್ಥರೆಂದು ತೀರ್ಮಾನಿಸಿ ಮೂವರಿಗೆ ಮರಣದಂಡನೆಯನ್ನೂ ಮಿಕ್ಕ ಮೂವರಿಗೆ ಜೀವಾವಧಿ ಶಿಕ್ಷೆಯನ್ನೂ ವಿಧಿಸಲಾಯಿತು. ನಂತರ ಪ್ರಕರಣ ಹೈಕೋರ್ಟಿನ ಮೆಟ್ಟಿಲೇರಿತು. ಹೈಕೋರ್ಟಿನ ವಿಭಾಗೀಯ ಪೀಠವೂ ಕೆಳಕೋರ್ಟಿನ ತೀರ್ಪನ್ನು ಎತ್ತಿಹಿಡಿಯಿತು. ಪುರಾವೆಯಾಗಿ ಹೈಕೋರ್ಟಿನ ಮುಂದೆ ಹಾಜರುಪಡಿಸಿದ ಎರಡು ಪತ್ರಗಳು ಇಬ್ಬರು ಮೃತ ಫಿದಾಯೀನ್‌ಗಳಿಂದ ವಶಪಡಿಸಿಕೊಂಡದ್ದೆಂದು ಪೊಲೀಸರು ಹೇಳಿದರಾದರೂ ನೆತ್ತರಿನಿಂದ ತೋಯ್ದು ಹೋಗಿದ್ದ ಶರೀರಗಳಿಂದ ಪಡೆಯಲಾದ ಆ ಪತ್ರಗಳು ಚೂರಾದರೂ ಕೊಳೆಯಾಗಿರಲಿಲ್ಲ. ಈ ಕುರಿತು ಪೀಠ ತನ್ನ ತೀರ್ಪಿನಲ್ಲಿ ಮಾರ್ಕ್ ಟ್ವೈನ್‌ನ "ವಾಸ್ತವ ಕಲ್ಪಿತಸತ್ಯಕ್ಕಿಂತಲೂ ವಿಸ್ಮಯಕರವಾಗಿರುತ್ತದೆ" ಎಂಬ ಮಾತನ್ನು ಉದ್ಧರಿಸಿತು.

ಅಕ್ಷರಧಾಮ ದಾಳಿ ಕುರಿತಂತೆ ಆರಂಭಿಕ ತನಿಖೆ ನಡೆಸಿದವರು ಸ್ಥಳೀಯ ಪೊಲೀಸರು. ಆ ಮೇಲೆ ತನಿಖೆ ಭಯೋತ್ಪಾದನಾ ನಿಗ್ರಹ ದಳಕ್ಕೆ (ಎಟಿಎಸ್) ವರ್ಗಾಯಿಸಲ್ಪಟ್ಟು ಅಂತಿಮವಾಗಿ ಆಗಸ್ಟ್ 28, 2003ರ ಸಾಯಂಕಾಲ ಕ್ರೈಮ್ ಬ್ರಾಂಚ್‌ನ ಟೇಬಲ್ಲಿಗೆ ಬಂದುಬಿದ್ದಿತ್ತು. ಅದೇ ಸಂಜೆ 6:30ಕ್ಕೆ ತನಿಖೆಯ ನೇತೃತ್ವ ವಹಿಸಿಕೊಂಡ ಜಿ.ಎಲ್. ಸಿಂಘಾಲ್ ರಾತ್ರಿ 8 ಗಂಟೆಗೆ ಡಿಐಜಿ ವಂಜಾರಾ ಕೊಟ್ಟ ಮಾಹಿತಿ ಕುರಿತಂತೆ ಮೊದಲ ಪ್ರಾಸಿಕ್ಯೂಶನ್ ಸಾಕ್ಷಿಯ (ಸಾಕ್ಷಿ 50) ಹೇಳಿಕೆಯನ್ನು ದಾಖಲಿಸಿದ್ದರು. ಮರುದಿನವೆ ಐವರು ಆರೋಪಿಗಳನ್ನು ಬಂಧಿಸಲಾಯಿತು. ಮೂಲ ದೂರಿನಲ್ಲಾಗಲಿ ಎಫ್‌ಐಆರ್‌ನಲ್ಲಾಗಲಿ ಇರದ ಪೋಟಾ ಕಾಯ್ದೆಯ ಅಂಶಗಳನ್ನು ಆಗಸ್ಟ್ 30ರಂದು ಸೇರಿಸಲಾಯಿತು. ಆಗಸ್ಟ್ 31ರಂದು ಕಾಶ್ಮೀರದ ಐಜಿಪಿಯಿಂದ ಗುಜರಾತ್ ಎಟಿಎಸ್‌ನ ಐಜಿಪಿ (ಆಪರೇಷನ್ಸ್)ಗೆ ಫ್ಯಾಕ್ಸ್ ಸಂದೇಶವೊಂದು ಬಂತು. ಅದರಲ್ಲಿ ಕಾಶ್ಮೀರ ಪೊಲೀಸರ ವಶದಲ್ಲಿದ್ದ ಚಾಂದ್‌ಖಾನ್ ಎಂಬಾತ ತಾನು ಅಕ್ಷರಧಾಮ ದಾಳಿಯಲ್ಲಿ ಭಾಗಿಯಾಗಿದ್ದೆನೆಂದು ತಪ್ಪೊಪ್ಪಿಗೆ ಹೇಳಿಕೆ ನೀಡಿರುತ್ತಾನೆಂದು ಬರೆಯಲಾಗಿತ್ತು.

ಫಿದಾಯೀನ್‌ಗಳಿಂದ ವಶಪಡಿಸಿಕೊಳ್ಳಲಾದ ಪತ್ರಗಳು ಉರ್ದು ಭಾಷೆಯಲ್ಲಿದ್ದವು. ಅದರ ಕೈಬರಹ ಆರೋಪಿ ನಂಬರ್ 4ರ ಕೈಬರಹವನ್ನು ಹೋಲುತ್ತದೆಂದಾಯಿತು. ಆರೋಪಿಗಳೆಲ್ಲ ಪಿತೂರಿಯಲ್ಲಿ ತಾವು ವಹಿಸಿದ ಪಾತ್ರಗಳ ಕುರಿತ ವಿವರಗಳನ್ನು ಮೊದಲಿಗೆ ಎಸ್‌ಪಿ ಸಂಜಯ ಗಾಡ್ವಿಯವರಿಗೆ (ಸಾಕ್ಷಿ 78), ನಂತರ ಮುಖ್ಯ ನ್ಯಾಯಾಧೀಶರಿಗೆ (ಸಾಕ್ಷಿ 99) ಒದಗಿಸಲು ಮನಸಾರೆ ಒಪ್ಪಿದರು. ಫಿದಾಯೀನ್‌ಗಳನ್ನು ಕಾಶ್ಮೀರದಿಂದ ಬರೇಲಿಗೂ ಅಲ್ಲಿಂದ ಅಹಮದಾಬಾದಿಗೂ ಸಾಗಿಸಲು ಬಳಸಿದ್ದು ದ್ದೆನ್ನಲಾದ ಅಂಬಾಸಡರ್ ಕಾರು ಜಮ್ಮು, ಕಾಶ್ಮೀರದಲ್ಲಿ ಆರೋಪಿ ನಂಬರ್ 6ರ ಬಳಿಯಿರುವ ವಿಚಾರ ತಿಳಿದಾಕ್ಷಣ ಅದನ್ನು ವಶಪಡಿಸಿಕೊಳ್ಳಲಾಯಿತು.



ಹೀಗೆ ಸಕಲವನ್ನೂ ನೀಟಾಗಿ ಹೆಣೆಯಲಾಗಿದ್ದ ಪ್ರಾಸಿಕ್ಯೂಶನ್‌ನ ಕಥೆಯಲ್ಲಿ ನಂಬಲಾಗದ ಸಂಗತಿಯಾದರೂ ಏನಿತ್ತು? ಜುಲೈ 2006ರಲ್ಲಿ ಪೋಟಾ ನ್ಯಾಯಾಲಯದ ಅಂತಿಮ ತೀರ್ಪು ಹೊರಬಿತ್ತು. ನಂತರ ಮೇಲ್ಮನವಿಯ ವಿಚಾರಣೆ ನಡೆಸಿದ ಹೈಕೋರ್ಟು ಆರೋಪಿಗಳ ವಿರುದ್ಧದ ಆಪಾದನೆಗಳು ಸಾಬೀತುಪಟ್ಟಿವೆಯೆಂದು ಜೂನ್ 2010ರಲ್ಲಿ ಆದೇಶ ನೀಡಿತು. ಆಪಾದನೆಗಳ ಪಟ್ಟಿ ಸಾಕಷ್ಟು ದೀರ್ಘವಿದೆ: "ಗುಜರಾತಿನಲ್ಲಿ ಹಿಂದೂಗಳ ಸಾಮೂಹಿಕ ಹತ್ಯೆಗೆ ಪಿತೂರಿ ನಡೆಸಿರುವುದು, ಧರ್ಮದ ನೆಲೆಯಲ್ಲಿ ಎರಡು ಗುಂಪುಗಳ ಮಧ್ಯೆ ವೈರತ್ವ ಹುಟ್ಟುಹಾಕಿರುವುದು, ಉಗ್ರಗಾಮಿ ಸಂಘಟನೆಯೊಂದಕ್ಕೆ ಬೆಂಬಲ ಕೋರಿರುವುದು, ಅದಕ್ಕೋಸ್ಕರ ಸಭೆಗಳನ್ನು ನಡೆಸಿರುವುದು, ಭಯೋತ್ಪಾದಕ ಕೃತ್ಯಗಳಿಗಾಗಿ ಹಣ ನೀಡುವಂತೆ ಇನ್ನೊಬ್ಬರನ್ನು ಆಹ್ವಾನಿಸಿರುವುದು, ಪಡೆದ ಹಣವನ್ನು ಭಯೋತ್ಪಾದಕ ಕೃತ್ಯಗಳಿಗೆ ನೀಡಿರುವುದು, ನಿಷೇಧಿತ ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳನ್ನು ಬಳಸಿರುವುದು, ಯಾವುದೇ ಪ್ರಚೋದನೆ ಇಲ್ಲದಿದ್ದರೂ ಭಯೋತ್ಪಾದಕ ಕೃತ್ಯ ನಡೆಸಿ ಸಾಮೂಹಿಕ ಹತ್ಯೆ ಮಾಡಿರುವುದು, ಕೊಲೆಯತ್ನ ಮತ್ತು ಕೊಲೆಗೆ ಸಹಕಾರ ನೀಡಿರುವುದು."

ಅಕ್ಷರಧಾಮ ಪ್ರಕರಣದ ನೈಜ ಕಥೆಯಿರುವುದು ದುರುದ್ದೇಶಪೂರಿತ ತನಿಖೆಯಲ್ಲಿ ಅಲ್ಲ. ಅಂತಹ ತನಿಖೆಗಳು ನಮಗೆ ಈಗಾಗಲೆ ಸುಪರಿಚಿತ. ಪಾತ್ರಧಾರಿಗಳೂ ಸುಪರಿಚಿತರೇ: ಸಿಂಘಾಲ್, ವಂಜಾರಾ ಮತ್ತು ಎಟಿಎಸ್, ಕ್ರೈಮ್ ಬ್ರಾಂಚ್‌ಗಳಲ್ಲಿರುವ ಅವರ 'ಚಿಡ್ಡಿ ದೋಸ್ತ್'ಗಳು. ಭಯೋತ್ಪಾದನೆ ಪ್ರಕರಣಗಳ ಆರೋಪಪಟ್ಟಿಗಳನ್ನು, ತೀರ್ಪುಗಳನ್ನು ಓದುವುದೂ ಒಂದೇ, ಒಂದರನಂತರ ಮತ್ತೊಂದರಂತೆ ಕಳಪೆ ದರ್ಜೆಯ ಕೆಟ್ಟ ಸಿನಿಮಾಗಳನ್ನು ನೋಡುವುದೂ ಒಂದೇ. ಎರಡೂ ಜಿಗುಪ್ಸೆ ಮೂಡಿಸುತ್ತವೆ. ಅಲ್ಲಿ ಕಥಾವಸ್ತು, ಕ್ಯಾಮರಾ ಕೋನ, ಡಯಲಾಗ್ ಎಲ್ಲಾ ಎಷ್ಟರಮಟ್ಟಿಗೆ ಒಂದನ್ನೊಂದು ಹೋಲುತ್ತವೆಂದರೆ ಒಂದನ್ನು ಇನ್ನೊಂದರಿಂದ ಪ್ರತ್ಯೇಕಿಸುವುದು ಕಷ್ಟಸಾಧ್ಯ. ಉದಾಹರಣೆಗೆ:

ಅಕ್ಷರಧಾಮ ಪ್ರಕರಣದಲ್ಲಿ ಆರೋಪಿಗಳತ್ತ ನೇರವಾಗಿ ಬೆಟ್ಟು ಮಾಡುವಂತಹ ಕಾಗದಪತ್ರಗಳು ಆಕಸ್ಮಿಕವಾಗಿ ತನಿಖಾಕಾರರ ಕೈಗೆ ಸಿಗುತ್ತದೆ.

ಅದೇರೀತಿ ಕೆಂಪು ಕೋಟೆ ದಾಳಿ (2000) ಪ್ರಕರಣದಲ್ಲಿ ತಪ್ಪಿಸಿ ಪಾರಾಗುತ್ತಿದ್ದ ಉಗ್ರನೊಬ್ಬನ ಕಿಸೆಯಿಂದ ಕಾಗದದ ತುಣುಕೊಂದು ಕೆಳಗೆ ಬಿದ್ದು, ಅದರಲ್ಲೊಂದು ಫೋನ್ ನಂಬರ್ ಪತ್ತೆಯಾಗಿ, ಆ ಮೂಲಕ ಪ್ರಧಾನ ಆರೋಪಿ ಮೊಹಮ್ಮದ್ ಆರಿಫ್ ಸಿಕ್ಕಿಬೀಳುತ್ತಾನೆ.

ಸಂಸತ್‌ಭವನ ದಾಳಿ (2001) ಪ್ರಕರಣದಲ್ಲಿ ಹತರಾದ ಉಗ್ರರ ಬಳಿಯೂ ಫೋನ್ ನಂಬರ್‌ಗಳು ದೊರೆತಿವೆ. ಅದರ ಆಧಾರದಲ್ಲಿ ಮೊಹಮ್ಮದ್ ಅಫ್ಜಲ್, ಶೌಕತ್ ಹುಸೇನ್ ಗುರು, ಅಫ್ಶಾನ್ ಗುರು, ಎಸ್‌ಎಆರ್ ಗಿಲಾನಿಯವರನ್ನು ಪತ್ತೆಹಚ್ಚಿ ಬಂಧಿಸಲಾಗುತ್ತದೆ.

ಕಾಶ್ಮೀರದ ವಿಶೇಷ ಕಾರ್ಯಾಚರಣಾ ತಂಡ ಮತ್ತು ದೆಹಲಿ, ಗುಜರಾತಿನ ತನಿಖಾ ಸಂಸ್ಥೆಗಳ ನಡುವಿನ ಅಸ್ಪಷ್ಟ ಕೊಂಡಿಗಳು.

ಇನ್ನೊಂದು ವೈಶಿಷ್ಟ್ಯವೆಂದರೆ ಎಟಿಎಸ್, ವಿಶೇಷ ದಳ, ಕ್ರೈಮ್ ಬ್ರಾಂಚ್‌ನಂತಹ ತನಿಖಾ ಸಂಸ್ಥೆಗಳು ಪ್ರಕರಣಗಳನ್ನು ಭೇದಿಸುವಲ್ಲಿ, ಆರೋಪಿಗಳನ್ನು ಬಂಧಿಸುವಲ್ಲಿ, ಶೀಘ್ರಾತಿಶೀಘ್ರದಲ್ಲಿ ತಪ್ಪೊಪ್ಪಿಗೆ ಹೇಳಿಕೆ ಪಡೆಯುವಲ್ಲಿ ತೋರುವ ಕಾರ್ಯಕ್ಷಮತೆ.

ಆದರೆ ಅಸಲಿ ಕಥೆ ಇರುವುದು ಕೋರ್ಟು
ನ್ಯಾಯಾಂಗದ ಕಚೇರಿಗಳಲ್ಲಿ. ಮೇ 16, 2014
ಅಕ್ಷರಧಾಮ ಪ್ರಕರಣದ 5 ಆರೋಪಿಗ
ಖುಲಾಸೆಗೊಳಿಸಿರುವ ಸುಪ್ರೀಂ ಕೋರ್ಟು ತನ್ನ ಆದೆ
ಹಿಂದಿನ ತೀರ್ಪುಗಳು ಮತ್ತು ಅವುಗಳನ್ನು ತಳ್ಳಿಹ
ನ್ಯಾಯಾಲಯಕ್ಕಿರುವ ಅಧಿಕಾರದ ಬಗ್ಗೆ ಬರೆದಿ
ಸಂದರ್ಭದಲ್ಲಿ "ವಿಕೃತ", "ಅನ್ಯಾಯ", "ವಿಚಾರ
ಸ್ಪಷ್ಟವಿದೆ", "ಮೂಲಭೂತ ಮತ್ತು ಪ್ರಾ
ಮಾನವಹಕ್ಕುಗಳ ಉಲ್ಲಂಘನೆ ಕಣ್ಣಿಗೆ ಕುಕ್ಕುವಂತಿದೆ"
ಪದಗಳನ್ನು ಬಳಸಿದೆ. ಪೋಟಾ ನ್ಯಾಯಾಲಯ
ಹೈಕೋರ್ಟಿನ ಕಲಾಪಗಳ ವೈಖರಿಯಿಂದ
ಕಳವಳಪಟ್ಟ ಸುಪ್ರೀಂ ಕೋರ್ಟು, ಆರೋಪಿ ನಂ
ದೂರು ನೀಡಿರದಿದ್ದರೂ ಆತನನ್ನೂ ಖುಲಾಸೆಗೊ
ನ್ಯಾಯಾಲಯಗಳಲ್ಲಿ ನಡೆದಿರುವುದನ್ನು ನ
ಅಧಿಕಾರವನ್ನು ಚಲಾಯಿಸದಿರುವುದು ಎಂದು ಬಣ್ಣಿ
ತೀರಾ ಸಭ್ಯ ಭಾಷೆಯಾಗುತ್ತದೆ. ಅಲ್ಲಿ ಆಗಿರುವುದು
ಹೊಣೆಗಾರಿಕೆಯ ಪರಿತ್ಯಾಗ.

ಏಕೆಂದರೆ ಅಕ್ಷರಧಾಮ ದಾಳಿಯ ಆರೋಪಿಗಳ
ಅಪರಾಧಗಳ ದೊಡ್ಡ ಪಟ್ಟಿಯೆ ಇದ್ದರೂ,
ವಿಧಿಸಲಾದ ಶಿಕ್ಷೆಗಳು ತೀವ್ರ ಮಟ್ಟದ್ದಾಗಿ
ನ್ಯಾಯಾಲಯಕ್ಕೆ ಹಾಜರುಪಡಿಸಲಾದ ಪುರಾವೆಗಳ
ಎಷ್ಟೊಂದು ಕಡಿಮೆ ಎಂದರೆ ಯಾರಾದರೂ
ಬೇಕು. ಅಲ್ಲೂ ಪ್ರಮುಖ ಪುರಾವೆಗಳೆಂದರೆ
ಆರೋಪಿಗಳಿಂದ ಪೋಟಾ ಕಾಯ್ದೆಯ 32ನೆ
ಪಡೆದುಕೊಳ್ಳಲಾಗಿದ್ದ ತಪ್ಪೊಪ್ಪಿಗೆ ಹೇಳಿಕೆಗಳು.
ಪೋಟಾ ಕಾಯ್ದೆ ಪೊಲೀಸ್ ಅಧಿಕಾರಿಗೆ ನೀಡುವ
ಗೆಗಳನ್ನು ಪುರಾವೆಯಾಗಿ ಸ್ವೀಕರಿಸಲು ಅನುಮ
ಎಂಬುದನ್ನು ಜ್ಞಾಪಕದಲ್ಲಿಡಬೇಕು. ಆದರೂ ತಪ್ಪೊ
ಮುಕ್ತ ಮತ್ತು ಸ್ವಯಂಪ್ರೇರಿತವಾಗಿರುವಂತೆ ನೋ
ಬೇಕೆಂದು ಹೇಳಿರುವ ಸುಪ್ರೀಂ ಕೋರ್ಟು ಅದ
ಹಲವಾರು ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆ.
ತಪ್ಪೊಪ್ಪಿಗೆ ಹೇಳಿಕೆ ನೀಡುವುದು ಕಡ್ಡಾಯವ
ಹೇಳಿಕೆಯನ್ನು ಆತನ ವಿರುದ್ಧವೆ ಬಳಸಲಾಗು
ಲಿಖಿತ ಎಚ್ಚರಿಕೆಯನ್ನು ಆರೋಪಿಗೆ ನೀಡಬೇ
(32.2). ಇಂತಹ ಮಾಹಿತಿಗಳನ್ನು ತಪ್ಪೊಪ್ಪಿಗೆ
ದಾಖಲಿಸುವ ಪ್ರಕ್ರಿಯೆಗೆ ಸಾಕಷ್ಟು ಮುಂ
ನೀಡಬೇಕಾಗಿದೆಯಲ್ಲದೆ ಹೇಳಿಕೆಯನ್ನು
ಮುಂದುವರಿಕೆಯಾಗಿಯೆ ದಾಖಲಿಸಬೇಕಾಗುತ್ತ

ಅಕ್ಷರಧಾಮ ಪ್ರಕರಣದಲ್ಲಿ ಪೊಲೀಸ್ ಉ
ಸಂಜಯ ಗಾಡ್ವಿ ದಾಖಲಿಸಿರುವ ತಪ್ಪೊಪ್ಪಿಗೆ ಹೇ
ಮತ್ತು ಆತ ಆರೋಪಿಗಳಿಗೆ ನೀಡಿರುವು
ಎಚ್ಚರಿಕೆಯ ಪತ್ರಗಳು ಪ್ರತ್ಯೇಕ ಪ್ರತ್ಯೇಕವಾಗಿ
ಮಾತ್ರವಲ್ಲ, ಆರೋಪಿಗಳ ದೇಹದ ಮೇಲೆ ಚಿತ್ರ
ಅಥವಾ ಹಲ್ಲೆಯ ಗುರುತುಗಳಿದ್ದವೇ ಎಂದು ಪ
ಗೋಜಿಗೆ ಹೋಗಿಲ್ಲವೆಂದು ಪಾಟಿಸವಾಲಿ
ಒಪ್ಪಿಕೊಂಡಿದ್ದಾರೆ. ಆರೋಪಿಗಳು ತಪ್ಪೊಪ್ಪಿಗೆ
ನಿರಾಕರಿಸಿದರೆ ಅವರಿಗೇನೂ ಅಪಾಯವಿ
ಭರವಸೆಯನ್ನೂ ನೀಡಿರಲಿಲ್ಲವೆಂದು ತಿಳಿಸಿದ್ದಾ

ಒಂದು ತಿಂಗಳಿಗೂ ಅಧಿಕ ಕಾಲ ಕ್ರೈಮ್
ವಶದಲ್ಲೇ ಇದ್ದ ಆರೋಪಿಗಳಿಗೆ ತಪ್ಪೊಪ್ಪಿಗೆ
ಕುರಿತು ಯೋಚಿಸಲು ಗಾಡ್ವಿ ನೀಡಿದ್ದು
ನಿಮಿಷ. ಈ ಗಾಡ್ವಿ ತನ್ನ ಸಹ ಅಧಿಕಾರಿಗಳ
ನಿಂತದ್ದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿ
ಎಂದಿಟ್ಟುಕೊಳ್ಳೋಣ. ಆದರೆ ಪೋಟಾ ನ್ಯಾಯ
ಮ್ಯಾಜಿಸ್ಟ್ರೇಟರನ್ನು ಕ್ಷಮಿಸುವುದಾದರೂ ಹೇಗೆ?



...ಾ ಕಾಯ್ದೆಯ ವಿಧಿ 32 (4)ರ ಪ್ರಕಾರ ಆರೋಪಿಗಳ ...ಪ್ಪಿಗೆ ನ್ಯಾಯಸಮ್ಮತವಾಗಿದೆಯೇ, ಅದನ್ನು ...ಯಿಂದ ನೀಡಲಾಗಿದೆಯೇ ಎಂಬುದನ್ನು ಖಚಿತಪಡಿಸಿ ...ವುದು ನ್ಯಾಯಾಧೀಶರ ಕರ್ತವ್ಯ.

...ಲ್ಲಿ ಸನ್ಮಾನ್ಯ ಮ್ಯಾಜಿಸ್ಟ್ರೇಟರು ಆರೋಪಿಗಳ ...ಗಕ್ಷೇಮ ವಿಚಾರಿಸಲು, ಅವರ ಹೇಳಿಕೆಗಳನ್ನು ...ಿಸಲು ಮತ್ತು ಅದನ್ನು ಓದಿಹೇಳಿ ಸಹಿ ಹಾಕುವುದಕ್ಕೆ ...ಕೊಂಡ ಸಮಯವನ್ನು ಸಿಂಘಾಲ್ ತಾನು ...ಕೊಂಡಿದ್ದ ಸಮಯದೊಂದಿಗೆ ಹೋಲಿಸಿದರೆ ನಿಜಕ್ಕೂ ...ಗೆ ಕೀಳರಿಮೆ ಉಂಟಾಗಬಹುದು. ಉದಾಹರಣೆಗೆ ...ಪಿ 4ರ ಹೇಳಿಕೆ 15 ಪುಟಗಳಷ್ಟಿದ್ದು ಇಡೀ ...ಯೆಗೆ ತಗಲಿದ ಒಟ್ಟು ಸಮಯ ಬರೀ 30 ...ಷಗಳು. ಮ್ಯಾಜಿಸ್ಟ್ರೇಟರು ಆರೋಪಿಗಳಿಗೆ ನ್ಯಾಯಾಂಗ ...ನ ವಿಧಿಸುವ ಬದಲಾಗಿ ಮರಳಿ ಕ್ರೈಮ್ ಬ್ರಾಂಚ್‌ನ ...ಪ್ಪಿಸಿದ್ದಾರೆ. ಈ ಆದೇಶದಿಂದಂತೂ ಆರೋಪಿ ...ಮುವ ರಕ್ಷಣೋಪಾಯಗಳೆಲ್ಲ ನಿರರ್ಥಕವಾದಂತಾಗಿದೆ. ...ನಡೆದಿರುವ ಘಟನಾವಳಿಗಳನ್ನು ಸ್ವಲ್ಪ ಗಮನಿಸಿ. ... ತಿಂಗಳಿಗೂ ಅಧಿಕ ಕಾಲ ಕ್ರೈಮ್ ಬ್ರಾಂಚಿನ ...ಲ್ಲಿದ್ದ ಆರೋಪಿಯನ್ನು ಹಿರಿಯ ಪೊಲೀಸ್ ಅಧಿಕಾರಿ ...ಮು ಹಾಜರುಪಡಿಸಲಾಗುತ್ತದೆ; ಸದರಿ ಅಧಿಕಾರಿ, ...ಪಿ ಬಲಾತ್ಕಾರಕ್ಕೊಳಗಾಗಿ ತಪ್ಪೊಪ್ಪಿಗೆ ಹೇಳಿಕೆ ...ತ್ತಾನೇ ಎಂದು ಪರೀಕ್ಷಿಸುವ ಗೋಜಿಗೆ ಹೋಗುವುದಿಲ್ಲ ...ವಲ್ಲ ಆತನನ್ನು ಮರಳಿ ಕ್ರೈಮ್ ಬ್ರಾಂಚಿನ ವಶಕ್ಕೆ ...ಕೊಳ್ಳುವುದಿಲ್ಲವೆಂದು ಖಾತರಿಯನ್ನೂ ನೀಡುವುದಿಲ್ಲ, ...ಹಾ ಹೇಳಿಕೆ ದಾಖಲಿಸುತ್ತಾನೆ; ಆರೋಪಿಯನ್ನು ...ದಿನ 48 ಗಂಟೆಗಳೊಳಗಾಗಿ ಮ್ಯಾಜಿಸ್ಟ್ರೇಟರ ಮುಂದೆ ...ಮುಪಡಿಸಿದಾಗ ಅಲ್ಲಿಯೂ ಪೊಲೀಸ್ ಅಧಿಕಾರಿಯಷ್ಟೆ ...ದನಾಶೂನ್ಯತೆ ವ್ಯಕ್ತವಾಗುತ್ತದೆ. ಈಗ ಹೇಳಿ, ಈ ...ಪ್ಪಿಗೆ ಹೇಳಿಕೆ ನ್ಯಾಯಯುತವೇ? ಅದು ಸ್ವಇಚ್ಛೆಯಿಂದ ...ರುವುದೇ? ಅದನ್ನು ಆರೋಪಿಯ ಅಪರಾಧವನ್ನು ...ತು ಪಡಿಸುವಂತಹ ಪುರಾವೆಯೆಂದು ಪರಿಗಣಿಸ ...ದೇ?

...ಪೋಟಾ ಹಾಗೂ ಉಚ್ಚ ನ್ಯಾಯಾಲಯಗಳೆರಡಕ್ಕೂ ... ಬ್ರಾಂಚ್ ತನಗಿರುವ ಅನಿಯಂತ್ರಿತ ಅಧಿಕಾರವನ್ನು ... ಪಡೆದ ತಪ್ಪೊಪ್ಪಿಗೆಗಳನ್ನು ಪುರಾವೆಯಾಗಿ ...ಸಬಹುದೆಂದು ಕಂಡಿದೆ.

...ರಡಕ್ಕೂ ತಪ್ಪೊಪ್ಪಿಗೆಗಳ ದಾಖಲಾತಿ ನ್ಯಾಯವಿಧಾನ ...ಕಾರ ನಡೆದಿರುವುದನ್ನು ಪ್ರಾಸಿಕ್ಯೂಷನ್ ಸಾಬೀತುಪಡಿ ...ಸೆಂದು ಕಂಡಿದೆ.

...ಆರೋಪಿಗಳು ಚಿತ್ರಹಿಂಸೆ ಬಗ್ಗೆ ದೂರದಿದ್ದರೂ ...ಸ್ಟ್ರೇಟರು ಅವರನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸು ... ಕಡ್ಡಾಯವೆಂದು ಪೋಟಾ ಕಾಯ್ದೆಯ ವಿಧಿ 32(5) ...ವುದಿಲ್ಲ ಎಂದು ಎರಡು ನ್ಯಾಯಾಲಯಗಳಿಗೂ... ಆದರೆ ಇದು ಸ್ಥಾಪಿತ ನೀತಿಗಳ ಉಲ್ಲಂಘನೆಯಾಗಿದೆ ...ದನ್ನು ಗಮನಿಸಬೇಕು.

...ರಡು ನ್ಯಾಯಾಲಯಗಳಿಗೂ ಆರೋಪಿಗಳ ...ಯ ದಾಖಲೆಗಳು ನಾಪತ್ತೆಯಾಗಿರುವ ವಿಚಾರದ ... ಲಕ್ಷ್ಯ ಹರಿಸಬೇಕೆಂದು ಕಂಡಿದ್ದರೆ ಚಿತ್ರಹಿಂಸೆಯ ...ವಾಗಿ ಮೂಳೆಮುರಿತವಾಗಿದೆ ಎಂಬ ...ಪಿಗಳ ದೂರನ್ನು ಸಾಬೀತುಪಡಿಸಬಹುದಿತ್ತು.

...ಮ್ಮ ಮೇಲೆ ಭೀಕರ ದೌರ್ಜನ್ಯ ಎಸಗಿದ್ದ ಕಾರಣ ...ಪ್ಪಿಗೆ ನೀಡದೆ ವಿಧಿಯಿರಲಿಲ್ಲ. ಆದರೆ ಅದನ್ನೀಗ ...ಪಡೆಯುತ್ತಿದ್ದೇವೆಂದು ಆರೋಪಿಗಳು ...ಲಯಕ್ಕೆ ತಿಳಿಸಿದ್ದರು. ಆದರೂ ಅದು ಯಾಂತ್ರಿಕವಾಗಿ ...ಸಿದ್ದು ಯಾರೋ ಹೇಳಿಕೊಟ್ಟಿರುವ ಹಾಗಿದೆ ಎಂದು ... ಕೋರ್ಟುಗಳು ಅಭಿಪ್ರಾಯಿಸಿವೆ ಮತ್ತು ಅವರ ...ಳಿಕೆಯನ್ನು ತಳ್ಳಿಹಾಕಿವೆ.


...ರಡೂ ನ್ಯಾಯಾಲಯಗಳು, ಪ್ರಕರಣ ಕ್ರೈಮ್ ...ಗೆ ಹಸ್ತಾಂತರಗೊಂಡ ದಿನದಿಂದ ತನಿಖೆಯ ... ವೇಗದಲ್ಲಿ ದಿಢೀರ್ ಏರಿಕೆಯಾದ ಬಗ್ಗೆ

ತಲೆಕೆಡಿಸಿಕೊಂಡಿಲ್ಲ. ಮಾನ್ಯ ಹೈಕೋರ್ಟು ವೇಗದ ಏರಿಕೆಗೆ ಸದರ ತೋರಿಸುತ್ತ ಅದನ್ನು "ಆವೇಗ ಪಡೆದುಕೊಳ್ಳುವಿಕೆ" ಎಂದು ಕರೆದಿದೆ.

ಸಾಕ್ಷಿ 50ನ್ನು ಪತ್ತೆಹಚ್ಚುವಲ್ಲಿ ವಂಜಾರಾ ವಹಿಸಿದ ಪಾತ್ರ ಇತರ ಆರೋಪಿಗಳ ಬಂಧನಕ್ಕೆ ಹೇತುವಾಗಿತ್ತು. ಆದರೂ ಆತನನ್ನು ಓರ್ವ ಸಾಕ್ಷಿಯಾಗಿ ಮಾಡಿಲ್ಲ. ಪರಿಣಾಮವಾಗಿ ಆರೋಪಿ ಪರ ವಕೀಲರಿಗೆ ಪಾಟಿಸವಾಲು ಹಾಕುವ ಅವಕಾಶ ತಪ್ಪಿದೆ. ಆದರೆ ನ್ಯಾಯಾಲಯಗಳೆರಡಕ್ಕೂ ಈ ಹಕ್ಕುಚ್ಯುತಿಯ ಬಗ್ಗೆ ಆತಂಕವಾಗಿಲ್ಲ.

ಗೃಹಸಚಿವಾಲಯ ವಾಸ್ತವಾಂಶಗಳನ್ನು ಪರಿಗಣಿಸದೆ, ಆ ಕುರಿತು ಯೋಚಿಸದೆ ಪೋಟಾ ಕಾಯ್ದೆ ಅನ್ವಯಿಸುವುದಕ್ಕೆ ಅತ್ಯಂತ ಶೀಘ್ರವಾಗಿ ಅನುಮತಿ ನೀಡಿರುವುದನ್ನು ಎರಡೂ ಎರಡೂ ಕೋರ್ಟುಗಳು ಗಮನಿಸಿಲ್ಲ.

ಆರೋಪಿಗಳು ಮತ್ತು ಅಪರಾಧದ ಮಧ್ಯೆ ತಪ್ಪೊಪ್ಪಿಗೆಯ ಏಕೈಕ ಅದೂ ಅನುಮಾನಾಸ್ಪದವಾದ ಕೊಂಡಿಯೊಂದನ್ನು ಹೊರತುಪಡಿಸಿ ಇನ್ನಾವುದೇ ಪುರಾವೆಯ ತುಣುಕು ಕೂಡ ಇಲ್ಲದಿರುವುದು ಎರಡೂ ನ್ಯಾಯಾಲಯಗಳನ್ನು ಬಾಧಿಸಿಲ್ಲ. ಹ್ಞಾಂ, ಅಂದ ಹಾಗೆ ಉಗ್ರರ ಮೃತಶರೀರಗಳಿಂದ ಪಡೆದಂಥಾ ಒಂದಿಷ್ಟೂ ಮಲಿನಗೊಳ್ಳದ ಎರಡು ಪತ್ರಗಳಿದ್ದವಲ್ಲ, ತಮಾಷೆ ಏನೆಂದರೆ ಆ ಪತ್ರಗಳನ್ನು ಆರೋಪಿ 4 ಬರೆದಿರುವುದಾಗಿ ಸಾಕ್ಷ್ಯ ನುಡಿದ ಬರಹತಜ್ಞನಿಗೆ ಉರ್ದು ಓದಲೂ ತಿಳಿಯದು, ಬರೆಯಲೂ ತಿಳಿಯದು. ಮಾತ್ರವಲ್ಲ ಆತ ಉರ್ದು, ಪರ್ಷಿಯನ್, ಅರಬ್ಬಿ ಭಾಷೆಗಳನ್ನು ಒಂದು ಇನ್ನೊಂದರಿಂದ ಗುರುತಿಸಲೂ ಅಸಮರ್ಥನಾಗಿದ್ದ. ಆದರೆ ಎರಡೂ ನ್ಯಾಯಾಲಯಗಳಿಗೆ ಇದೆಲ್ಲ ತೀರಾ ಕ್ಷುಲ್ಲಕ ವಿಚಾರವೆಂದು ಅನಿಸಿದೆ.



ಹವಾಲಾ ವ್ಯವಹಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಒದಗಿಸಲಾದ ಒಂದೇ ಒಂದು ಪುರಾವೆಯೆಂದರೆ ಒಂದು ದಿನಚರಿ. ಅದರಲ್ಲಿ 'ಜಿಹಾದ್' ಎಂಬ ಗುಪ್ತನಾಮದಡಿ ನಗದು ಹಣ ಕುರಿತ ದಾಖಲೆಗಳಿದ್ದವು. ಒಂದಿಷ್ಟು ವ್ಯಂಗ್ಯದ ಕುರುಹೂ ಇಲ್ಲದೆ ಇದನ್ನೇ ಪುರಾವೆಯೆಂದು ಸ್ವೀಕರಿಸಲಾಗಿದೆ.

ಶ್ರೀನಗರದಲ್ಲಿ ವಿಶೇಷ ಕಾರ್ಯಾಚರಣಾ ಪಡೆಯ ಕಾಂಪೌಂಡ್ ಒಳಗಿಂದ ಮುಟ್ಟುಗೋಲು ಹಾಕಿಕೊಂಡ ಅಂಬಾಸಡರ್ ಕಾರು ಆರೋಪಿ 6ಗೆ ಸೇರಿದ್ದು ಅಥವಾ ಆತನಿಂದ ವಶಪಡಿಸಿಕೊಂಡದ್ದು ಎಂದು ಸಾಬೀತುಪಡಿಸುವಂಥಾ ಯಾವುದೇ ದಾಖಲೆಪತ್ರಗಳು ಇರಲಿಲ್ಲ.

ಹೀಗಾಗಿ ಇಡೀ ಪ್ರಕರಣದಲ್ಲಿ ಕೊನೆಗೆ ಉಳಿಯುವುದೇನು? ಒಂದಕ್ಕೊಂದು ವಿರುದ್ಧವಾದ ತಪ್ಪೊಪ್ಪಿಗೆಗಳು ಮಾತ್ರ. ಮರಣದಂಡನೆ ವಿಧಿಸಲು ಇಷ್ಟೆ ಸಾಕೆಂದು ಎರಡೂ ಕೋರ್ಟುಗಳು ತೀರ್ಮಾನಿಸಿವೆ.

ಮೇಲಿನ ಅಂಶಗಳನ್ನೆಲ್ಲ ಪರಿಗಣಿಸಿದಾಗ ಒಂದು ವಿಷಯವಂತೂ ಸ್ಫುಟವಾಗಿ ಎದ್ದುತೋರುತ್ತದೆ: ಇಡೀ ಪ್ರಕರಣಕ್ಕೆ ಬಲ ತಂದುಕೊಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿರುವುದೆ ಪೋಟಾ ಕಾಯ್ದೆ.

ನಾಗರಿಕ ಹಕ್ಕು ಸಂಘಟನೆ ಪಿಯುಸಿಎಲ್ ಈ ಹಿಂದೆ ಸುಪ್ರೀಂಕೋರ್ಟಿನ ಮುಂದೆ ವಾದಿಸಿದ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳಿಗೆ ತಪ್ಪೊಪ್ಪಿಗೆ ದಾಖಲಿಸುವ ಅಧಿಕಾರ ನೀಡಿರುವುದು ಸರಿಯಲ್ಲ; ಒಮ್ಮೆ ಅಂತಹ ತಪ್ಪೊಪ್ಪಿಗೆಗಳನ್ನು ಪಡೆದರೆಂದರೆ ನಂತರ ಅವುಗಳನ್ನು ಮ್ಯಾಜಿಸ್ಟ್ರೇಟರ ಯಾಂತ್ರಿಕ ಅನುಮೋದನೆ ಪಡೆಯಲು ಬಳಸಲಾಗುವುದೆಂದು ಎಚ್ಚರಿಸಿತ್ತು. ಅಕ್ಷರಧಾಮ ಪ್ರಕರಣದ ಕೋರ್ಟು ಕಲಾಪದ ದಾಖಲೆಗಳು ನಾಗರಿಕ ಹಕ್ಕು ಕಾರ್ಯಕರ್ತರ ಭಯ ಸಕಾರಣವೆಂಬುದನ್ನು ದೃಢಪಡಿಸುತ್ತವೆ. ಅಲ್ಲಿ ರಕ್ಷಣೋಪಾಯಗಳನ್ನು ಬರೀ ನಿರ್ಜೀವ ಸಂಪ್ರದಾಯವಾಗಿಸಿರುವುದು ಸ್ಪಷ್ಟವಿದೆ. ಅವುಗಳನ್ನು ನ್ಯಾಯಸಮ್ಮತ ಪರಿಶೀಲನೆಗೆ ಹೆಚ್ಚುಕಮ್ಮಿ ಒಡ್ಡಿಯೆ ಇಲ್ಲ.

ಅಕ್ಷರಧಾಮ ಪ್ರಕರಣಕ್ಕೂ ಸಂಸತ್ ಭವನ ಪ್ರಕರಣಕ್ಕೂ ಹಲವಾರು ಹೋಲಿಕೆಗಳಿವೆ. ಉದಾಹರಣೆಗೆ ತನಿಖೆಯ ವಿಧಾನ, ದುರ್ಬಲ ಪುರಾವೆಗಳು, ರಕ್ಷಣೋಪಾಯಗಳ ತೀವ್ರ ಉಲ್ಲಂಘನೆ ಮತ್ತು ನ್ಯಾಯಾಲಯದಲ್ಲಿ ಇವೆಲ್ಲವನ್ನು ಸಮರ್ಥಿಸುವ ವಾದಗಳು.


ಸಂಸತ್ ಭವನ ಪ್ರಕರಣದಲ್ಲಿ ಅಂತಿಮವಾಗಿ ಆದುದೇನು? ಹಕ್ಕುಬಾಧ್ಯತೆಗಳಿಗೆ ಸಂಬಂಧಿಸಿದ ನ್ಯಾಯವಿಧಾನಗಳಿಗಿಂತಲೂ ಸಮಷ್ಟಿ ಪ್ರಜ್ಞೆಯೆ ಹೆಚ್ಚು ತೂಕ ಪಡೆದುಕೊಂಡಿತು. ಅಕ್ಷರಧಾಮ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ಈ ಬಾರಿ ಸುಪ್ರೀಂ ಕೋರ್ಟು ಅಫ್ಜಲ್ ಗುರುವಿಗಾದ ಗತಿ ಆದಂ ಅಜ್ಮೇರಿಗೂ ಆಗದಂತೆ ನೋಡಿಕೊಂಡಿದೆ. ಆದರೆ ತನ್ನ ಜೀವನದ 11 ವರ್ಷಗಳನ್ನು ಕಳೆದುಕೊಂಡವನಿಗೆ ಅದರಿಂದ ಏನು ಸಮಾಧಾನ ಸಿಗಬಲ್ಲುದು?

ಸುಪ್ರೀಂಕೋರ್ಟು ಅಕ್ಷರಧಾಮ ಪ್ರಕರಣದ ತೀರ್ಪು ಬರೆಯುವಾಗ ಪೋಟಾ ಕಾಯ್ದೆಯ ಹೊಲಸು ಚರಿತ್ರೆಯನ್ನು ಮನಸ್ಸಿನಲ್ಲಿಟ್ಟುಕೊಂಡೆ ಹೀಗೆ ಬರೆದಿದೆ:

"ಪೋಟಾ ಕಾಯ್ದೆಯನ್ನು 2004ರಲ್ಲಿ ಹಿಂದೆಗೆದುಕೊಳ್ಳಲಾಯಿತು. ಆದರೆ ಅದು ಊರ್ಜಿತವಿದ್ದಾಗಿನ ವಿಚಾರಣೆಗಳು ಇಂದಿಗೂ ನಡೆಯುತ್ತಿವೆ. ಪೊಲೀಸರು ತಮ್ಮ ಅಧಿಕಾರವನ್ನು ವಿಪರೀತ ದುರುಪಯೋಗಪಡಿಸಿ ಆರೋಪಿಗಳ ಮಾನವಹಕ್ಕುಗಳನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಪೋಟಾ ಕಾಯ್ದೆಯನ್ನು ರದ್ದುಗೊಳಿಸಲಾಯಿತು.

ಪ್ರಸಕ್ತ ಪ್ರಕರಣವನ್ನು ತೀರ್ಮಾನಿಸುವಾಗ ಈ ಮಹತ್ವದ ಅಂಶವನ್ನು ನೆನಪಿನಲ್ಲಿಡಬೇಕಾಗುತ್ತದೆ. ಆದುದರಿಂದಲೆ ಈ ಕಾಯ್ದೆಯ ನಿಯಮಗಳಿಂದ ಆಗಬಹುದಾದ ದುರ್ಬಳಕೆಯ ಬಗ್ಗೆ ನಮಗೆ ಭಯವಿದೆ ಎಂದು ಆರಂಭದಲ್ಲಿ ಹೇಳಿರುವುದು ಪ್ರಸ್ತುತವಾಗಿದೆ."

ಹಿಂದಿನ ಎನ್‌ಡಿಎ ಸರ್ಕಾರ ಅಧಿಕಾರದಿಂದ ಕೆಳಗಿಳಿದ ಬಳಿಕ ಪೋಟಾ ಕಾಯ್ದೆಯನ್ನು ರದ್ದುಗೊಳಿಸಲಾಯಿತು. ಅದರ ಬದಲಿಗೆ ಹಳೆಯ ಯುಎಪಿಎ (ಅಕ್ರಮ ಚಟುವಟಿಕೆಗಳ ನಿಯಂತ್ರಣ ಕಾಯ್ದೆ) ಅನ್ನೆ ಇನ್ನಷ್ಟು ಗಟ್ಟಿಗೊಳಿಸಿ ಮರಳಿ ಜಾರಿಗೆ ತರಲಾಯಿತು. ಯುಎಪಿಎ ಪ್ರಕಾರ ತಪ್ಪೊಪ್ಪಿಗೆ ಹೇಳಿಕೆಗಳನ್ನು ಪುರಾವೆಯಾಗಿ ಪರಿಗಣಿಸುವಂತಿಲ್ಲ. ಆದರೇನು, 'ಭಯೋತ್ಪಾದನೆ' ಎಂದು ಪಿಸುಗುಟ್ಟಿದರೂ ಸಾಕು, ಅದ್ಭುತಗಳು ನಡೆಯುತ್ತವೆ. ಕೆಂಪುಕೋಟೆ ಪ್ರಕರಣದಲ್ಲಿ ಅಶ್ಫಕ್ ತಪ್ಪಿತಸ್ಥನೆಂದು ತೀರ್ಮಾನಿಸಿದ ಕೋರ್ಟು "ತನಿಖೆಯ ಸಮಯದಲ್ಲಿ ಪೊಲೀಸ್ ಅಧಿಕಾರಿಗಳಿಂದ ಒಂದಿಷ್ಟು ಚಿತ್ರಹಿಂಸೆ ಅಥವಾ ಅಕ್ರಮಗಳು ನಡೆದರೂ ಅದರಿಂದಾಗಿ ಪುರಾವೆಗಳು ಅಸ್ವೀಕಾರಾರ್ಹ ಎಂದಾಗುವುದಿಲ್ಲ" ಎಂದಿತ್ತು (ನೋಡಿ: **'An Unfair Verdict: A Report on the Red Fort Attack by the People's Union for Democratic Rights'**).



ವಂಜಾರಾ

ಯುಎಪಿಎ ಅಡಿಯಲ್ಲಿ ಭಯೋತ್ಪಾದನೆ ಪ್ರಕರಣಗಳ ವಿಚಾರಣೆ ಅನುಮೋದನೆ ಇಲ್ಲದೆಯೂ ನಡೆಯುತ್ತದೆ. ಅದೂ ವರ್ಷಗಟ್ಟಲೆ. ಗೃಹಸಚಿವಾಲಯದಿಂದ ಅನುಮೋದನೆಯ ಆದೇಶ ದೊರೆತಾಗಲೂ ಅದರಲ್ಲಿರುವ ಸಹಿ ತನ್ನ ಮೇಲಧಿಕಾರಿಯದ್ದೆಂದು ರುಜುವಾತುಪಡಿಸುವಾತ ಹೆಚ್ಚಾಗಿ ಒಬ್ಬ ಗುಮಾಸ್ತ.

2008ರ ಮುಂಬೈ ದಾಳಿಯ ಬಳಿಕ ಯುಎಪಿಎಗೆ ತಿದ್ದುಪಡಿ ತರಲಾಯಿತು. ಆ ಸಂದರ್ಭದಲ್ಲಿ ತಪ್ಪೊಪ್ಪಿಗೆಗಳು ಅಸ್ವೀಕಾರಾರ್ಹವೆಂದು ಮಾಡಿದುದಕ್ಕೆ ಅಡ್ವಾನಿಗೆ ಭಾರಿ ಬೇಸರವಾಗಿತ್ತು.

ಅದೇ ಅಡ್ವಾನಿಯ ಮಾಜಿ ಶಿಷ್ಯ ತನ್ನ ರಾಜಕೀಯ ಸಮರತಂತ್ರದಲ್ಲಿ ಗೋಧ್ರಾ, ಅಕ್ಷರಧಾಮ, ಹರೇನ್ ಪಾಂಡ್ಯ ಕೊಲೆ, ಅಸಂಖ್ಯಾತ ಪೋಟಾ ಪ್ರಕರಣಗಳು ಹಾಗೂ ಎನ್ಕೌಂಟರ್ ಹತ್ಯೆಗಳನ್ನು ಸಂಪನ್ಮೂಲವಾಗಿ ಬಳಸಿಕೊಂಡು ಭಯೋತ್ಪಾದನೆ ಕುರಿತು ಅಬ್ಬರದ, ಚಿತ್ತಾಕರ್ಷಕ ಭಾಷಣಗಳನ್ನು ಬಿಗಿಯುವ ಮೂಲಕ ಸ್ವಲ್ಪ ಮಟ್ಟಿಗಾದರೂ ತನ್ನ ಆರಂಭಿಕ ರಾಜಕೀಯ ವೃತ್ತಿಜೀವನವನ್ನು ಕಟ್ಟಿದ ಬಳಿಕ ಇವತ್ತು ಹೊಸಾ ಭಯೋತ್ಪಾದನಾ ವಿರೋಧಿ ಆಡಳಿತಕ್ಕೆ ತಯಾರಿ ನಡೆಸುತ್ತಿದ್ದಾನೆ.


ಇದೀಗ ಅದರ ಉದ್ಘಾಟನೆಗೊ ಎಂಬಂತೆ ಇಶ್ರತ್ ಜಹಾನ್ ಎನ್ಕೌಂಟರ್‌ನ ನೇತೃತ್ವ ವಹಿಸಿದ್ದಕ್ಕೋಸ್ಕರ 2013ರಲ್ಲಿ ಸಿಬಿಐ ಬಂಧನಕ್ಕೊಳಗಾದವನೂ ಅಕ್ಷರಧಾಮ ಪ್ರಕರಣದ ಮುಂದಾಳತ್ವ ವಹಿಸಿದವನೂ ಆದ ಜಿ.ಎಲ್. ಸಿಂಘಾಲ್‌ನನ್ನು ಗುಜರಾತ್ ಸರ್ಕಾರ ಮತ್ತೆ ಹಿಂದಿನ ಹುದ್ದೆಯಲ್ಲಿ ತಂದು ಕೂರಿಸಿದೆ.



(ಕೃಪೆ:<http://www.hardnewsmedia. com/2014/06/6328?page= show>)

■ ಮನೀಷಾ ಸೇಠಿ

ಕನ್ನಡಕ್ಕೆ: ಸುರೇಶ್ ಭಟ್ ಬಾಕ್ರಬೈಲ್



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಹುಲಿಗಳ ಸ್ವರ್ಗ ಕರಡಿಬೆಟ್ಟ



ಈ ಕರಡಿಬೆಟ್ಟ ಮೀಸಲು ಅರಣ್ಯದಲ್ಲಿ ತೇಗ ಮತ್ತಿತರ ಮಿಶ್ರ ಜಾತಿಯ ಮರಗಳಿದ್ದವು. ಮೈಸೂರು ಮಹಾರಾಜರ ಆಜ್ಞೆಯಂತೆ ಈ ಕಾಡನ್ನು ಹುಲಿಗಳಿಗಾಗಿ ಮೀಸಲಿಟ್ಟು, ಇಲ್ಲಿ ಬೇಟೆಯಾಡುವುದನ್ನು ನಿಷೇಧಿಸಲಾಗಿತ್ತು. ಕಾಡು ಮತ್ತು ವನ್ಯಮೃಗಗಳ ಬಗೆಗೆ ಬಹಳ ಪ್ರಜ್ಞಾವಂತರಾಗಿದ್ದ ಮೈಸೂರಿನ ಅರಸರು ರಾಜ್ಯದ ಬೇರೆಬೇರೆ ಕಡೆ ಮೀಸಲು ಅರಣ್ಯಗಳನ್ನು ಗುರುತಿಸಿ ಅಲ್ಲಿ ಬೇಟೆಯಾಡುವುದಕ್ಕೆ ಅವಕಾಶ ನೀಡಿರಲಿಲ್ಲ. ಇದು ಅನುಕರಣೀಯವಾದ ಕ್ರಮವಾಗಿತ್ತು.

ಕರಡಿಬೆಟ್ಟ ಕಾಡುಪ್ರಾಣಿಗಳನ್ನು ತಿಂದು ಬದುಕುವ ಹುಲಿಗಳಿರುವ ಸ್ಥಳವಾಗಿತ್ತು. ಈ ನರಭಕ್ಷಕ ಅಲ್ಲಿ ಆಶ್ರಯ ಪಡೆದಿದ್ದು ನನಗೆ ವಿಚಿತ್ರವಾಗಿ ಕಂಡಿತು. ನಾನೇ ಖುದ್ದಾಗಿ ಹೋಗಿ ನೋಡಬೇಕೆಂದು ನಿರ್ಧರಿಸಿ, ಹತ್ತು ದಿನಗಳು ಇರಲು ಯೋಜನೆ ಹಾಕಿಕೊಂಡು ಮರುದಿನವೇ ಹೊರಟೆ. ಮಾರ್ಗದಲ್ಲಿ ಶಿವಮೊಗ್ಗದ ಜಿಲ್ಲಾ ಅರಣ್ಯಾಧಿಕಾರಿಯನ್ನು ಭೇಟಿಯಾದೆ. ಅವನು ತನ್ನ ಕೆಳಗಿನ ಅಧಿಕಾರಿಗಳಿಗೆ ನನಗೆ ಎಲ್ಲಾ ಸಹಕಾರ ನೀಡಲು ಆದೇಶಿಸುವ ಪತ್ರಗಳನ್ನು ನೀಡಿ ಸಹಕರಿಸಿದ. ನಾನು ಕುಂಸಿಗೆ ಹೋಗಿ ಅಲ್ಲಿನ ಅಧಿಕಾರಿಯೊಂದಿಗೆ ಚೋರಡಿಗೆ ಬಂದೆ. ಚೋರಡಿಯಲ್ಲಿದ್ದ ಇನ್ನೊಬ್ಬ ಅರಣ್ಯಾಧಿಕಾರಿ ನನಗೆ ಎಲ್ಲಾ ಸಹಕಾರದ ಆಶ್ವಾಸನೆ ನೀಡಿದ. ಅವನು ಕರೆಸಿದ ಕೂಲಿಯಾಳುಗಳಿಂದ ನಾನು ಕೆಳಗಿನ ವಿಷಯ ಸಂಗ್ರಹಿಸಿದೆ.

ಎರಡು ದಿನಗಳ ಹಿಂದೆ ಮರಕಡಿಯಲು ಗುತ್ತಿಗೆದಾರನಿಂದ ನೇಮಕಗೊಂಡಿದ್ದ ಕೂಲಿಯಾಳುಗಳು ಚೋರಡಿಯಿಂದ ಬೆಳಗ್ಗೆ ಹೊರಟಿದ್ದರು. ಕರಡಿಬೆಟ್ಟ ಅರಣ್ಯ ಪ್ರದೇಶದ ಹತ್ತಿರಬಂದಾಗ ಕೂಲಿಗಾರರಲ್ಲೊಬ್ಬನ ಮಗ ತಂದೆಯ ಬಳಿ ವೀಳ್ಯದ ಎಲೆ ಮತ್ತು ಅಡಿಕೆಯನ್ನು (ಮಲೆನಾಡಿನಲ್ಲಿ ಇದಕ್ಕೆ ಕವಳ ಎನ್ನುತ್ತಾರೆ) ಕೇಳಿದನು. ತನ್ನ ಸೊಂಟದಲ್ಲಿದ್ದ ಚೀಲದಿಂದ ಅದನ್ನು ತೆಗೆದು ಮಗನಿಗೆ ಕೊಡಲು ಕೈ ಮುಂದೆ ಮಾಡುವಷ್ಟರಲ್ಲಿ ಹುಲಿಯೊಂದು ನುಗ್ಗಿ ಮಗನನ್ನು ಬೀಳಿಸಿ ಅವನ ಮೇಲೆ ಆಕ್ರಮಣ ಮಾಡಿತ್ತು. ಆಗ ವೃದ್ಧ ತಂದೆ ಕಿಂಚಿತ್ತೂ ಹಿಂಜರಿಯದೆ ತನ್ನ ಬಲಿದಾನಕ್ಕೆ ಮುಂದಾದ. ಕೈಯನ್ನು ಎತ್ತಿ ಹಿಡಿದು ಕೂಗಾಡುತ್ತಾ ಹುಲಿಯನ್ನು ಹೆದರಿಸಲು ಮುಂದೆ ನುಗ್ಗಿದ. ಹುಲಿ ಕೂಡಲೆ ಆ ಬಾಲಕನನ್ನು ಬಿಟ್ಟು ಅವನ ತಂದೆಯ ಮೇಲೆ ಆಕ್ರಮಣ ಮಾಡಿ ಅವನ ಕುತ್ತಿಗೆ, ಮುಖವನ್ನೆಲ್ಲಾ ಬಲವಾಗಿ ಕಚ್ಚಿತು. ಅವನ ದೇಹದಿಂದ ರಕ್ತ ಧಾರಾಕಾರವಾಗಿ ಚಿಮ್ಮತೊಡಗಿತು. ನಂತರ ಕಂಗಾಲಾಗಿ ಇದನ್ನೆಲ್ಲಾ ನೋಡುತ್ತಿದ್ದ ಬಾಲಕನ ಮೇಲೆ ಹುಲಿ ಮತ್ತೆ ಆಕ್ರಮಣ ಮಾಡಿತು.

ಇದನ್ನೆಲ್ಲಾ ಸ್ವಲ್ಪ ದೂರದಿಂದ ನೋಡುತ್ತಿದ್ದ ಇತರ ಕೂಲಿಕಾರರು ಹಿಂತಿರುಗಿ ನೋಡುವ ಧೈರ್ಯವಿಲ್ಲದೆ ತುಪ್ಪೂರಿನ ಕಡೆ ಓಟಕಿತ್ತರು. ತುಪ್ಪೂರಿನಿಂದ ಇನ್ನೂ ಕೆಲವು ಜನರನ್ನು ಸೇರಿಸಿಕೊಂಡು, ಪೊಲೀಸರಿಗೆ ದೂರ ನೀಡಲು ಆನಂದಪುರಂನ ಕಡೆಗೆ ಹೊರಟರು.


ದಾರಿಯಲ್ಲಿ ಸಿಕ್ಕ ಲಾರಿಯವನೊಬ್ಬನ ಬಳಿ ಹುಲಿಯ ಆಕ್ರಮಣದ ಕತೆಯನ್ನು ಹೇಳಿ ತಮ್ಮನ್ನು ಬೇಗ ಆನಂದಪುರಂಗೆ ಕರೆದುಕೊಂಡು ಹೋಗಲು ಕೇಳಿಕೊಂಡರು. ಇವರು ಹೇಳುತ್ತಿದ್ದುದು ಕಟ್ಟುಕತೆ ಎಂದುಕೊಂಡ ಲಾರಿಯ ಚಾಲಕ, ತಾನೇ ಲಾರಿಯನ್ನು ಹುಲಿಯ ಮೇಲೆ ಓಡಿಸಿ ಅದನ್ನು ಕೊಲ್ಲುತ್ತೇನೆಂದು ಬೊಗಳೆ ಮಾತುಗಳನ್ನಾಡಿ, ಅವರನ್ನೆಲ್ಲಾ ಹುಲಿ ಆಕ್ರಮಣ ಮಾಡಿದ ಜಾಗಕ್ಕೆ ಕರೆದುಕೊಂಡು ಹೋದ. ಆದರೆ ಅಲ್ಲಿನ ಪರಿಸ್ಥಿತಿಯನ್ನು ನೋಡಿ ಅವನೂ ಕಂಗಾಲಾಗಿಬಿಟ್ಟ. ವೃದ್ಧ ತಂದೆ ರಕ್ತದ ಮಡುವಿನಲ್ಲಿ ಸತ್ತಂತೆ ಬಿದ್ದುಕೊಂಡಿದ್ದರೆ ಆ ಬಾಲಕನ ಸುಳಿವು ಎಲ್ಲೂ ಇರಲಿಲ್ಲ.

ಆ ವೃದ್ಧನ ದೇಹವನ್ನು ಲಾರಿಯೊಳಗೆ ಹಾಕಿಕೊಂಡು ಎಲ್ಲರೂ ಚೋರಡಿಗೆ ಹೊರಟರು. ಅಲ್ಲಿನ ಅರಣ್ಯಾಧಿಕಾರಿಯನ್ನು ಮತ್ತು ಮಾರ್ಗ ಮಧ್ಯದಲ್ಲಿದ್ದ ಕುಂಸಿಯ ಪೊಲೀಸ್ ಹಾಗೂ ಅರಣ್ಯಾಧಿಕಾರಿಯನ್ನು ಕರೆದುಕೊಂಡು ಲಾರಿ ಶಿವಮೊಗ್ಗಕ್ಕೆ ದೌಡಾಯಿಸಿತು. ಅಲ್ಲಿ ಕಾನೂನಿನ ಅಗತ್ಯಗಳನ್ನು ಪೂರೈಸಿ ಮರಣೋತ್ತರ ಪರೀಕ್ಷೆಯ ನಂತರ ವೃದ್ಧನ ಶವವನ್ನು ಸಂಬಂಧಿಕರಿಗೆ ಕೊಡಲಾಯಿತು...

ಮರುದಿನ ಪೊಲೀಸ್ ತಂಡವೊಂದು ಬಾಲಕನ ಶವವನ್ನು ಹುಡುಕಲು ಬಂದಿತು. ಅವರು ಹಿಂಬಾಲಿಸಿಕೊಂಡು ಹೊರಟ ರಕ್ತದ ಜಾಡು ಕರಡಿಬೆಟ್ಟ ಮೀಸಲು ಅರಣ್ಯದವರೆಗೂ ಹೋಯಿತು. ಅಲ್ಲಿಂದ ಜಾಡನ್ನು ಹಿಡಿದು ಮುಂದೆ ಹೋಗುವ ಕುಶಲತೆ ಆ ತಂಡದ ಯಾರಿಗೂ ಇಲ್ಲದ ಕಾರಣ, ಹುಡುಕಾಟವನ್ನು ನಿಲ್ಲಿಸಿ ಬಾಲಕ ದೊರಕಲಿಲ್ಲ ಎಂದು ವರದಿ ಮಾಡಲಾಯಿತು.

ಸಂಪೂರ್ಣ ಕತೆಯನ್ನು ಕೇಳಿದ ನಾನು ಅರಣ್ಯಾಧಿಕಾರಿ ಮತ್ತು ಆ ಕೂಲಿಗಳೊಂದಿಗೆ ಆಕ್ರಮಣದ ಸ್ಥಳವನ್ನು ನೋಡಲು ಹೊರಟೆ. ಈ ದಾರಿಯಲ್ಲಿ ನಾನು ಸಾಕಷ್ಟು ಬಾರಿ ಓಡಾಡಿದ್ದೆ. ಹಿಂದೆ ಗೌಜ ಎಂಬ ಹಳ್ಳಿಯಿಂದ ಕರಡಿಬೆಟ್ಟದ ಕಡೆಗೆ ಹೊರಟಿದ್ದ ಗಾಯಗೊಂಡ ಹುಲಿಯೊಂದನ್ನು ಮೀಸಲು ಅರಣ್ಯಕ್ಕೆ ಹೋಗುವ ಮೊದಲೇ ನಾನು ಬೇಟೆಯಾಡಿದ್ದೆ. ಇದರ ಕಥೆಯನ್ನು ಬೇರೆ ಕಡೆ ಹೇಳಿದ್ದೇನೆ.

ಹುಲಿ ಆಕ್ರಮಣ ಮಾಡಿದ ರಸ್ತೆಯಲ್ಲಿ ಸಾಕಷ್ಟು ವಾಹನ ಸಂಚಾರವಿದ್ದುದರಿಂದ ರಕ್ತದ ಗುರುತುಗಳು ಆಗಲೇ ಮಾಸಿಹೋಗಿದ್ದವು. ಈ ಸ್ಥಳದಿಂದ ಸ್ವಲ್ಪ ದೂರದಲ್ಲಿ ತೇಗದ ಮರದ ನೆಡುತೋಪು ಇತ್ತು. ಸುಮಾರು ಎರಡು ಫರ್ಲಾಂಗ್ ದೂರದವರೆಗಿನ ಈ ತೋಪು ಮೀಸಲು ಅರಣ್ಯದ ದಟ್ಟವಾದ ಕಾಡಿನಲ್ಲಿ ಕೊನೆಗೊಳ್ಳುತ್ತಿತ್ತು. ಅಲ್ಲಿನ ನೆಲ ತೇಗದ ಎಲೆಗಳಿಂದ ಮುಚ್ಚಿ ಹೋಗಿರುತ್ತಿದ್ದುದರಿಂದ ರಕ್ತದ ಜಾಡನ್ನು ಹುಡುಕುವುದು ಸಾಧ್ಯವಿರಲಿಲ್ಲ.




ಬಹುಶಃ ಹೆಚ್ಚಿನ ರಕ್ತಸ್ರಾವ ಆಗಿರದೇ ಇರಬಹುದು. ಹಾಗಾಗಿ ರಕ್ತದ ಜಾಡನ್ನು ಹುಡುಕುವುದು ನಿಷ್ಪ್ರಯೋಜಕವೆಂದು ನಾವು ಹಿಂತಿರುಗಿದೆವು.

ಹುಲಿಗಾಗಿ ಬಲೆ

ಈ ಕಾಡಿನ ಪೂರ್ಣ ಪರಿಚಯವಿದ್ದ ನಾನು ಇದರ ಮಧ್ಯೆ ಮತ್ತು ನಾಲ್ಕು ದಿಕ್ಕುಗಳಲ್ಲಿ ಜೀವಂತ ಬಲಿಗಳನ್ನು ಕಟ್ಟುವುದು ಉತ್ತಮ ಉಪಾಯವೆಂದು ನಿರ್ಧರಿಸಿದೆ. ಇಲ್ಲಿನ ಸ್ಥಳೀಯ ಜನರು ಹೀಗೆ ಸಾಕುಪ್ರಾಣಿಗಳನ್ನು ಬಲಿ ಕೊಡಲು ಒಪ್ಪುತ್ತಿರಲಿಲ್ಲ. ಹಾಗಾಗಿ ಬಲಿಗಾಗಿ ಸಾಕುಪ್ರಾಣಿಗಳನ್ನು ಮಾರುತ್ತಿರಲಿಲ್ಲ. ಆದರೆ ಅರಣ್ಯಾಧಿಕಾರಿ ಮರುದಿನ ಬೆಳಗ್ಗೆ ಒಳಗಾಗಿ ತಾನು ಪ್ರಾಣಿಗಳ ವ್ಯವಸ್ಥೆ ಮಾಡುವುದಾಗಿ ಹೇಳಿದ. ಪ್ರಾಣಿಗಳನ್ನು ಕಾಡಿಗೆ ತರುವ ಮುನ್ನ ನನಗೆ ತೋರಿಸಬೇಕೆಂದು ಕೇಳಿಕೊಂಡೆ. ಏಕೆಂದರೆ ಇಲ್ಲಿನ ಜನ ಮುದಿಯಾದ ಮತ್ತು ರೋಗಿಷ್ಟ ಸಾಕುಪ್ರಾಣಿಗಳನ್ನು ನಮ್ಮಂತವರಿಗೆ ಮಾರಿ ಕೈತೊಳೆದುಕೊಳ್ಳುತ್ತಿದ್ದರು. ಆದರೆ ಹುಲಿಗಳು ಇಂತಹ ಪ್ರಾಣಿಗಳ ಕಳಪೆ ಮಾಂಸ ಮತ್ತು ಮೂಳೆಗಳಿಂದ ತೃಪ್ತರಾಗುತ್ತಿರಲಿಲ್ಲ. ಹುಲಿ ಎಂದಿದ್ದರೂ ಹುಲಿಯೇ ಸರಿ, ನರಿಯಲ್ಲ!

ಇವೆಲ್ಲಾ ಆಗುವಷ್ಟರಲ್ಲಿ ಸಂಜೆ ಆರು ಗಂಟೆಯಾಗಿ ಕತ್ತಲು ಆವರಿಸತೊಡಗಿತ್ತು. ಹುಲಿಯ ಭಯದಿಂದಾಗಿ ಅಲ್ಲಿದ್ದ ನಾವು ಐದು ಜನರೂ ಗುಂಪಾಗಿ ನಡೆಯುತ್ತಾ ಮುಖ್ಯರಸ್ತೆಗೆ ಬಂದೆವು. ನಾನು ರಾತ್ರಿಯನ್ನು ಕುಂಸಿಯ ವಸತಿಗೃಹದಲ್ಲಿ ಕಳೆಯಲು ನಿರ್ಧರಿಸಿದೆ.



ಮರುದಿನ ಬೆಳಗ್ಗೆ ನಾನು ಅರಣ್ಯಾಧಿಕಾರಿಯ ಬಳಿ ಹೋದಾಗ ಅವ[...] ತನ್ನ ಕೆಲಸವನ್ನು ಇನ್ನೂ ಪ್ರಾರಂಭಿಸಿರಲಿಲ್ಲ. ಕೊನೆಗೆ ಸುಮಾರು ಹತ್ತು ಗಂಟೆ[...] ಹೊತ್ತಿಗೆ ಒಂದು ಎಮ್ಮೆಯ ಕರು ಮತ್ತು ಎರಡು ಮುದಿ ಎತ್ತುಗಳ[...] ತರಿಸಿದ. ಇವುಗಳನ್ನು ದುಬಾರಿ ಬೆಲೆ ತೆತ್ತು ನಾನು ಕೊಳ್ಳಬೇಕಾಯಿತ[...] ಚೋರಡಿಯ ಅಧಿಕಾರಿಯೂ ಶ್ರಮಪಟ್ಟು ಎರಡು ಪ್ರಾಣಿಗಳನ್ನು ತರಿಸಿ[...] ಇವೆಲ್ಲಾ ಆಗುವಷ್ಟರಲ್ಲಿ ಆಗಲೇ ಮಧ್ಯಾಹ್ನವಾಗಿತ್ತು. ಹಾಗಾ[...] ಸಂಜೆಯಾಗುವುದರೊಳಗೆ ಮೂರು ಬಲಿಪಶುಗಳನ್ನು ಮಾತ್ರ ಸೂಕ್ತ ಸ್ಥಾನದ[...] ಕಟ್ಟಲು ಸಾಧ್ಯವಾಯಿತು. ಮರುದಿನ ಬೆಳಗ್ಗೆ ಉಳಿದ ಕೆಲಸವನ್ನು ಮಾಡ[...] ನಿರ್ಧರಿಸಿ ಕುಂಸಿಯ ವಸತಿಗೃಹಕ್ಕೆ ಹಿಂತಿರುಗಿದೆ.


ಇಲ್ಲಿ ನೀವೆಲ್ಲಾ ತಿಳಿದಿರಬೇಕಾದ ವಿಷಯವೊಂದಿದೆ. ಜೀವಂತ ಪ್ರಾಣಿಗಳ[...] ಬಲಿಯಾಗಿ ಉಪಯೋಗಿಸಿದಾಗ ದಿನನಿತ್ಯ ಅವುಗಳಿಗೆ ಮೇವು ಮತ್ತು ನೀರ[...] ಉಣಿಸಬೇಕಾಗುತ್ತದೆ. ಮೇವಿಗೆ ಒಂದು ದೊಡ್ಡ ಹೊರೆ ಹುಲ್ಲನ್ನು ಹಾಕಿ[...] ಸಾಕಾಗುತ್ತದೆ. ಆದರೆ ನೀರನ್ನು ಕೊಡುವುದು ಕಷ್ಟದ ಕೆಲಸ. ಒಂದು ಡಬ್ಬವ[...] ಇಟ್ಟು ಅದಕ್ಕೆ ದಿನವೂ ನೀರು ತುಂಬಿಸಬಹುದು. ಆದರೆ ಆ ಪ್ರಾಣಿ ಅದ[...] ಬೀಳಿಸಿ ನೀರನ್ನು ಚೆಲ್ಲುತ್ತದೆ. ಅಷ್ಟೇಅಲ್ಲದೆ ಅಂತಹ ನೀರಿನ ಡಬ್ಬ ಅಥ[...] ಮಡಿಕೆ ಹುಲಿಗೆ ಸಂಶಯಾಸ್ಪದವಾಗಿ ಕಂಡು ಅದು ಪ್ರಾಣಿಯತ್ತ ಹೋಗ[...] ಇರಬಹುದು. ಹಾಗಾಗಿ ಇದಕ್ಕೆ ಏಕೈಕ ಉತ್ತಮ ಪರಿಹಾರವೆಂದರೆ ಪ್ರತಿ[...] ಆ ಪ್ರಾಣಿಯನ್ನು ಹತ್ತಿರದ ಹಳ್ಳ ಅಥವಾ ಹೊಳೆಗೆ ಕರೆದುಕೊಂಡು ಹೋ[...] ನೀರು ಕುಡಿಸುವುದು. ಈ ವಿಷಯದಲ್ಲಿ ಹಳ್ಳಿಗರು ಸ್ವಲ್ಪ ಸೋಮಾರಿ[...] ಮಾಡುತ್ತಾರೆ. ಹೇಗೂ ಸಾಯಲು ಬಿಟ್ಟಿರುವ ಪ್ರಾಣಿಗಳಿಗೆ ನೀರನ್ನೇಕೆ ಕುಡಿಸಬೇ[...] ಎನ್ನುವುದು ಅವರ ಮನೋಭಾವ. ಈ ವಿಷಯವನ್ನು ಬೇಟೆಗಾರ[...] ಗಮನದಲ್ಲಿಟ್ಟುಕೊಂಡು ಸರಿಯಾದ ಸಹಾಯಕರನ್ನು ಈ ಕೆಲಸಕ್ಕೆ ನೇಮಿಸಿರಬೇ[...] ಇದಕ್ಕೆ ಬದಲಾಗಿ ಬಲಿಪಶುಗಳನ್ನು ಹಳ್ಳದ ಪಕ್ಕದಲ್ಲಿಯೇ ಏಕೆ ಕಟ್ಟಬಾರ[...] ಎಂದು ನೀವು ಕೇಳಬಹುದು. ಈ ಪ್ರಾಣಿಗಳು ಹುಲಿಯ ಕಣ್ಣಿಗೆ ಬೀಳಬೇಕಾ[...] ಹುಲಿ ನಿಯಮಿತವಾಗಿ ಓಡಾಡುವ ಜಾಗದಲ್ಲಿ ಕಟ್ಟಿದರೆ ಹೆ[...] ಉಪಯುಕ್ತವಾಗುತ್ತದೆ.

ಮರುದಿನ ಅರಣ್ಯಾಧಿಕಾರಿಗಳೊಂದಿಗೆ ಹೋಗಿ ಇನ್ನುಳಿದ ಎರ[...] ಪ್ರಾಣಿಗಳನ್ನು ಸೂಕ್ತ ಜಾಗದಲ್ಲಿ ಕಟ್ಟಿದೆವು. ನನ್ನ ಯೋಜನೆಯನ್ನು ನೋ[...] ಹುಲಿಯನ್ನು ಬೇಟೆಯಾಡಲು ಅನುಕೂಲವಾಗುವಂತೆ ಇಡೀ ಅರಣ್ಯಪ್ರದೇಶ[...] ನಾನು ಬಲಿಪಶುಗಳನ್ನು ಕಟ್ಟಿಹಾಕಿದ್ದೆ ಎಂದು ನಿಮಗೆ ಅನ್ನಿಸಬಹುದು. ಕರಡಿ[...] ಅರಣ್ಯ ಪ್ರದೇಶ ಮೈಲುಗಟ್ಟಲೆ ವಿಸ್ತಾರವಾಗಿದ್ದುದರಿಂದ ಹಾಗೆ ಮಾಡ[...] ಸಾಧ್ಯವಿರಲಿಲ್ಲ. ನನ್ನ ಮಿತಿಯೊಳಗೆ ಸಾಧ್ಯವಾದಷ್ಟು ಉತ್ತಮವಾದ ಯೋ[...] ಹಾಕಿಕೊಂಡು ಉಳಿದಿದ್ದನ್ನು ಅದೃಷ್ಟ ಅಥವಾ ಹಣೆಯಬರಹದ ವ[...] ಒಪ್ಪಿಸಿದ್ದೆ. ಆದರೆ ಅದೃಷ್ಟ ಅವತ್ತು ನಮ್ಮೊಡನೆ ಹುಚ್ಚಾಟವಾಡಿತ್ತು.

ಮಧ್ಯಾಹ್ನದ ಮೂರು ಗಂಟೆಯ ಹೊತ್ತಿಗೆ ನಾವು ಚೋರಡಿಯ ಕ[...] ಬರುತ್ತಿದ್ದಾಗ ಅಲ್ಲಿ ಹೊಲವನ್ನು ಉಳುಮೆ ಮಾಡುತ್ತಿದ್ದ ಜನರು ನ[...] ಒಂದು ಸುದ್ದಿ ಕೊಟ್ಟರು. ತಂದೆ ಮಗನನ್ನು ಕೊಂದ ಜಾಗದ ಹತ್ತಿರ ನ[...] ಕಟ್ಟಿದ್ದ ಪ್ರಾಣಿಯನ್ನು ಹುಲಿಯೊಂದು ಹಿಂದಿನ ರಾತ್ರಿ ಕೊಂದುಹಾ[...] ತಕ್ಷಣ ನಾವು ಚೋರಡಿಯತ್ತ ಧಾವಿಸಿ ಅಲ್ಲಿದ್ದ ಫಾರೆಸ್ಟ್ ಗಾರ್ಡ್‌ಗ[...] ಕರೆದುಕೊಂಡು ಆ ಪ್ರಾಣಿಯಿದ್ದ ಸ್ಥಳಕ್ಕೆ ಹೋದೆವು. ಗಾರ್ಡ್[...] ಪ್ರಾಣಿ ಸತ್ತಿದ್ದನ್ನು ಮೊದಲು ನೋಡಿದ ಕೂಡಲೇ ಶವದ ಮ[...] ಎಲೆಗಳನ್ನು ಮುಚ್ಚಿ ಹದ್ದಿನ ಕಣ್ಣಿಗೆ ಬೀಳುವುದನ್ನು ತಪ್ಪಿಸಿದ್ದರು. ಕಾರಿ[...] ನನ್ನ ಹೊಸ ಮಚಾನನ್ನು ಇಳಿಸಿದೆವು. ಹಗುರವಾದ, ವಿಶಾಲ[...] ಸಾಗಿಸಲು ಅನುಕೂಲವಾಗುವಂತಹ ಮತ್ತು ಕುಳಿತಾಗ ಕಿರುಗು[...] ಶಬ್ದ ಮಾಡದಂತಹ ಹೊಸ ಮಚಾನನ್ನು ನಾನು ಇತ್ತೀ[...] ತಯಾರಿಸಿಕೊಂಡಿದ್ದೆ.

ಪ್ರಾಣಿಯ ಶವವಿದ್ದ ಮರಕ್ಕೆ ಈ ಮಚಾನನ್ನು ಕಟ್ಟ[...] ಸಾಮಾನ್ಯವಾಗಿ ತೇಗದ ಮರಗಳು ಎತ್ತರವಾಗಿ ಬೆಳೆಯುವುದ[...] ಅಲ್ಲಿದ್ದ ಮರಗಳಲ್ಲಿ ಸಣ್ಣ ಮರಕ್ಕೆ ನಾನು ಬಲಿಪಶುವನ್ನು ಕ[...] ಮುಂಜಾಗ್ರತೆ ತೆಗೆದುಕೊಂಡಿದ್ದೆ. ಇಷ್ಟಾಗಿಯೂ ಮರದ ಮೇ[...] ಹನ್ನೆರಡು ಅಡಿಗಳವರೆಗೆ ಯಾವುದೇ ರೆಂಬೆಗಳು ಇರದಿದ್ದು[...] ಮರ ಹತ್ತಿ ಮಚಾನನ್ನು ತಲುಪಲು ನಾನು ಹರಸಾಹಸ ಪಡಬೇಕಾ[...] ಮರವನ್ನು ಏರಿದ ಮೇಲೆ ಹೊಸ ಸಮಸ್ಯೆ ಎದುರಾಯಿತು. [...] ಬಂದಿದ್ದ ಅರಣ್ಯಾಧಿಕಾರಿಗಳಿಗೆ ವಾಹನ ಚಾಲನೆ ಗೊತ್ತಿರಲಿಲ್ಲ; ಹಾ[...] ನನ್ನ ಸ್ಟುಡಿಬೇಕರ್‌ನ್ನು ಏನು ಮಾಡಬೇಕು? ಅಲ್ಲೇ ನಿಲ್ಲಿಸಿ[...] ಹುಲಿಗೆ ಅನುಮಾನ ಬರುತ್ತದೆ. ಹಾಗಾಗಿ ಅಲ್ಲಿದ್ದ ಆರೂ ಜ[...] ಸೇರಿ ನನ್ನ ಕಾರನ್ನು ಅರ್ಧ ಮೈಲು ದೂರ ತಳ್ಳಿಕೊಂಡು ಹ[...] ನಿಲ್ಲಿಸಲು ಹೇಳಿದೆ.

(ಮುಂದುವರೆಯು[...]



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಶ್ರೀಮತಿ ಭೂದೇವಿ

ಹಿರಣ್ಯಕಶಿಪು ಎಂಬ ದುಷ್ಟ ಮತ್ತು ಅಹಂಕಾರಿ ...ನ ತಮ್ಮ ಹಿರಣ್ಯಾಕ್ಷನು ಮಿತಿಮೀರಿದ ತಮ್ಮ ...ಂಕಾರದಿಂದ ಭೂಮಿಯನ್ನು ಚಾಪೆಯಂತೆ ಸುತ್ತಿ ...ುದ್ರದೊಳಗೆ ಅಡಗಿಸಿಟ್ಟನು. ಆಗ ಭೂದೇವಿಯನ್ನು ...ವುದಕ್ಕಾಗಿ ವರಹಾವತಾರವನ್ನೆತ್ತಿ ಭೂಮಿಯನ್ನು ತನ್ನ ...ರೆದಾಡೆಗಳಿಂದ ಮೇಲಕ್ಕೆತ್ತಿ ಉಳಿಸಿದನು. ಅಂತೆಯೇ ...ಣ್ಯಾಕ್ಷನನ್ನು ಕೊಂದು ಮುಗಿಸಿದನು.

ಈ ಕಥೆಯನ್ನು ನೇರವಾಗಿ ಕೇಳಿದರೆ ಎಷ್ಟು ...ಪೆಕ್ಷಾಗಿದೆ ಅಂತ ಅನ್ನಿಸುವುದು ಸಹಜ. ಈಗಿನ ...ದನೇ ತರಗತಿಯ ಮಕ್ಕಳು ಧಾರಾಳವಾಗಿ ...ಬಹುದಾದ ಪ್ರಶ್ನೆಗಳು.

1. ಭೂಮಿ ಚಾಪೆಯಂತೆ ಚಪ್ಪಟೆಯಾಗಿಲ್ಲವಲ್ಲ ...ಡಗಿದೆ. ಹೇಗೆ ಅದನ್ನು ಸುತ್ತಿದ?

2. ಭೂಮಿಯನ್ನು ಚಾಪೆಯಂತೆ ಹಿರಣ್ಯಾಕ್ಷನು ...ದಾಗ ಅವನು ಎಲ್ಲಿ ನಿಂತಿದ್ದ?

3. ಹಾಗೆ ಸುತ್ತಿದಾಗ ಕಟ್ಟಡಗಳು ಮತ್ತು ಜನರು ...ದರು?

4. ಸಮುದ್ರ ಇರುವುದು ಎಲ್ಲಿ? ಭೂಮಿಯ ...ಲಿರುವ ಸಮುದ್ರದಲ್ಲಿ ಭೂಮಿಯನ್ನೇ ಹೇಗೆ ...ಮುಗಿಸಲು ಸಾಧ್ಯ?

...ಇತ್ಯಾದಿ ವಿಷಯಗಳನ್ನು ಕೇಳುವಂತಹ ಸ್ಥಿತಿಯನ್ನು ...ಗಿಸಿಕೊಳ್ಳುವುದು ಏಕೆಂದರೆ ಈಗಲೂ ಅದನ್ನೇ ಮಕ್ಕಳಾ ... ಸತ್ಯವೆಂಬಂತೆ ಪುನರುಚ್ಚರಿಸುತ್ತಿರುವುದು. ಜಗತ್ತಿನ ...ಕಡೆಯಲ್ಲೆಲ್ಲಾ ಇಂಥಾ ಮಿಥಿಕಗಳು ಅಧ್ಯಯನಗಳ ...ಗಳಾಗಿ ಮಾತ್ರವಾಗಿರುವಾಗ ನಮ್ಮ ದೇಶದಲ್ಲಿ ಇದನ್ನು ...ಯ ಮತ್ತು ನಂಬುಗೆಯ ವಸ್ತುಗಳನ್ನಾಗಿ ಹೇರಲು ...ಸುವುದು ನಮ್ಮಂತವರ ವಿರೋಧಕ್ಕೆ ಕಾರಣವಾಗಿದೆ. ...ಲ್ಲದೇ ಹೋಗಿದ್ದರೆ, ಇತರ ಸಂಸ್ಕೃತಿಗಳ ಪುರಾತನರ ...ಬುಗೆಗಳನ್ನು ಆ ಕಾಲಘಟ್ಟದ ವಿವರಗಳ ಅಧ್ಯಯನದಲ್ಲಿ ...ವಾಗಿ ನೋಡಲು ಸಾಧ್ಯವಾಗುತ್ತಲೂ ಇತ್ತು ಮತ್ತು ... ಬೆಲೆಯುಳ್ಳದ್ದೂ ಆಗಿರುತ್ತಿತ್ತು.


ಹಿಂದೂ ಪುರಾಣಗಳು ಏಕೆ ಕ್ಲೀಷೆಯಾಗುತ್ತಿರುವವು?

...ಬೆಳೆದು ನಿಂತಿರುವ ವಯಸ್ಕನನ್ನು ಮತ್ತು ಪ್ರಬುದ್ಧನನ್ನು ...ವಯಸ್ಸಿನಲ್ಲಿ ಅನ್ನ ತಿನ್ನಿಸಲು ಗುಮ್ಮ ಬರ್‍ತಾನೆ ಬೇಗ ... ಎಂದು ಹೆದರಿಸುವುದು ಎಷ್ಟು ಅಸಮಂಜಸವೋ ...ತನ ಸಂಸ್ಕೃತಿ, ಆಗಿನದು ಅಷ್ಟು ಶ್ರೇಷ್ಠ ಅದೇ ನಿಜ ...ವ ನಂಬಿಸಲು ಯತ್ನಿಸುವುದೂ ಅಷ್ಟೇ ಅಸಮಂಜಸ. ... ನಮ್ಮ ದೇಶದಲ್ಲಿ ಗುಮ್ಮನಿಗೆ ಹೆದರುವ ಪ್ರಬುದ್ಧರಲ್ಲದ ...ಯಸ್ಸು ಮಾತ್ರ ಆಗಿರುವ ಹಿರಿಯರಿದ್ದಾರೆ. ಅಂಥಾ ...ಯರನ್ನು ತಯಾರು ಮಾಡಿದ ಕೀರ್ತಿ ಇಂಥಾ ...ಪುರಾಣಗಳು ಮತ್ತು ಅವಾಸ್ತವವಾದ ನಂಬುಗೆಗಳು ...ವುದು ಮಾತ್ರ ಆಘಾತದ ಸಂಗತಿ.

...ಎಲ್ಲಾ ಧರ್ಮದವರಿಗೂ, ಎಲ್ಲಾ ಸಂಸ್ಕೃತಿಯವರಿಗೂ ...ನ್ಯ ವಾಗಿರುವಂತಹ ವಿಜ್ಞಾನಯುಗವು ಪ್ರಾಯೋಗಿಕ ... ಬಳಕೆಯಾಗುತ್ತಿರುವ ಈ ಜಗತ್ತಿನಲ್ಲಿ ಆಗಿನ ವೈದಿಕ ...ದ ಪರಿಕಲ್ಪನೆಗಳನ್ನು ಇಂದಿಗೂ ಟಿವಿಗಳಲ್ಲಿ ಪ್ರಸ್ತುತ ...ನಸದ ಕುರಿತು ಮಾತಾಡುವ ವೈದಿಕರ ಮಿದುಳತ್ತ ...ಸುದು ಎಂಬುದರ ಬಗ್ಗೆ ಅತ್ಯಾಶ್ಚರ್ಯವಾಗುತ್ತದೆ.

...ವೈದಿಕ ವಿಜ್ಞಾನವು ಹೇಳುವಂತಹ ಭೂಮಿಯು ... ಚಪ್ಪಟೆಯಾಗಿತ್ತು, ಅದನ್ನು ಸಾವಿರ ಹೆಡೆಗಳ ...ವು ಹೊತ್ತುಕೊಂಡಿತ್ತು, ಇನ್ನೂ ಕೆಲವು ಕಡೆ ಸುಧಾ ...ದ್ರದಲ್ಲಿ ಭೂಮಿಯು ತೇಲುತ್ತಿತ್ತು, ಅದರಲ್ಲೂ ...ವಾಕ್ಕಾಗಿ ಎಂಬಂತೆ ಇಷ್ಟಾತ್ತಾರು ಸಾವಿರ ವರುಷಗಳ ...ನ ವಿಶ್ವವೊಂದಂತದ್ದೋ ಲೆಕ್ಕ ಬೇರೆ ಹೇಳುತ್ತಾರೆ. ... ಪರ್ವತವು ಹಿಮಾಲಯದ ಗೌರಿ ಶಂಕರ ...ಶಿಖರ ದೊಡ್ಡದು ಎಂದು ಹೇಳುತ್ತಾರೆ.






ಇಂಥಾ ನಂಬುಗೆಗಳು ಜಗತ್ತಿನ ಬೇರೆ ಬೇರೆ ಭೂಭಾಗಗಳಲ್ಲಿ ಅದಿಮ ಸಂಸ್ಕೃತಿಗಳಲ್ಲಿ ಹೇಳುತ್ತಿದ್ದರು ನಿಜ. ಆದರೆ, ಅದು ಹತ್ತನೆಯ ಶತಮಾನದ ನಂತರ ವೈಜ್ಞಾನಿಕವಾಗಿ ಜಗತ್ತು ಕಣ್ಬಿಟ್ಟ ಮೇಲೆ, ಅದರಲ್ಲೂ ವೈಜ್ಞಾನಿಕ ತಂತ್ರಜ್ಞಾನದ ಕ್ರಾಂತಿಯ ಯುಗದಲ್ಲಿ ನಂಬುವಂತಹ ಅಥವಾ ಸಾಧಿಸುವಂತಹ ಅವಿವೇಕ ಮಾಡಕೂಡದು. ಅದೊಂದು ಸಂಸ್ಕೃತಿ ವಿಕಾಸದ ಅಧ್ಯಯನದ ವಸ್ತುವಾಗಿ ಯಾರದ್ದೇನು ಸಮಸ್ಯೆ?

ವೈದಿಕರ ಅಂಧಕಾರ ಯುಗ

ಭಾರತ ಕ್ರಿಸ್ತಪೂರ್ವ 1500 ರಿಂದ ಕ್ರಿಸ್ತಶಕ 1000ದವರೆಗೂ ವೈದಿಕ ಪರಿಕಲ್ಪನೆಗಳ ಅಂಧಕಾರಯುಗವೆಂದು ಹಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆ ಕಾಲಗಳ ಬಗ್ಗೆ ಯಾವುದೇ ಯೋಗ್ಯವಾದ ಲಿಖಿತ ದಾಖಲೆಗಳು ಇಲ್ಲದಿರುವುದು ದೌರ್ಭಾಗ್ಯ. ಅದರಲ್ಲೂ ಕ್ರಿಸ್ತಶಕ 500ರವರೆಂಗಂತೂ ಕಡುಗತ್ತಲ ಯುಗವೇನೋ ಎಂದೇ ಎನಿಸುತ್ತದೆ. ಜಾತಿವ್ಯವಸ್ಥೆಯು ಪರಿಚಿತವಾದ ಸಂದರ್ಭ, ಓದಿನ ಮತ್ತು ಅಕ್ಷರದ ಹಕ್ಕು ಬರಿಯ ಬ್ರಾಹ್ಮಣರದ್ದೇ ಎಂದು ಸಾಧಿಸುತ್ತಿದ್ದಂಥ ಕರಾಳ ವ್ಯವಸ್ಥೆಗಳೆಲ್ಲಾ ಇದ್ದಂತಹ ಸಂದರ್ಭ. ಅರಬ್ಬಿನ ವಿಜ್ಞಾನಿ ಅಲ್-ಬರೂನಿ ಪ್ರವಾಸಿಯಾಗಿ 10ನೆಯ ಶತಮಾನದಲ್ಲಿ ಭಾರತವನ್ನು ಭೇಟಿ ಮಾಡಿದಾಗಲೂ



ಬರೆದಿಡುವಲ್ಲಿ ಕಾರ್ಯತತ್ಪರರಾಗಿರದಿದ್ದ ವೈದಿಕರು ಮೌಖಿಕವಾಗಿಯೇ ಮುಂದುವರಿದಿದ್ದರು.

ಇರಲಿ, ಆರ್ಯರ ಏಳನೇ ಸಂಖ್ಯೆಯ ಪ್ರೇಮವಿಲ್ಲಿ ವ್ಯಕ್ತವಾಗುತ್ತದೆ. ಭೂಮಿಯು ಆದಿಶೇಷನ ಮೇಲೆ ಹೊರಲ್ಪಟ್ಟಿದ್ದು, ಅದರ ಮೇಲೆ ಏಳು ಭಾಗಗಳಾಗಿ ವಿಭಾಗಗೊಳ್ಳುತ್ತವೆ. ತಳಭಾಗದ ಅಂದರೆ ಏಳನೆಯ ಭಾಗವು ಆದಿಶೇಷನ ಮೇಲೆ ಹೊರಲ್ಪಟ್ಟಿರುವುದು. ಇನ್ನೂ ಕೆಲವು ಪುರಾಣಗಳಲ್ಲಿ ಕಂಬಗಳ ಮೇಲೆ ಹೊರಲ್ಪಟ್ಟಿದೆ ಎಂದೂ, ಆಮೆಯ ಮೇಲೆ ಹೊತ್ತಲ್ಪಟ್ಟಿದೆ ಎಂದೂ ಹೇಳುವರು. ಬಲಭದ್ರನ ಪ್ರಕಾರ ಭೂಮಿಯು ನೀರಿನ ಮಧ್ಯದಲ್ಲಿದ್ದು ಅದನ್ನು ಆಮೆಯೊಂದು ಮೇಲಕ್ಕೆ ಎತ್ತಲ್ಪಟ್ಟಿದೆ.

ಈಗಿನ ಕಲಾವಿದರು ಚಾಪೆಯಂತೆ ಮಡಿಸಿರುವ ಭೂಮಿಯನ್ನು ಬಿಟ್ಟು ಗ್ಲೋಬ್‌ನ ವರಹಾವತಾರದಲ್ಲಿ ಕಾಣಿಸುತ್ತಾರೆ.

ಆಶ್ಚರ್ಯಕರ ವಿಚಾರವೆಂದರೆ, ಈ ಬಗೆಯ ಆದಿಮ ಕಾಲದ್ದಾಗಿರಬಹುದಾದಂತಹ ವಿಷಯಗಳನ್ನು ರಚಿಸಿರುವುದು ಕ್ರಿಸ್ತಶಕದ ಪ್ರಾರಂಭದಲ್ಲಿ, ಗ್ರೀಕರು ಭಾರತಕ್ಕೆ ಬಂದಾದ ಮೇಲೂ ಅದಿಮ ಪರಿಕಲ್ಪನೆಗಳ ಜೀರ್ಣೋದ್ಧಾರವಾಗಿರುವಂತಹ ಸೂಚನೆಗಳೇನೂ ಕಾಣಸಿಗುವುದಿಲ್ಲ.

ಮೇರುಪರ್ವತದ ಎತ್ತರ

ಮತ್ಸ್ಯ ಪುರಾಣದಲ್ಲಿ ಬರುವಂತಹ ಒಂದು ಮೇರು ಪರ್ವತದ ವಿವರಣೆ ನೋಡಿ.







ಮೇರು ಪರ್ವತವು ಹೋಳಿಯುದ ಬೆಂಕಿಯಂತೆ ಚಿನ್ನದ ಬಣ್ಣದಲ್ಲಿದೆ. ಮೇರು ಪರ್ವತದ ಪೂರ್ವಭಾಗವು ಬ್ರಾಹ್ಮಣರಂತೆ ಬಿಳಿಯ ಬಣ್ಣದಲ್ಲಿದೆ, ಉತ್ತರ ಭಾಗವು ಕ್ಷತ್ರಿಯರಂತೆ ಕೆಂಪಾಗಿದೆ, ದಕ್ಷಿಣವು ವೈಶ್ಯರಂತೆ ಹಳದಿಯಾಗಿದ್ದು, ಪಶ್ಚಿಮವು ಶೂದ್ರರಂತೆ ಕಪ್ಪಾಗಿದೆ. ಈ ನಾಲ್ಕೂ ಭಾಗಗಳ ಒಂದೊಂದು ಭಾಗಗಳೂ 34000 ಯೋಜನೆಗಳಿವೆ. ಇದರ ಎತ್ತರ 86000 ಯೋಜನೆ ಎತ್ತರವಾಗಿದ್ದು 16000 ಯೋಜನೆಗಳ ಭಾಗ ಭೂಮಿಯ ಮೇಲಿದೆ. ಹೊಂಬಣ್ಣದ ಬದಿಯಲ್ಲಿ ದೇವ ಮತ್ತು ಗಂಧರ್ವರು, ಅಪ್ಸರೆಯರು ಚಿನ್ನದ ಮನೆಯಲ್ಲಿ ಇದ್ದರೆ, ದೈತ್ಯರು, ಅಸುರರು ಮತ್ತು ರಾಕ್ಷಸರು ಪಶ್ಚಿಮದಲ್ಲಿ ವಾಸಿಸುತ್ತಾರೆ.

ಸಾಮಾನ್ಯವಾಗಿ ಪುರಾಣಿಕರ ಪ್ರಕಾರ ಒಂದು ಯೋಜನವೆಂದರೆ 8 ಮೈಲಿ. ಅದರಂತೆ ಮೇರು ಪರ್ವತವು 704,000 ಮೈಲುಗಳಷ್ಟು ಎತ್ತರವು. ಹೋಲಿಸುವುದಾದರೆ, ಇದು ಗೌರಿಶಂಕರಕ್ಕಿಂತಲೂ 100,000ಗಳಷ್ಟು ಎತ್ತರವು.

ಕೂರ್ಮಪುರಾಣದಲ್ಲಿ ಇದೇ ಬಗೆಯ ಇನ್ನೊಂದು ಲೆಕ್ಕಾಚಾರವಿದೆ.

ಭೂಮಿಯು ಏಳು ಖಂಡಗಳಿಂದಾಗಿದ್ದು, ಒಟ್ಟು 500,000,000 ಯೋಜನೆಗಳಷ್ಟು ಹರಡಿಕೊಂಡಿದೆ. ಪವಿತ್ರವಾದ ಜಂಭೂದ್ವೀಪವು ಮಧ್ಯೆಯಿದೆ. ಅದರ ಮಧ್ಯ ಭಾಗದಲ್ಲಿ ಮೇರು ಪರ್ವತವು ಚಿನ್ನದ ಬಣ್ಣದಲ್ಲಿ ಕಂಗೊಳಿಸುತ್ತಿದೆ. ಇದರ ಎತ್ತರ 84,000 ಯೋಜನೆಗಳು ಮತ್ತು 16,000 ಯೋಜನೆಗಳು ಭೂಮಿಯ ಭಾಗದಲ್ಲಿ ಹರಡಿಕೊಂಡಿದೆ. ಮೇರುವಿನ ಮೇಲ್ಭಾಗವೇ 32,000 ಯೋಜನೆಗಳಿವೆ. ಈ ಪರ್ವತದ ಪೂರ್ವಭಾಗದಿಂದಲೇ ಸೀತಾ ನದಿಯು ಹರಿಯುವುದು ಎಂದು ಹೇಳುತ್ತಾ ಅಲಕಾನಂದ ಇತ್ಯಾದಿ ನದಿಗಳೂ ಇದರಲ್ಲಿ ಹುಟ್ಟುವುದೆಂದು ವಾಸ್ತವದಲ್ಲಿ ಇರುವಂತೆಯೇ ಹೇಳುತ್ತಾರೆ.

ಜೈನ ಮತ್ತು ಆರ್ಯ-ವೈಷ್ಣವ ಸಂಪ್ರದಾಯದ ಗುಜರಾತಿನ ಬರೋಡದ ಬಳಿಯ ಜಂಭೂದ್ವೀಪ ಸಂಸ್ಥೆಯು ಇನ್ನೂ ಭೂಮಿಯು ಚಪ್ಪಟೆಯಾಗಿದೆ ಎಂದು ಸಾಧಿಸುವ ಪ್ರಯತ್ನದಲ್ಲಿ ಅಧ್ಯಯನ ಮಾಡುತ್ತಿದ್ದಾರಂತೆ!

ಇರಲಿ, ಇನ್ನೂ ಕೆಲವು ತಮಾಷೆಗಳನ್ನು ನೋಡೋಣ.

ವಾಯು ಪುರಾಣದಲ್ಲಿ ಹೇಳುವಂತೆ ಗಾಳಿಯು ನಕ್ಷತ್ರಗಳನ್ನು ವಿಶ್ವದಲ್ಲಿ ಚದುರಿಸಿತು. ಪಂಚವಿಂಸ ಬ್ರಾಹ್ಮಣ ಭೂಮಿ ಮತ್ತು ಸ್ವರ್ಗದ ನಡುವಿನ ಅಂತರ ಸಾವಿರ ಗೋಪಾದಗಳ ಅಳತೆ.

ಏನೇ ಆಗಲಿ ಭೂಮಿಯ ಮಹತ್ವವನ್ನು ಹೇಳುವಂತಹ, ಭೂಮಿಯನ್ನು ಹೆಣ್ಣೆಂದು ಒಪ್ಪಿ ಅವಳು ಸಾಮರ್ಥ್ಯಶಾಲಿ ಎಂದು ಈ ಪುರಾಣಗಳು ಒಪ್ಪಿವೆ. ಅವಳಿಂದ ಜೀವ ಜಗತ್ತು ಎಂಬುದನ್ನೂ ಒಪ್ಪಿವೆ. ಹಾಗಾಗಿಯೇ ಭಾರತೀಯ ಸಂಸ್ಕೃತಿಯಲ್ಲಿ ಅನೇಕ ಕಥೆಗಳು ಇದನ್ನು ಧ್ವನಿಸುತ್ತವೆ.

ಇಬ್ಬರ ಜಗಳ ಮೂರನೆಯವರಿಗೆ ಲಾಭ

ಲಿಂಗ ಪುರಾಣದಲ್ಲಿ ಬರುವ ಕಥೆಯೊಂದನ್ನು ಗಮನಿಸಿದರೆ, ಪರ್ವತ ಮತ್ತು ನಾರದರಿಬ್ಬರೂ ರಾಜಕುಮಾರಿ ಶ್ರೀಮತಿಯನ್ನು ನೋಡಿ ಪ್ರೇಮಪಾಶದಲ್ಲಿ ಬಿದ್ದರು. ಶ್ರೀಮತಿಯ ತಂದೆ ಅವಳಿಗೆ ಸ್ವಯಂವರವನ್ನೇರ್ಪಡಿಸಿದ. ಅವರು ಇಬ್ಬರೂ ಪ್ರೀತಿಸುತ್ತಿರುವುದು ಪರಸ್ಪರ ತಿಳಿಯಿತು. ಆದ್ದರಿಂದ ಪರ್ವತನು ನಾರದನಿಗೆ ತಿಳಿಯದಂತೆ, ನಾರದನು ಪರ್ವತನಿಗೆ ತಿಳಿಯದಂತೆ ವಿಷ್ಣುವನ್ನು ಸಂಧಿಸಿ, ನಾರದನು ಪರ್ವತನ ಮುಖವು ಕೋತಿಯದಾಗಲೆಂದೂ ಅಥವಾ ಕರಡಿಯದಾಗಲೆಂದೋ, ಪರ್ವತನು ನಾರದನ ಮುಖವು ಕೋತಿಯದಾಗಲೆಂದೂ ಕೇಳಿಕೊಳ್ಳುತ್ತಾರೆ.

ಇಲ್ಲಿ ವಿಷ್ಣು ಎಂಥಾ ಕಿಲಾಡಿ ಎಂದರೆ, ನಾರದನಿಗಾಗಲಿ, ಪರ್ವತನಿಗಾಗಲಿ "ನೀವು ನಿಮ್ಮ ನಿಮ್ಮ ದುರಾಸೆ ಮತ್ತು ಸ್ವಾರ್ಥಕ್ಕೆ ಮತ್ತೊಬ್ಬರನ್ನು ಕುರೂಪಗೊಳಿಸುವ, ವಿಕೃತಗೊಳಿಸುವ ಅಮಾನವೀಯ ಮನಸ್ಥಿತಿಯನ್ನು ಹೊಂದಬಾರದು" ಎಂದು ಸಾಕ್ಷಾತ್ ಭಗವಂತನಾದವನು ಬುದ್ಧಿ ಹೇಳದೇ ತಥಾಸ್ತು ಎಂದು ವರ ಕೊಟ್ಟು ಕಳುಹಿಸುತ್ತಾನೆ.

ಈ ಇಬ್ಬರೂ ಮಂಕುದಿಣ್ಣೆಗಳು ಶ್ರೀಮತಿಯ ಸ್ವಯಂವರಕ್ಕೆ ಹೋಗುತ್ತಾರೆ. ಇಬ್ಬರಿಗೂ ಕೋತಿಗಳ ಮುಖವೇ. ಅವರಿಬ್ಬರ ನಡುವೆ ಕಂಗೊಳಿಸುತ್ತಾ ಸ್ಫುರದ್ರೂಪಿಯಾಗಿ ನಿಂತಿರುವನು ಸಾಕ್ಷಾತ್ ವಿಷ್ಣು ಅವನನ್ನು ಶ್ರೀಮತಿ ವರಿಸುತ್ತಾಳೆ.

ಇದು ತಮಾಷೆಯ ಕಥೆ ಎಂದು ಮೇಲ್ನೋಟಕ್ಕೆ ಕಾಣುವುದಾದರೂ ಪುರಾಣದ ರಚನಕಾರನ ಮನಸ್ಥಿತಿ, ಅವನ ಸಮೂಹದ ಧ್ಯೇಯ ಧೋರಣೆ ಅರ್ಥವಾಗುತ್ತವೆ.

ಭೂಮಿಯ ಮೇಲೆ ಅಧಿಪತ್ಯವನ್ನು ಹೊಂದಲು ಅವರು ಸ್ಪರ್ಧಿಗಳಾಗಿರುವ ವೃತ್ತಗಳಲ್ಲಿ ಪರಸ್ಪರ ಕಾದಿಕೊಳ್ಳಲು ಅವಕಾಶಕೊಟ್ಟು, ನಡುವೆ ತಾವು ತಮ್ಮ ಸ್ವಾರ್ಥಸಾಧನೆ ಮಾಡಿಕೊಳ್ಳುವುದು ಸ್ಪಷ್ಟ ಮತ್ತು ಅದೇ ಅವರ ಕಿಲಾಡಿತನ. ಇಬ್ಬರ ಜಗಳದಲ್ಲಿ ಶಾಂತಿಸ್ಥಾಪನೆ ಮಾಡುವುದು ಅವರ ಉದ್ದೇಶವಾಗಿರುವುದಿಲ್ಲ, ಬೆಂದ ಮನೆಯಲ್ಲಿ ಹಿರಿಯುವ ಲಾಭ.

'ಮತೀಯವಾದಿಗಳ ಕಿಡಿಗೇಡಿ ಪ್ರಚಾರದಿಂದ ಭಾರತವನ್ನು ಕಟ್ಟಲಾಗದು'-ಒಂದು ಒಡಲಾಳದ ಮನವಿ

- ಸಾದತ್ ಹಸನ್ ಮಾಂಟೋ

(ದೇಶವಿಭಜನೆಯ ಸಮಯದಲ್ಲಿ, ಹಿಂಸಾನಿರತ ಬಾಂಬೆಯನ್ನು ಬಿಟ್ಟುಹೋಗಬೇಕಾದ ಸಂದರ್ಭದಲ್ಲಿ ಬರೆದ ಬರಹ)


ಅಮೃತಸರದ ಕೊಳಕು ಗಲ್ಲಿ, ಬಜಾರುಗಳಿಂದ ತಪ್ಪಿಸಿಕೊಳ್ಳಲು ನಾನು ಬಾಂಬೆಗೆ ಬಂದೆ. ಆ ಹೊತ್ತಿಗೆ ಅಮೃತಸರದಲ್ಲಿ ತುಂಬಿದ ಕೋಮು ದ್ವೇಷದಿಂದ ಪಾರಾಗಿ ವಿಶಾಲ ಮನೋಭಾವದ ಜನರಿರುವ ಸುಂದರ ನಗರಕ್ಕೆ ಬಂದಿದ್ದೇನೆ ಅಂದುಕೊಂಡಿದ್ದೆ, ಆ ನಂಬಿಕೆ ಈಗ ಹುಸಿಯಾಗಿದೆ.

ನಾನು, ನೆಲೆವೂರಿದ ಕೆಲವು ತಿಂಗಳುಗಳಲ್ಲೇ ಹಿಂದೂ-ಮುಸಲ್ಮಾನರು ಹೊಡೆದಾಟ ಶುರುವಿಟ್ಟುಕೊಂಡರು, ಹೊಡೆದಾಟ ಮುಂದುವರೆಯುತ್ತಲೇ ಇದೆ.

ಇಂಥ ಹೊಡೆದಾಟಗಳಿಗೆ ಲಾಗಾಯ್ತಿನ ಮಂದಿರ-ಮಸೀದಿ ವಿವಾದಗಳೇ ಕಾರಣ ಎನ್ನೋದು ನಿಮಗೆ ತಿಳಿದಿದೆ. ಈ ಜಗಳ ಎಷ್ಟೋ ಜನರನ್ನು ಬಲಿ ತೆಗೆದುಕೊಂಡಿತು. ಈ ಹಿಂಸೆಯನ್ನು ನಾನು ಕಣ್ಣಾರೆ ಕಂಡೂ, ನನ್ನ ಉದ್ವೇಗ, ಆತಂಕಗಳನ್ನು ಅದುಮಿಟ್ಟುಕೊಂಡೆ.

ಕೊನೆಗೆ ಪೆನ್ನೆತ್ತಿಕೊಂಡು, ಸಹೃದಯಿ ಬಾಂಬೆವಾಸಿಗಳಿಗೆ ಮನವಿಯೊಂದನ್ನು ಬರೆದೆ. ಈ ಮನವಿಯನ್ನು ಓದಿದ್ದೇ, ನಮ್ಮ ಗೌರವಾನ್ವಿತ ಮುಸಲ್ಮಾನ ಬಂಧುಗಳು ನನ್ನನ್ನು ಹುಡುಕಿಕೊಂಡು ಬಂದರು. ಅವರು ಹಾಕಲಿದ್ದ ಪೆಟ್ಟುಗಳಿಂದ ಹೇಗೆ ಪಾರಾದೆ ಅನ್ನೋದು ಬೇರೆಯದೇ ಕತೆ.

ಕೊನೆಗೂ ನನ್ನ ಭೀತಿ ನಿಜವಾಯಿತು: ಸಭಾಮಂಡಳಿಯಲ್ಲಿ ಸೇರಿದ್ದ ಗುಂಪು ವಿಷಕಾರತೊಡಗಿತು. ಬಾಂಬೆಯ ಹವಾದಲ್ಲಿ ನಂಜೇರತೊಡಗಿತು. ಭಯಾನಕವಾದ ರಾಕ್ಷಸೀ ಕೃತ್ಯಗಳನ್ನು ಬಲವಂತದಲ್ಲಿ ಕಾಣಬೇಕಾಯಿತು. ಕಲ್ಲು



ತೂರಾಟ, ಚಾಕುವಿನ ಇರಿತ, ಕಬ್ಬಿಣದ ಸರಳುಗಳ ಬಡಿತ... ಇವೇ ಮುಂತಾದ ಪೌರುಷ ಪ್ರದರ್ಶನಗಳು ನಡೆದವು; ಕೇರಿಕೇರಿಗಳ ಮೇಲೆ ದಾಳಿ ನಡೆಸಿ, ಮನೆಮಾರುಗಳನ್ನು ಧ್ವಂಸಗೊಳಿಸಲಾಯಿತು. ಬಾಂಬೆಯ ಗಲ್ಲಿ, ಬೀದಿಗಳಲ್ಲಿ ರಕ್ತ ಚೆಲ್ಲಾಡತೊಡಗಿತು. ಸ್ವಾತಂತ್ರ್ಯದ ಮಹೂರ್ತದಲ್ಲೇ ಭಾರತವನ್ನು ತಳವಿರದ ಕರಾಳ ಹೊಂಡಕ್ಕೆ ನೂಕಲಾಯಿತು.

ದೇಶವಿಮೋಚನೆಯ ಹೊಸ್ತಿಲಲ್ಲಿ ಈ ನಮೂನೆಯ ಮತೀಯ ವಿಧ್ವಂಸಕತೆ ಸಲ್ಲದೆಂದು ಬಲ್ಲ, ಇತಿಹಾಸದ ಪಾಠಗಳನ್ನು ಅರಿತ, ಸ್ವಾತಂತ್ರ್ಯದ ಬೆಲೆಯನ್ನರಿತ ಜನರ ಎದೆ ಕುಸಿದುಹೋದದ್ದು ಸಹಜವೆ. ಪಾಶವೀ ಹಿಂಸಾಭಾವವನ್ನುಂಡವರ ಹೊರತಾಗಿ ಯಾರು ತಾನೇ ಮನುಷ್ಯ ಮನುಷ್ಯನನ್ನು ಕಡಿದು, ಕೊಚ್ಚುವುದನ್ನು ಕಂಡು ಸುಖಿಸಿಯಾರು; ಯಾರು ತನ್ನ ಸಹೋದರನ ಕುತ್ತಿಗೆಯನ್ನು ಕೊಯ್ದು, ಅದರಿಂದ ಹರಿಯುವ ನೆತ್ತರ ಜರಿಯನ್ನು ಕಂಡು ಆನಂದಪಟ್ಟಾರು? ಹೆಣಗಳ ರಾಶಿಯ ಮೇಲೆ ಹತ್ತಿ ಯಾರು ಖುಷಿಯಿಂದ ಕುಣಿದಾರು? ಹೀಗಿದ್ದೂ ಈ ಅವಿರತ ಕಗ್ಗೊಲೆಗಳನ್ನು ಬಾಂಬೆಯ ಆಗಸ ಯಾಕೆ ಮೌನದಲ್ಲಿ ವೀಕ್ಷಿಸಿತು? ಈ ಕೊಲೆಗಳಿಗೆ ಯಾರು ಕಾರಣರು ಎನ್ನೋದನ್ನು ನಾವು ಬುದ್ಧಿಪೂರ್ವಕವಾಗಿ ಪತ್ತೆಮಾಡಲೇಬೇಕಿದೆ.

ಲೋಕ ಸಜ್ಜನರಿಂದ ತುಂಬಿದೆ. ಆದರೆ, ಸಜ್ಜನರ ಮಧ್ಯೆ ಸದಾ ಕತ್ತಿ ಮಸೆಯುವ, ಹರಿತ ಅಲುಗಿನ ಕತ್ತಿಗಳನ್ನು ಹಂಚಿ, ಸಾಮೂಹಿಕ ಕೊಲೆಗಳ ಬೆಂಕಿಯಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಸಮಯಸಾಧಕರೂ ಇದ್ದಾರೆ.

ಇಂಥವರು ಭಾರತವನ್ನು ಬರ್ಬರಯುಗಕ್ಕೆ ಕೊಂಡೊಯ್ಯಲು ಸನ್ನದ್ಧರಾಗಿದ್ದಾರೆ. ಹಿಂಸೆಯ ಮೂಲಕ ಭಯಾತಂಕ ಹುಟ್ಟಿಸಿ ತಮ್ಮ ಹಿತಾಸಕ್ತಿಯನ್ನು ಭದ್ರವಾಗಿಟ್ಟುಕೊಳ್ಳುವುದು ಅವರ ಯೋಜನೆ. ಮನುಷ್ಯರ ಮಾಂಸ-ಮಜ್ಜೆಯನ್ನು ಪೇಟೆಯಲ್ಲಿಟ್ಟು ಮಾರುವುದರಲ್ಲೇ ಅವರು ಖುಷಿಪಡುತ್ತಾರೆ. ಅವರಿಗೆ ಭಾರತದ ವಿಮೋಚನೆ ಬೇಕಿಲ್ಲ, ದೇಶದ್ರೋಹಿಗಳಿವರು. ಇವರು ದೇಶವಂಚಕರೂ ಮಾತ್ರವಲ್ಲ, ಮಾನವ ಕುಲ ಕಂಟಕರು; ನರಕದ ಕೇಡನ್ನೇ ಉಸಿರಾಡುವ ಮಂದಿ.

ಇವರು ನಮ್ಮ ಪ್ರತಿನಿಧಿಗಳು, ಇವರು ನಮ್ಮ ನಾಯಕರು.

ಅವರಿಗೆ ಬೆಕ್ಕಿನ ಪಂಜವಿದೆ. ಮೇಲ್ನೋಟಕ್ಕೆ ಬಲು ಮೃದು, ನವಿರು, ಆಧ್ದಿಯಿಂದ ವಿಷಕಳುಷ ಮೊನಚು. ಅವರ ಬಹಿರಂಗ ನುಡಿಗಳನ್ನು ಕೇಳಿದರೆ ಅವು ಜನರ ದುಃಖದಲ್ಲಿ ಮಿಂದೆದ್ದಂತಿರುತ್ತವೆ; ಆದರೆ ಅವರು ತಮ್ಮ ಅಂತರಂಗದ ಕಪಟವನ್ನು ಎಷ್ಟು ಕಾಲ ಮುಚ್ಚಿಟ್ಟು ಕೊಂಡಾರು. ಅವರ ಧರ್ಮಕಾರುಣ್ಯ ಮನುಷ್ಯಾನುಕಂಪ ಉದಾತ್ತತೆಗಳೆಲ್ಲಾ ಕಪಟ ವೇಷ. ಇಂತಹ ದುರುಳರ ಜೊತೆ ನಾವು ಈ ಪ್ರಪಂಚದಲ್ಲಿ ಬದುಕುತ್ತಿದ್ದೇವೆ ಅನ್ನೋ ಸಂಗತಿಗೇ ಎದೆ ಹದರುಗುಟ್ಟುತ್ತದೆ.


ಒಂದಷ್ಟು ಸಹನೆ, ತಾಳ್ಮೆಗಳ ಬುದ್ಧಿ ಉದ್ದೀಪಿಸಿದ್ದರೆ, ಹಿಂದೂ-ಮುಸಲ್ಮಾನರು ಒಬ್ಬರಿಗೊಬ್ಬರಿಗೊಬ್ಬರು ಮಾಡಿದ ಹಸಿ ಗಾಯಗಳಿಗೆ ನಿಜ ಮಾತಿನ ಮುಲಾಮು ಹಚ್ಚಿದ್ದರೆ ಬಾಂಬೆಯ ಹಿಂಸೆಯನ್ನು ತಡೆಯಬಹುದಿತ್ತು, ಜನ ಗುಂಪುಪಾಶವೀಯತೆಗೆ ತಮ್ಮನ್ನೇ ಕೊಟ್ಟುಕೊಳ್ಳದಿದ್ದಲ್ಲಿ ತಮ್ಮ ಅಂತರಂಗದ ವಿವೇಕವನ್ನು ಎಚ್ಚರಿಸಿಕೊಂಡಿದ್ದಲ್ಲಿ ಶಾಂತಿಯ ವಾತಾವರಣ ಮೂಡುವುದು ಕಷ್ಟವೇನೂ ಆಗಿರಲಿಲ್ಲ, ಹಫೀಝ್ ಅಲಿ ಬಹದ್ದೂರ್ ಖಾನ್‌ರಂಥವರು ಇಂಥ ಕಾಯಕ ಕೈಗೊಂಡರಾದರೂ, ಬುಸುಗುಡುವ ಸರ್ಪಗಳ ಕುತಂತ್ರ ವಿನಾಕಾರಣ ಹಿಂಸೆಯನ್ನು ಅಂತ್ಯಗೊಳಿಸುವ ಆಸೆಯನ್ನೂ ನಾಶ ಮಾಡಿತು.

ಮತೀಯ ದ್ವೇಷ ಕೆರಳಿಸಿ ಹಿಂಸೆ ಹುಟ್ಟುಹಾಕಿದ ನಾಯಕರೇ, ನೆನಪಿರಲಿ ಭಾರತದ ಜನ ನಿಮ್ಮ ಆಟವನ್ನು ಅರಿಯುತ್ತಾರೆ, ಹೇಸಿಗೆಯಿಂದ ನಿಮ್ಮ ಮುಖಕ್ಕೆ ಉಗಿಯುತ್ತಾರೆ. ಮತೀಯದ್ವೇಷ ಹರಡುವ ಕಿಡಿಗೇಡಿಗಳು ವಿಮೋಚಿತ ಭಾರತದ ಭವ್ಯ ಸೌಧವನ್ನು ಕಟ್ಟಲಾರರು. ಅಂಥವರು ಸ್ವಾತಂತ್ರ್ಯಕ್ಕೆ ಕಂಟಕರು, ಮಾನವಕುಲ ದ್ವೇಷಿಗಳು.

ಅವರ ಹೆಸರೆತ್ತಿ ಹೇಳಿ, ಮುಖಕ್ಕೆ ಉಗಿಯಬೇಕು.

ಇಲ್ಲವಾದಲ್ಲಿ, ಅವರು ತಮ್ಮ ಆಟ ಮುಂದುವರೆಸುತ್ತಾರೆ, ವಿಮೋಚಿತವಾಗಲಿರುವ ದೇಶದ ಯುವತಿ-ಯುವಕರ ಕತ್ತುಹಿಸುಕಲು ಸದಾ ಉತ್ಸುಕರಾಗಿರುತ್ತಾರೆ.

ಅನುವಾದ: ಫಿಜೂಲ್ ರಾಜ



ಜಂಗಮದಿಂದ ಸ್ಥಾವರಕ್ಕೆ ಹೋಗುವ ಬಸವ ಭಕ್ತರು

12ನೆ ಶತಮಾನ ಭಾರತ ಭೂಮಿಯಲ್ಲಿ ಸುವರ್ಣ ಯುಗ. ಬಸವಣ್ಣ ಒಬ್ಬ ಮೂರ್ತಿ ಬಂಜಕ ನಾಸ್ತಿಕ. ಕಲ್ಲು ದೇವರ ವಿರುದ್ಧ ಉಪನಯನದ ವಿರುದ್ಧ ವೈದಿಕರ ವಿರುದ್ಧ ಧ್ವನಿ ಎತ್ತಿದ ಮೊದಲ ಹಾಗು ಕೊನೆಯ ತತ್ವಜ್ಞಾನಿ. ಬಸವಣ್ಣನ ನಂತರ ಬಂದ ಗಾಂಧಿ, ಫುಲೆ, ಅಂಬೇಡ್ಕರ್ ಹೊಸ ಸಮಾಜದ ಕಲ್ಪನೆ ಹೊಂದಿದ್ದರು ಸರಿ. ಆದರೆ ಅವರಿಗಿಂತ 800 ವರ್ಷ ಮೊದಲು ಶೋಷಣೆ ರಹಿತ ರಾಷ್ಟ್ರ ಕಟ್ಟುವಲ್ಲಿ ಬಸವಣ್ಣ ಯಶ ಕಂಡರು. ಇಂತಹ ಬಹುದೊಡ್ಡ ಇತಿಹಾಸವಿರುವ ಈ ಸಿದ್ಧಾಂತದಲ್ಲಿ ನಮ್ಮ ಸ್ವಾಮಿಗಳು, ಮಾತೆಯರು, ಅಕ್ಕನವರು ಬಸವಣ್ಣನ ಮೂರ್ತಿಗಾಗಿ ನೂರಾರು ಕೋಟಿ ಹಣ ಖರ್ಚು ಮಾಡುತ್ತಿದ್ದಾರೆ. ಇದು ಬಸವಣ್ಣನಿಗೆ ಮಾಡುವ ಅಪಮಾನ. ಕಾಗೆ ವಿಸ್ಮಿಸುವ ಹೊನ್ನ ಕಳಸಕ್ಕಿಂತ ನಿಮ್ಮ ಶರಣರ ಚಿಮ್ಮಾವುಗೆ ಮಾಡಯ್ಯ ಎಂದು ಹೇಳಿದ ಮಾಹಮಣಿಮ ಬಸವಣ್ಣನ ಆಶಯಗಳಿಗೆ ಕಲ್ಲು ಹಾಕಿದ್ದಾರೆ ನಮ್ಮವರು.

ವಚನ ಯೂನಿವರ್ಸಿಟಿ ಮಾಡಿ ತನ್ಮೂಲಕ ಶರಣರ ತತ್ವಗಳನ್ನು ಜಗತ್ತಿಗೆ ತಿಳಿಸಬೇಕು. ಅದುವೇ ನಿಜವಾದ ನಮ್ಮ ಆದ್ಯ ಕರ್ತವ್ಯ ಇಲ್ಲದಿದ್ದರೆ ಕಲ್ಲ ಮೇಲೆ ಕಲ್ಲನಿಡುವ ನಾವು ಕಲ್ಲು ಹೃದಯಿಗಳಾಗುತ್ತೇವೆ. ಬೇಕು ನಮಗೆ ಜಂಗಮ.

-ಡಾ.ಶಶಿಕಾಂತ್ ಪಟ್ಟಣ್, ಪುಣೆ

ಕರಾವಳಿ ಪರಶುರಾಮನ ಸೃಷ್ಟಿಯಲ್ಲ

ವೈದಿಕರದ್ದಲ್ಲದ ಕರಾವಳಿ ಜಿಲ್ಲೆ ಇದೀಗ ಪೂರ್ತಿಯಾಗಿ ವೈದಿಕರ ಕರಾಳ ಕಪಿಮುಷ್ಠಿಯಲ್ಲಿದೆ. ಶಶಿ ಪುತ್ತೂರು ಹಾಗು ಪ್ರವೀಣ್ ಎಸ್ ಶೆಟ್ಟಿಯವರು ಉಲ್ಲೇಖಿಸಿದ ಪರಶುರಾಮನ ಕಥೆ ಯಾವುದೋ ಒಂದು ಸ್ಥಳೀಯ ಗಟ್ಟಿ ನಂಬಿಕೆಗೆ ಪ್ರತಿಯಾಗಿ ಸೃಷ್ಟಿಸಿ ಹರಿಬಿಡಲಾಗಿದ್ದ ಬೊಗಳೆ ಕಥೆಯಾಗಿದೆ. ಆ ನಂಬಿಕೆ ಬೇರೆಯಾವುದೂ ಅಲ್ಲ, ಮಹಾಬಲಿಯದ್ದು 'ಭೂಸುರ'ರ ಈ ಹುನ್ನಾರಗಳ ಕುರಿತು ಹಿರಿಯ ಚಿಂತಕ ಶ್ರೀಯುತ ಪೇರೂರು ಜಾರುರವರು ತಮ್ಮ ಕಿರು ಹೊತ್ತಗೆ 'ಮಣ್ಣಿನ ಮಗ ಮಹಾಬಲಿ'ಯಲ್ಲಿ ಉಲ್ಲೇಖಿಸಿದ್ದಾರೆ.


ಕೇರಳ ಕಮ್ಯುನಿಸ್ಟ್ ಆಡಳಿತ ಹೊಂದಿದ್ದ ರಾಜ್ಯ. ಇಲ್ಲಿ ಧಾರ್ಮಿಕ ಗೊಡ್ಡು ಭಾವನೆಗಳಿಗೆ ಅತಿಯಾದ ಪ್ರಾಮುಖ್ಯತೆ ಇರದಿದ್ದ ಕಾರಣಕ್ಕೇ ಬಿಜೆಪಿಯ ಯಾವ ಮಸಲತ್ತುಗಳೂ ವರ್ಕೌಟ್ ಆಗದೇ (ಮಾಯಾವತಿಯ ಯುಪಿ ರಾಮದೇವನ ದಲಿತರ ಕೆರಳಿಸುವ ಹೇಳಿಕೆಯ ಪ್ರಭಾವದಲ್ಲೂ ಭರ್ಜರಿಯಾಗಿ ಕೋಮುವಾದಿ ಪಕ್ಷವನ್ನು ಗೆಲ್ಲಿಸಿ ಕೊಟ್ಟಿತು) ಯಾವ ದರಿದ್ರ ಮಸಲತ್ತಿನ ಅಲೆಗಳೂ ಕಿಂಚಿತ್ತೂ ತಟ್ಟಿರಲಿಲ್ಲ. ಇಂತಹ ಕೇರಳದಲ್ಲಿ ಓಣಂ ಬಂತೆಂದರೆ ಕ್ರಿಶ್ಚಿಯನ್ -ಮುಸಲ್ಮಾನರೂ ಸಂಭ್ರಮಪಡುತ್ತಾರೆ. ಮಹಿಳೆಯರು ಧರ್ಮಾತೀತರಾಗಿ ಕೇರಳದ ಸಾಂಪ್ರದಾಯಿಕ ಉಡುಗೆಯನ್ನು ತೊಟ್ಟು ಹೊರಬರುತ್ತಾರೆ.

ಈ ಓಣಂ ಹಬ್ಬ ಈ ನಾಡಿನ ಹಿಂದಿನ ಜನಾನುರಾಗಿ ದೊರೆ ಬಲಿಚಕ್ರವರ್ತಿಯನ್ನು ನೆನಪಿಸಿ ಆಹ್ವಾನಿಸುವ ಹಬ್ಬವಾಗಿದೆ. ಈ ಓಣಂ ದಿನ ಮಹಾಬಲಿ ತನ್ನ ಹಳೆಯ ರಾಜ್ಯವನ್ನು ನೋಡಲು ಬರುತ್ತಾನಂತೆ. ಅದು ಸುಳ್ಳೆಂದು ಗೊತ್ತಿದ್ದರೂ ಜನ ಅದಕ್ಕಾಗಿ ತಯಾರಿ ನಡೆಸಿ ಸಂಭ್ರಮಿಸುತ್ತಾರೆ. ಈ ಬಲಿಯ ಪ್ರಭಾವ ಪ್ರೀತಿಯ ಸೆಳೆತ ಅಂತಾದ್ದು. ಇನ್ನು ಉತ್ತರಕ್ಕೆ ಬಂದರೆ ಇದೇ ಬಲಿಯನ್ನು ತುಳುಭಾಷಿಕ ಕರಾವಳಿಗರು ದೀಪಾವಳಿ ದಿನದಂದು ಆಹ್ವಾನಿಸಿ ಸಂಭ್ರಮಿಸುತ್ತಾರೆ. ಕೃಷಿಕೊಯ್ಲು ಹಬ್ಬವಾದ ದೀಪಾವಳಿಯಂದು ತಮ್ಮ ಬಲೀಂದ್ರನಿಗಾಗಿ ಗದ್ದೆಯಲ್ಲಿ ಹಿಟ್ಟನ್ನು ಅರ್ಪಿಸಿ ಆತನನ್ನು "ಹೊಲಿ ಕೊಟ್ರೋ ಬಲಿ ಕೊಟ್ರೋ ಬಲೀಂದ್ರ ದೇವರು ತಮ್ ರಾಜ್ಯಕ್ಕೆ ತಾವೇ ಬಾ. ಕೂ.. ಕೂ.. ಕೂ?" ಎಂದು ಕರೆದು ಆಹ್ವಾನಿಸುತ್ತಾರೆ. ಜಾರುರವರು ಹೇಳುವಂತೆ ಆತ ನಿಜವಾದ ಜನಾನುರಾಗಿ ಮಣ್ಣಿನ ಮಗನಾಗಿದ್ದ ಕಾರಣಕ್ಕೇ ಈ ಭಾಗದಲ್ಲಿ ಆತ ಇಂತಹ ಆಚರಣೆಗಳ ಮೂಲಕ ಜನ ಮನದಲ್ಲಿ ಇಂದಿಗೂ ಅಮರನಾಗೇ ಚಾಲ್ತಿಯಲ್ಲಿದ್ದಾನೆ.

ಆರ್ಯರ ಆಕ್ರಮಣಕ್ಕೆ ಪ್ರತಿಯಾಗಿ ದಕ್ಷಿಣ(ಪಾತಾಳ)ಕ್ಕೆ ತುಳಿಯಲ್ಪಟ್ಟ ಪ್ರಹ್ಲಾದನ ಮೊಮ್ಮಗ ಬಲಿಚಕ್ರವರ್ತಿ ದಶಾವತಾರದ ಕಥೆಯಂತೆ ಪರಶುರಾಮನಿಗೂ ಹಿರಿಯ. ಇಂತಹ ಬಲಿ ಪರಶುರಾಮ ಕೇರಳ- ಕನ್ನಡ ಕರಾವಳಿ ಪ್ರದೇಶವನ್ನೊಳಗೊಂಡ ದಕ್ಷಿಣ ಭಾರತದ ಭಾಗವನ್ನು ಆಳಿಕೊಂಡಿದ್ದ. ಪರಶುರಾಮ ಕ್ಷತ್ರಿಯರನ್ನು ಯುದ್ಧದಲ್ಲಿ ಸದೆಬಡಿದು ಬ್ರಾಹ್ಮಣ ಪಾರಮ್ಯವನ್ನು ಮೆರೆದರೆ ಈ ತ್ರಿವಿಕ್ರಮನೆಂಬ ಬ್ರಾಹ್ಮಣ ತಂತ್ರಗಾರಿಕೆಯಿಂದ ಬಲಿಯಂತಹ ಶೂದ್ರನ ರಾಜ್ಯವನ್ನು ವಶಪಡಿಸಿಕೊಂಡಿದ್ದನು. ಆತನ ದಾನದ ನಿಷ್ಠೆಯನ್ನೇ ಹಿಡಿದುಕೊಂಡು ಬಲಿಯಂತಹ ಮಹಾಬಲಿಯನ್ನೇ ಪಿಡ್ಡಕ್ಕೆ ತಳ್ಳಿಬಿಟ್ಟಿದ್ದ ಈ ದುರ್ಬಲ ಬಾಲಕ. ಈ ಉತ್ಪ್ರೇಕ್ಷಿತ ಕಥೆಗಳನ್ನು ನೇರವಾಗಿ ತೆಗೆದುಕೊಳ್ಳಲಾಗದಿದ್ದರೂ ಮೂಲ ಪುರಾಣಗಳಲ್ಲೇ ಇರುವ (ಸಹ್ಯಾದ್ರಿ ಖಂಡದಂತಹ ಹೊಸ ಸೇರ್ಪಡೆಯಲ್ಲ) ಈ ಕಥೆಯ ಒಳಾರ್ಥವನ್ನು ಗ್ರಹಿಸಿಕೊಳ್ಳುವುದು ಕಷ್ಟವೇನಲ್ಲ, ಬಲಿ ನಿಜಕ್ಕೂ ತುಳಿತಕ್ಕೆ ಯೋಗ್ಯನಾದವನಾಗಿದ್ದರೆ ಅಂತವನನ್ನು ಜನ ಖಂಡಿತಾ ಇಂದಿಗೂ ನೆನೆಸಿಕೊಳ್ಳುತ್ತಿರಲಿಲ್ಲ.

ಈ ಕಥೆಯ ಹಿಂದೆ ಒಂದು ಅಮಾಯಕ "ಬಲಿ" ದಾನದ ದಾರುಣ ಕಥೆಯಿದ್ದಿರಲೇಬೇಕು. ಓದಿಸಿದರೂ ದಕ್ಷಿಣದ ಜನರ ಆಚರಣೆ ಮೂಲಕ ಜೀವಂತವಿರುವ ಬಲಿಗೆ ಪ್ರತಿಯಾಗಿ ಸಹ್ಯಾದ್ರಿಖಂಡದ ಕೊಡಲಿ ಕಥೆ ನಂತರ ಹುಟ್ಟಿಕೊಂಡಿತು. ಈ ಪರಿಸರದ ಭೂಮಿಯೆಲ್ಲ ಸಮುದ್ರವನೊಬ್ಬನ ಸೃಷ್ಟಿ ಎಂದು ಪುರಾಣದಲ್ಲೇ ಹೇಳಲ್ಪಟ್ಟಿದೆ ಎಂದು ಪ್ರಚಾರ ಮಾಡಿದರೆ ಯಾರೂ ಬಾಯಿತೆರೆಯದಂತಹ ಪ್ರಶ್ನಾತೀತ ಅಧಿಕಾರ ಅನಾಯಾಸವಾಗಿ ತಮಗೆ ದೊರೆಯುತ್ತದೆಂಬುದೇ ಈ ಕಥೆಯ ಹಿಂದಿದ್ದ ಹುನ್ನಾರವಾಗಿತ್ತು. (ಕರಾವಳಿಯ ಹಿಂದೂ ಸಮಾವೇಶಗಳಲ್ಲಿ, ಶೂದ್ರ ಭಜರಂಗಿಗಳಿಗೆ ಸಂಬಂಧವಿಲ್ಲದಿದ್ದರೂ ಅಮಾಯಕ ಕ್ಷತ್ರಿಯ ಹಿಂದೂಗಳನ್ನೇ ಕ್ರೂರವಾಗಿ ಕೊಂದ ಪರಶುರಾಮನ ಬ್ಯಾನರ್ ಪ್ರಚಾರಕ್ಕೆ ಬೇಕೇಬೇಕು. ಬ್ರಾಹ್ಮಣ ಅರ್ಚಕ ನೊಬ್ಬನಿಂದ ಪ್ರಸಾದ ಎಸೆಯಿಸಿಕೊಂಡು ಅವಮಾನಕ್ಕೊಳಗಾದ ಬಂಟ ಸ್ವಾಮಿಯೊಬ್ಬರು ಇತೀಚೆಗೆ ಒಡಿಯೂರಲ್ಲಿ 'ತುಳುನಾಡ ಹಬ್ಬ' ಆಚರಿಸಿದ್ದರು. ಆ ಸಮಾರಂಭದ ಕರಪತ್ರ, ಬ್ಯಾನರ್, ವೇದಿಕೆಗಳಲ್ಲೆಲ್ಲ ವಿಜೃಂಭಿಸಿದ್ದು ಇದೇ ಪರಶುರಾಮನ ಚಿತ್ರ. ಎಂಥಾ ಚೋದ್ಯವಲ್ಲವೇ..?)

ಹೇಳಿಕೇಳಿ ಪರಶುರಾಮ ಉತ್ತರದವನು. ಪುರಾಣದಲ್ಲಿ



ಬರುವ ಆತನ ಕಥೆಯೆಲ್ಲವೂ ಉತ್ತರ ಭಾರತಕ್ಕೆ ಸಂಬಂಧಿಸಿದವುಗಳೇ ಆಗಿವೆ. ಆದರೂ ಈತನ ಹಾವಳಿ ಕರ್ನಾಟಕದಲ್ಲೇ ಹೆಚ್ಚು, ಚಂದ್ರಗುತ್ತಿ ಬೆತ್ತಲೆ ಸೇವೆ, ಸವದತ್ತಿ ಎಲ್ಲಮ್ಮನ ಹೆಸರಿನ ದೇವದಾಸಿಯೆಂಬ ಅನಿಷ್ಟ ಮೊದಲಾದವುಗಳೆಲ್ಲ ಈತ ತಲೆಕಡಿದಿದ್ದ ಈತನ ತಾಯಿ ರೇಣುಕಾಂಬೆಯ ಹೆಸರಲ್ಲೇ ನಡೆಯುತ್ತವೆ. ತುಳು-ಮಲಯಾಳಿಗಳ ಪರಶುರಾಮ ಸೃಷ್ಟಿಯ ನೆಲದ ಹಂಗಿನ ಕಥೆ ಬಿಡಿ ಇನ್ನೂ ವಿಚಿತ್ರವೆಂದರೆ ಆತ ಅಪ್ಪಟ ಕನ್ನಡ ಭಾಷಿಕ ಎನ್ನುವುದು ನಿಮಗೆ ಗೊತ್ತೆ?

ತೀರ್ಥಹಳ್ಳಿ ಎಂಬ ಹೆಸರು ಬಂದಿದ್ದೇ ಈತನಿಂದಾಗಿ ಅಂತೆ. ಇಲ್ಲಿನ ಕೆರೆಯಲ್ಲಿ ಪರಶುರಾಮ ಕ್ಷತ್ರಿಯರನ್ನು ಕೊಂದ ತನ್ನ ರಕ್ತಸಿಕ್ತ ಕತ್ತಿ ತೊಳೆದು "ಇಲ್ಲಿಗೆ ತೀರಿತು" ಎಂದದ್ದಕ್ಕೆ ಅದು ತೀರ್ಥಹಳ್ಳಿ ಆಯಿತಂತೆ. ಜನರನ್ನು ಮಂಗ ಮಾಡುವ ವೈದಿಕರ ಅಡಗೂಲಜ್ಜಿ ಕಥೆಗಳಿಗೆ, ಅವರ ಕಲ್ಪನಾ ಶಕ್ತಿಗೆ ನಮೋ.. ನಮೋ.. ಎನ್ನದೇ ಇರಲಾದೀತೆ?

-ಅವಿನಾಶ್ ಎಂ.ಎಸ್. ನೆಲ್ಲಿಕಾರ್

ಹಿಂದಿನ ವಾರ ಶಶಿ ಪುತ್ತೂರು ಮತ್ತು ಈ ವಾ ಪ್ರವೀಣ್ ಎಸ್ ಶೆಟ್ಟಿ ಇವರಿಬ್ಬರ ಲೇಖನಗ ಕರಾವಳಿಯಲ್ಲಿ ನಯವಾಗಿ ನಡೆಯುತ್ತಿರ ಬ್ರಾಹ್ಮಣೀಕರಣದ ಬಗ್ಗೆ ನೈಜ ಚಿತ್ರಣ ಕೊಟ್ಟಿ ವಿಚಿತ್ರವೆಂದರೆ ವೈದಿಕರು ಬ್ರಾಹ್ಮಣ ಜಾತಿಯ ಪರವ ಮತ್ತು ಶೂದ್ರ ಜಾತಿಗಳ ವಿರುದ್ಧವಾಗಿ ಕಟ್ಟಿರುವ ಕಾಲ್ಪ ಕಥೆಗಳನ್ನು ನಿಜವೆಂದು ನಂಬಿ ಅವುಗಳನ್ನು ಎಲ್ಲೆಡೆ ಪ್ರಚ ಮಾಡುತ್ತಿರುವವರು ಸ್ವತಃ ಶೂದ್ರರೇ ವಿನಃ ಬ್ರಾಹ್ಮಣರ ಕಟ್ಟಾ ಬ್ರಾಹ್ಮಣನಾದ ಪರಶುರಾಮನು ಕ್ಷತ್ರೀಯ ದ್ವೇ ಆಗಿದ್ದ ಎಂದು ಕಥೆಯಲ್ಲಿ ಹೇಳಿದ್ದರೂ ಈ ಕಟ್ಟುಕಥೆಯ ಬ್ರಾಹ್ಮಣರಿಗಿಂತ ಹೆಚ್ಚಾಗಿ ಕ್ಷತ್ರೀಯ-ಶೂದ್ರ ವರ್ಗದ ಹೆಚ್ಚು ಪ್ರಚಾರ ಮಾಡುತ್ತಿರುವುದು ವಿಪರ್ಯಾಸ. ಅ ಪ್ರಕಾರ ದೇವರೂ ಸಂಕುಚಿತ ಬುದ್ಧಿಯ ಜಾತಿವ ಎಂದು ಹೇಳುವ ಇನ್ನೊಂದು ಕಟ್ಟು ಕಥೆ ಇಲ್ಲಿ ಬ ಪ್ರಚಾರವಾಗಿದೆ. ಅದನ್ನೂ ಶೂದ್ರರೇ ಹೆಚ್ಚು ನಿಜವೆ ನಂಬಿ ಅತಿಯಾಗಿ ಪ್ರಚಾರ ಮಾಡುತ್ತಿದ್ದಾರೆ.

ಮಂಗಳೂರು ಹತ್ತಿರ ಸಸಿಹಿತ್ಲು ಎಂಬ ಊ ಭಗವತಿ ಅಮ್ಮನವರ ಪ್ರಸಿದ್ಧ ದೇವಾಲಯವಿದೆ. ದೇವಸ್ಥಾನದ ಕ್ಷೇತ್ರ ಪುರಾಣದ ಪ್ರಕಾರ ಏಳು ಅಕ್ಕ-ತಂಗಿ ದೇವಿಯರು ಭೂಲೋಕಕ್ಕೆ ಬಂದು ದಕ್ಷಿ ಕಡೆಗೆ ಒಟ್ಟಿಗೆ ನಡೆದುಕೊಂಡು ಹೋಗು ಎಲ್ಲರಿಗಿಂತ ಚಿಕ್ಕವಳಾಗಿದ್ದ ಭಗವತಿ ಎಂಬ ದೇ ಬಾಯಾರಿಕೆಯಾಗು ತ್ತದೆ. ಇತರೆ ಆರು ದೇವಿ ಆಕ್ಷೇಪಿಸಿದರೂ ಭಗವತಿಯು ಸಸಿಹಿತ್ಲು ಎಂಬ ಸ್ಥ ಮೀನುಗಾರ (ಮೊಗವೀರರ) ಜಾತಿಯವರ ಮನೆ ಸೀಯಾಳ ಕುಡಿದಳಂತೆ. ಅದಕ್ಕಾಗಿ ಉಳಿದ ದೇವಿಯರು ಸಿಟ್ಟಾಗಿ ಅವಳನ್ನು ಅಲ್ಲಿಯೇ ಕೇವಲ ಶೂದ್ರರಿಂದ ಪೂಜೆಗೊಳ್ಳುವಂತೆ ಶಪಿಸಿ ಮ ಹೋದರಂತೆ. ಹಾಗಾಗಿ ಕೆಳ ಜಾತಿಯವ ಪೂಜೆಗೊಳ್ಳುತ್ತಾ ಭಗವತಿದೇವಿ ಅಲ್ಲಿಯೇ ನೆಲೆಸಿದ

ಈ ಕಟ್ಟು ಕಥೆಯ ತಾತ್ಪರ್ಯವೆಂದರೆ ದೇವಿಯ ಜಾತಿವಿಜಾತಿ ನೋಡಿ ನೀರು ಕುಡಿಯುತ್ತಾರೆ ಎಂಬ ಕೆಳಜಾತಿಯವರ ಮನೆಯಲ್ಲಿ ಪ್ರಕೃತಿಯ ಉತ್ಕೃಷ್ಟ ಉತ್ಪನ್ನವಾದ ಸೀಯಾಳವನ್ನು ಕುಡಿಯುವುದೂ ಈ ಕಾಲ್ಪನಿಕ ಕಥೆಯು ಆರು ಜನ ದೇವಿಯರು ಶೂ ಘೋರವಾಗಿ ಅಪಮಾನಿಸುವ ಕತೆಯಾದರೂ ಶೂ ಇದನ್ನು ಹೆಮ್ಮೆಯಿಂದ ಹೇಳಿಕೊಂಡು ತಿರುಗಾಡು

ಪರಶುರಾಮ ಸೃಷ್ಟಿಯ ಕಥೆ ಸಹ ಎಲ್ಲ ಕ್ಷತ್ರೀಯ ಸಾರಾಸಗಟಾಗಿ ಅಪಮಾನಿಸುವ ಕಥೆಯಾದರೂ ಕ್ಷ ವರ್ಗದಲ್ಲಿ ಬರುವ ಜಾತಿಗಳವರೇ ತಮ್ಮ ಜಾತಿ ಸ ಪತ್ರಿಕೆಗಳಲ್ಲಿ ಈ ಕಥೆಗೆ ಹೆಚ್ಚು ಪ್ರಚಾರ ಕೊಡುತ್ತಿರ ಹೀಗಿರುವಾಗ ಕರಾವಳಿಯ ಬ್ರಾಹ್ಮಣೀಕರಣಕ್ಕೆ ಇಂಬು ಕೊಡುತ್ತಿರುವುದು ಶೂದ್ರರೇ.

ಕಟೀಲು ದುರ್ಗಾಪರಮೇಶ್ವರಿ ದೇವಾಲ


ಬಾಲಿವುಡ್ ಅಜ್ಜಿ ಕಣ್ಮರೆ

'ಹಮ್ ದಿಲ್ ದೇ ಚುಕೆ ಸನಮ್', 'ದಿಲ್ಲಗಿ', 'ದಿಲ್ ಸೆ', 'ಕ್ವಾಯಿಶ್', 'ಕಲ್ ಹೋ ನ ಹೋ', 'ವೀರ್ ಝರಾ', 'ಚೀನೀ ಕಮ್', 'ಸಾವರಿಯಾ' ಚಿತ್ರಗಳು ಸೇರಿದಂತೆ ಅನೇಕ ಸಿನಿಮಾಗಳಲ್ಲಿ ನಟಿಸಿ, 'ಬಾಜ', 'ಅವಾರಾ' ತರಹದ ಸಿನಿಮಾಗಳಿಗೆ ನೃತ್ಯ ಸಂಯೋಜಿಸಿ ಇತ್ತೀಚೆಗಷ್ಟೇ ತಮ್ಮ 102ನೇ ವಯಸ್ಸಿನಲ್ಲಿ ತೀರಿಕೊಂಡ ಹಿರಿಯನಟಿ, ನರ್ತಕಿ, ನೃತ್ಯ ನಿರ್ದೇಶಕಿ ಜೊಹ್ರಾ ಸೆಹಗಲ್ ಕುರಿತಂತೆ ಹೀಗೊಂದು ಬರಹ...

ನಟಿ, ನರ್ತಕಿ, ನೃತ್ಯ ನಿರ್ದೇಶಕಿ ಜೊಹ್ರಾ ಸೆಹಗಲ್ ಮೊನ್ನೆ ದೆಹಲಿಯಲ್ಲಿ ತೀರಿಕೊಂಡ ಕೆಲವೇ ಗಂಟೆಗಳಲ್ಲಿ ಆಕೆಯ ಸಾವಿನ ಸುದ್ದಿ ದೇಶದೆಲ್ಲೆಡೆ ಹಬ್ಬಿ 'ಅಯ್ಯೋ' ಎನ್ನುವಂತೆ ಮಾಡಿತ್ತು. 102ನೇ ವಯಸ್ಸಿನಲ್ಲಿ ತೀರಿಕೊಂಡ ಜೊಹ್ರಾ ಅದ್ಭುತ ನಟಿ, ಅಪಾರ ಜೀವನಪ್ರೀತಿ ಹೊಂದಿದ್ದ ಚೇತನ. ತನ್ನ ಕಟ್ಟಕಡೆಯ ದಿನಗಳವರೆಗೂ ಚಲುವಿಕೆಯಿಂದಿದ್ದ, ಬದುಕಿನ ಒಂದೊಂದು ಕ್ಷಣವನ್ನೂ ಪುಟ್ಟ ಮಗುವಿನಂತೆ ಖುಷಿಯಿಂದ ಅನುಭವಿಸುತ್ತಿದ್ದ ಜೊಹ್ರಾ ಸ್ಮರಿಸಿಕೊಳ್ಳಲೇಬೇಕಾದ ಹೆಂಗಸು.

ಮೊದಲು ಉದಯ್ ಶಂಕರ್ ತಂಡದಲ್ಲಿ ನರ್ತಕಿಯಾಗಿದ್ದ ಈ ಹೆಣ್ಣುಜೀವ ತನ್ನ ಎರಡನೆಯ ವಯಸ್ಸಿನಲ್ಲಿಯೇ ತನ್ನ ಎಡಗಣ್ಣು ಕಳೆದುಕೊಂಡಿತ್ತು, ನೋಡಲು ಈಕೆ ಅಷ್ಟೇನೂ ಚೆನ್ನಾಗಿ ಕಾಣುತ್ತಿರಲಿಲ್ಲ, ಯೂರೋಪಿನ ಮಾಡ್ರನ್ ಡಾನ್ಸ್ ಕಲಿತು, ಉದಯ್ ಶಂಕರ್ ತಂಡದೊಂದಿಗೆ ಯೂರೋಪ್, ಜಪಾನ್, ಈಜಿಪ್ಟ್, ಅಮೆರಿಕಾಗಳಲ್ಲಿ ತನ್ನ ನೃತ್ಯಪ್ರತಿಭೆಯನ್ನು ತೋರಿಸಿ ಭಾರತೀಯ ರಂಗಭೂಮಿಗೆ ಮರಳಿ 'ಪೃಥ್ವಿ ಥಿಯೇಟರ್' ಮುಖೇನ ದೇಶಾದ್ಯಂತ ತಿರುಗಿ ನೃತ್ಯದ ಜೊತೆಗೆ ನಟನೆಯನ್ನೂ ಮಾಡಿದ ಈ ಹುಡುಗಿ ಇದ್ದಕ್ಕಿದ್ದಂತೆ 'ಧರ್ತಿ ಕೆ ಲಾಲ್' ಎಂಬ ಸಿನಿಮಾದಲ್ಲಿ 1946ರಲ್ಲಿ ಚಿತ್ರನಟಿಯಾದಳು.

'ಧರ್ತಿ ಕೆ ಲಾಲ್' ಚಿತ್ರದಿಂದ ಹಿಡಿದು ಆಕೆಯ ಇತ್ತೀಚಿನ ಸಿನಿಮಾ 'ಸಾವರಿಯಾ'ವರೆಗೆ ಜೊಹ್ರಾ ಸೆಹಗಲ್ ತನ್ನ ವಿಶಿಷ್ಟ ಅಭಿನಯ, ಬಾಡಿ ಲಾಂಗ್ವೇಜ್, ಡೈಲಾಗ್ ಹೇಳುವ ವಿಧಾನಗಳಿಂದ ಇಡೀ ಭಾರತವನ್ನೇ ಸೆಳೆದಳು. ನಟಿಸಬಲ್ಲ, ನರ್ತಿಸಬಲ್ಲ ಈ ನಟಿಗೆ ಹೊಸಬಗೆಯ ಇಮೇಜು ತಂದುಕೊಟ್ಟದ್ದು 'ದಿಲ್ ಸೆ', 'ಹಮ್ ದಿಲ್ ದೇ ಚುಕೆ ಸನಮ್', 'ದಿಲ್ಲಗಿ' ತರಹದ ಚಿತ್ರಗಳು. ಈ ಚಿತ್ರಗಳು ತೆರೆಗೆ ಬಂದ ನಂತರ ಆವರೆಗೆ ಕಾಣಸಿಗದ ರೊಹ್ರಾ ಸೆಹಗಲ್ ಭಾರತೀಯರಿಗೆ ಸಿಕ್ಕಳು. ಅಲ್ಲಿಂದಾಚೆಗೆ 'ಬೆಂಡ್ ಇಟ್ ಲೈಕ್ ಬೆಕ್‌ಹ್ಯಾಮ್', ವಿ.ಎಸ್.ನೈಪಾಲ್ ಕಾದಂಬರಿಯಾಧಾರಿತ ಚಿತ್ರ 'ದಿ ಮಿಸ್ಟಿಕ್ ಮೆಶೂರ್' ಥರದ ಸಿನಿಮಾದಲ್ಲಿ ನಟಿಸಿದಳು. ತನ್ನ ಸೂಜಿಗಲ್ಲಿನ ಸೆಳೆತ, ಪಾತ್ರದೊಳಗಿನ ತಲ್ಲೀನತೆ ಮತ್ತು ಸಹಜ ಅಭಿನಯದಿಂದ



ಪ್ರೇಕ್ಷಕರನ್ನು ಮಂತ್ರಮುಗ್ಧಳನ್ನಾಗಿಸಿದ್ದಳು. 'ಚಲೋ ಇಶ್ಕ್ ಲಡಾಯೇ' ಚಿತ್ರದಲ್ಲಂತೂ ಆಕೆ ಬೈಕು ಸವಾರಿ, ಕೇಡಿಗಳೊಂದಿಗೆ ಹೊಡೆದಾಡುವ ದೃಶ್ಯಗಳ ಮೂಲಕ ಭೇಷ್ ಎನಿಸಿಕೊಂಡಿದ್ದಳು. ಆಮೇಲೆ 'ವೀರ್ ಝರಾ', 'ಚೀನೀ ಕಮ್', 'ಸಾವರಿಯಾ' ಮುಂತಾದ ಚಿತ್ರಗಳ ಮೂಲಕ ಮತ್ತಷ್ಟು ಜನಪ್ರಿಯಳಾದಳು. ಮಿಗಿಲಾಗಿ 'ಬಾಲಿವುಡ್ಡಿನ ಅಜ್ಜಿ' ಎಂಬ ಖ್ಯಾತಿ ಪಡೆದಳು.

ನಟನೆ, ನೃತ್ಯದ ಜೊತೆಜೊತೆಗೆ ರೊಹ್ರಾ ಅನೇಕ ಸಿನಿಮಾಗಳಿಗೆ ನೃತ್ಯ ನಿರ್ದೇಶನವನ್ನೂ ಮಾಡಿದ್ದಳು; ಗುರುದತ್ತರ 'ಬಾಜಿ' ಹಾಗೂ ರಾಜ್ ಕಪೂರರ 'ಅವಾರಾ' ಅವುಗಳ ಪೈಕಿ ಪ್ರಮುಖವಾದುವು. ತಾನು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ಶ್ರದ್ಧೆ, ಏಕಾಗ್ರತೆಯನ್ನು ರೂಢಿಸಿಕೊಳ್ಳಬಲ್ಲ ತಾಕತ್ತು ಆಕೆಗಿತ್ತು.

ಆಕೆ ಮದುವೆಯಾದದ್ದು ಕಾಮೇಶ್ವರ್ ಸೆಹಗಲ್ ಎಂಬಾತನನ್ನು; ಇಂದೋರ್ ಮೂಲದ ಕಾಮೇಶ್ವರ್ ಎಂಬ ಈ ಗಂಡಸು ಚಿತ್ರಕಾರ, ನಾಟ್ಯಪಟು ಹಾಗೂ ವಿಜ್ಞಾನಿ. 14 ಆಗಸ್ಟ್ 1942ರಂದು ನಡೆದ ಈ ಇವರ ಮದುವೆಗೆ ಜವಾಹರಲಾಲ್ ನೆಹರು ಭಾಗವಹಿಸಬೇಕಿತ್ತು, ಮಹಾತ್ಮ ಗಾಂಧಿ ಕೈಗೊಂಡಿದ್ದ 'ಕ್ವಿಟ್ ಇಂಡಿಯಾ ಚಳವಳಿ' ನಿಮಿತ್ತ ಮದುವೆಗೆ ಕೆಲವೇ ದಿನಗಳ ಹಿಂದೆಯಷ್ಟೇ ನೆಹರು ಕೆಲದಿನಗಳ ಮಟ್ಟಿಗೆ ಬಂಧನಕ್ಕೊಳಗಾಗಿ ಸೆರೆವಾಸದಲ್ಲಿದ್ದುದರಿಂದ ಈ ಮದುವೆಗೆ ಹಾಜರಾಗಲಿಲ್ಲ.

ಇಷ್ಟಕ್ಕೂ ಜೊಹ್ರಾ, ಕಾಮೇಶ್ವರ್‌ಗೆ ಒಲಿದದ್ದು ಆತನ ನೃತ್ಯಕಲೆ ನೋಡಿ. ಆತನೊಡಗೂಡಿ ಅಲ್ಮೋರಾದ 'ಉದಯ್‌ಸ್ ಡಾನ್ಸ್ ಇನ್ಸ್ಟಿಟ್ಯೂಟ್'ನಲ್ಲಿ ಕೆಲಸ ಮಾಡಿದಳು. ಇಬ್ಬರೂ ಪ್ರಸಿದ್ಧ ನೃತ್ಯ ನಿರ್ದೇಶಕರಾದರು. ಕಾಮೇಶ್ವರ್ ಹೆಂಗಸರಿಗಾಗಿ 'ಲೋಟಸ್ ಡಾನ್ಸ್' ಎಂಬ ವಿನೂತನ ಡಾನ್ಸ್ ಪ್ರಕಾರವನ್ನು ಪರಿಶೋಧಿಸಿದ. ಗಂಡನೊಡಗೂಡಿ ತಾನೂ ಅದನ್ನು ಪ್ರೊಮೋಟ್ ಮಾಡಿದಳು. ಉತ್ತುಂಗಕ್ಕೇರಿದ್ದ ಅದರ ಜನಪ್ರಿಯತೆ ಕುಗ್ಗುತ್ತಿದ್ದಂತೆಯೇ ಲಾಹೋರಿಗೆ ಹೋಗಿ ತಮ್ಮದೇ ಸ್ವಂತದ್ದೊಂದು ಇನ್ಸ್ಟಿಟ್ಯೂಟ್ ಕಟ್ಟಿಕೊಂಡರು. ದೇಶ ವಿಭಜನೆಯ ನಂತರ ಈ ದಂಪತಿಗಳು ಲಾಹೋರ್ ತೊರೆದು ಮುಂಬಯಿಗೆ ಬರಬೇಕಾಯಿತು. 1959 ರಲ್ಲಿ ಗಂಡ ತೀರಿಕೊಂಡ ಬಳಿಕ ಜೊಹ್ರಾ ದೆಹಲಿಗೆ ತೆರಳಿ ಹೊಸದಾಗಿ ಆರಂಭವಾಗಿದ್ದ ನಾಟ್ಯ ಅಕಾಡೆಮಿಯ ನಿರ್ದೇಶಕಿಯಾದಳು.

ಇಷ್ಟಕ್ಕೇ ಸೀಮಿತವಾಗುವಂತಿದ್ದರೆ, ಜೊಹ್ರಾ ಸೆಹಗಲ್ ಒಬ್ಬ ನಟಿ ಅಥವಾ ನೃತ್ಯ ನಿರ್ದೇಶಕಿಯಾಗಿದ್ದರೆ ಈ ಬರಹದ ಅಗತ್ಯವಿರಲಿಲ್ಲ, ವ್ಯಕ್ತಿಯಾಗಿಯೂ ಜೊಹ್ರಾ ಇತರರಿಗೆ ಮಾದರಿ. ಈಕೆ ರಂಗಭೂಮಿ, ಕಿರುತೆರೆ, ಹಿರಿತೆರೆಯ ಮೇಲೆ ಕಾಣಿಸಿಕೊಳ್ಳುವುದಕ್ಕಿಂತ ಭಿನ್ನವಾದ ಆದರ್ಶ ವ್ಯಕ್ತಿತ್ವ ಹೊಂದಿದ್ದ ಹೆಂಗಸು. ಸಂಪ್ರದಾಯಸ್ಥ ಮುಸ್ಲಿಂ ಕುಟುಂಬದ ವಾತಾವರಣದಲ್ಲಿ ಹುಟ್ಟಿ, ಬೆಳೆದ ಈಕೆ ತನ್ನ ಮನಸಿನ ಇಂಗಿತದಂತೆ ವರ್ತಿಸಿದ ರೆಬೆಲ್ ಹೆಣ್ಣು: ಕಟ್ಟುನಿಟ್ಟಾಗಿ ಬುರ್ಖಾ ಧರಿಸಬೇಕಿದ್ದ ಲಾಹೋರಿನ ಕ್ವೀನ್ ಮೇರಿ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಈಕೆ ಲೇಡಿ ಪೈಲಟ್ ಆಗಬೇಕೆಂಬ ಸಹೋದರನ ಆಸೆಯನ್ನು ನಿರಾಕರಿಸಿ ನಟಿಯಾಗಬಯಸಿ ಬ್ರಿಟಿಷ್ ನಟನೊಬ್ಬನ ಬಳಿ ಕಲಿಕೆ ಆರಂಭಿಸಲು ಎಡಿಂಗ್‌ಬರ್ಗ್‌ನಲ್ಲಿ ವಾಸವಿದ್ದ ತನ್ನ ಹಿರಿಯ ಸಂಬಂಧಿಯೊಬ್ಬರ ಸಹಾಯ ಪಡೆದಳು. ತನ್ನ ಸಂಬಂಧಿಯೊಂದಿಗೆ ಲಾಹೋರಿನಿಂದ ಹೊರಟು ಇರಾನ್, ಪ್ಯಾಲೆಸ್ಟೈನ್, ಈಜಿಪ್ಟ್ ಮೂಲಕ ಸಿರಿಯಾ ತಲುಪಿದಳು. ಸಿರಿಯಾದಲ್ಲಿ ತನ್ನ ಸಂಬಂಧಿಯ ಗರ್ಲ್ ಫ್ರೆಂಡ್‌ಳನ್ನು ಭೇಟಿಯಾಗಿದಳು. ಆಕೆಯ ಮಾರ್ಗದರ್ಶನದಲ್ಲಿ ಜರ್ಮನಿಯ ಬ್ಯಾಲೆಟ್ ಸ್ಕೂಲೊಂದಕ್ಕೆ ಸೇರಿದಳು. ಬುರ್ಖಾ ಧರಿಸುತ್ತಿದ್ದ ಈ ಹುಡುಗಿ ಜರ್ಮನಿಯಲ್ಲಿ ಮೂರು ವರ್ಷ ಕಳೆಯುವುದರೊಳಗೆ ಬಿಕಿನಿ ಧರಿಸುವಷ್ಟು ಮುಂದುವರಿಯುವುದು, ಮುಂದೊಮ್ಮೆ ತನ್ನ ನಟನೆ, ನೃತ್ಯದ ಮೂಲಕ ಅಖಂಡ ಭಾರತವನ್ನೇ ತನ್ನೆಡೆಗೆ ಸೆಳೆಯುವುದು ನಿಜಕ್ಕೂ ಕ್ರಾಂತಿಕಾರಿ ಬೆಳವಣಿಗೆ.

ಸಂಗೀತ ನಾಟಕ ಅಕಾಡೆಮಿ ಅವಾರ್ಡ್, ಪದ್ಮಶ್ರೀ, ಕಾಳಿದಾಸ ಸಮ್ಮಾನ್, ಪದ್ಮಭೂಷಣ, ಸಂಗೀತ ನಾಟಕ ಅಕಾಡೆಮಿ ಫೆಲೋಶಿಪ್, ಪದ್ಮವಿಭೂಷಣದಂತಹ ಪ್ರತಿಷ್ಠಿತ ಪ್ರಶಸ್ತಿಗಳನ್ನು ಗಳಿಸಿರುವ ಈ ಸಾಧಕಿ ಮನಸು ಮಾಡಿದ್ದರೆ ಇನ್ನೂ ಹೆಚ್ಚಿನದನ್ನು ಪಡೆಯಬಹುದಿತ್ತು, ಆದರೆ ಈ ಮಹಾನ್ ಕಲಾವಿದೆ ಬದುಕಿನ ಒಂದೊಂದು ಸೆಕೆಂಡನ್ನೂ ಪ್ರೀತಿಯಿಂದ, ಪ್ರಾಮಾಣಿಕತೆಯಿಂದ ಬದುಕಲು ಯತ್ನಿಸಿದಳು. ತಾನೂ ನಗುತ್ತಾ ಅಕ್ಕಪಕ್ಕದವರನ್ನೂ ನಗಿಸುತ್ತಾ ತನ್ನ ಬಾಳಜೋಳಿಗೆಯ ತುಂಬ ಖುಷಿಯನ್ನೇ ತುಂಬಿಕೊಳ್ಳಲು, ತುಂಬಿಕೊಂಡಿದ್ದನ್ನು ಎಲ್ಲರಿಗೂ ಹಂಚುವ ಪ್ರಯತ್ನ ಮಾಡಿದಳು. ಎಲ್ಲಾ ತೋರಿಕೆಗಳು, ಎಲ್ಲಾ ಆಡಂಬರಗಳು ಕ್ಷುಲ್ಲಕವೆಂದು ಭಾವಿಸಿದಳು. ಸರ್ಕಾರ ಕೊಡಬಯಸಿದ ಫ್ಲಾಟನ್ನು ನಿರಾಕರಿಸಿದಳು. ಐವತ್ತಕ್ಕೂ ಹೆಚ್ಚು ಸಿನಿಮಾಗಳನ್ನು ನಮಗಾಗಿ ಕೊಟ್ಟು, ತನ್ನ ಉತ್ಕಟ ಮನಸ್ಸು, ಉಲ್ಲಸಿತ ಬದುಕನ್ನು ಬರೋಬ್ಬರಿ ಒಂದು ಶತಮಾನ ತುಂಬಿಕೊಟ್ಟು ಸರನೆ ಎಳೆದುಹೋದಳು.

● ಹೃದಯಶಿವ



...ನೈದು ಶತಮಾನಗಳಿಂದ ಆನುವಂಶಿಕ ಮುಕ್ತೇಸರ (...ರ್ಮದರ್ಶಿ) ಆಗಿದ್ದವರು ಎರಡು ಶೂದ್ರ ಜಮೀನುದಾರ ಮನೆತನದವರು. ಈ ದೇವಳ ಸರಕಾರದ ಮುಜರಾಯಿಯಡಿ ...ದಾಗ ಈ ಎರಡು ಮನೆತನಗಳಲ್ಲಿ ಯಾವ ಮನೆತನದ ...ಬ್ಬರು ಮುಕ್ತೇಸರ ಆಗಿ ಮುಂದುವರಿಯಬೇಕು ಎಂಬ ...ಶ್ನೆ ಎದ್ದಾಗ ಈ ಎರಡೂ ಶೂದ್ರ ಮನೆತನಗಳ ನಡುವೆ ...ವಾದ ಉಂಟಾಗಿ ಪರಿಸ್ಥಿತಿ ಕಗ್ಗಂಟಾಯಿತು. ಆಗ ತಾತ್ಕಾಲಿಕ ...ಪರಿಹಾರವೆಂದು ಕಾಂಪ್ರಾಮೈಸ್ ಹುದ್ದರಿಯಾಗಿ ದೇವಳದ ...ಬ್ರಾಹ್ಮಣ ಅರ್ಚಕನನ್ನೇ ಸದ್ಯಕ್ಕೆ ಆನುವಂಶಿಕ ಮುಕ್ತೇಸರ ...ಎಂದು ನಾಮಕರಣ ಮಾಡಿ ನಂತರ ಪೂರ್ಣವಾಗಿ ಚರ್ಚಿಸಿ ...ವಾದ ಪರಿಹರಿಸಿ ಮೊದಲಿದ್ದ ಎರಡು ಶೂದ್ರ ಮನೆತನಗಳಲ್ಲಿ ಒಬ್ಬರನ್ನು ಶಾಶ್ವತ ಮುಕ್ತೇಸರರನ್ನಾಗಿ ...ಮಾಡಲು ಆ ಇಬ್ಬರು ಮನೆತನಗಳವರು ಒಪ್ಪಿದರು. ಈ ...ತಾತ್ಕಾಲಿಕ ಹುದ್ದೆಯನ್ನು ರಾಜಕಾರಣಿಗಳ ಸಹಾಯದಿಂದ ...ತನಗೇ ಶಾಶ್ವತ ಮಾಡಿಕೊಂಡ ಅರ್ಚಕರು ಈಗ ಮೂರು ...ದಶಕಗಳ ನಂತರ ಈ ಕಟೀಲು ದೇವಸ್ಥಾನ ಶಾಶ್ವತವಾಗಿ ...ಬ್ರಾಹ್ಮಣರ ಕಪಿಮುಷ್ಟಿಯಲ್ಲಿ ಇರುವಂತೆ ನೋಡಿಕೊಂಡರು. ...ಗಾಗಿ ಆ ಎರಡು ಶೂದ್ರ ಮನೆತನಗಳ ಕೃಷಿಕರು ...ತಮ್ಮ ಬೆಳೆ-ಬೆಳೆಗಾಗಿ ಈಗ ಪ್ರತಿವರ್ಷ ದೇವರಿಗೆ ...ಅವಾಳ ಅಭಿಷೇಕ ಮಾಡಲು ಬ್ರಾಹ್ಮಣ ...ರ್ಚಕ-ಮುಕ್ತೇಸರರ ಮರ್ಜಿಗೆ ಕಾಯಬೇಕಾಗುತ್ತದೆ. ಇದು ...ಶೂದ್ರರೇ ತಮ್ಮ ಕಾಲ ಮೇಲೆ ತಾವೇ ಕೊಡಲಿ ...ಹಾಕಿಕೊಂಡಂತೆ ಆಗಿದೆ. ಇದರಲ್ಲಿ ತಪ್ಪು ಬ್ರಾಹ್ಮಣರದೇ ...ಅಥವಾ ತಮ್ಮತಮ್ಮಲ್ಲಿಯೇ ಕಾದಾಡುವ ಶೂದ್ರರದೇ?

-ವೀರಪ್ಪ ದಿ ನಾಯ್ಕ್, ಮಂಗಳೂರು

ಮಹಾಕಾಳಿಗೆ ನಿಜವಾಗಲೂ ಮುಕ್ತಿ

ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾದ ಅಂಬಲಪಾಡಿ ದೇವಳದ ಬಗೆಗಿನ ಲೇಖನ ಚೆನ್ನಾಗಿತ್ತು. ಶ್ರೀಯುತ ಬಲ್ಲಾಳರು ದೇವಳವನ್ನು ಖಾಸಗಿ ಮಾಡಿಕೊಂಡು ಕೋಟ್ಯಂತರ ರೂಪಾಯಿ ಸಾರ್ವಜನಿಕರ ಸಂಪತ್ತನ್ನು ಲೂಟಿ ಮಾಡುವ ಸಂಚಿಗೆ ಉಡುಪಿ ನ್ಯಾಯಾಲಯ ತಡೆ ಒಡ್ಡಿರುವುದು ಸರಿಯಾಗಿಯೇ ಇದೆ.

ಅಂಬಲಪಾಡಿ ದೇವಳವು ಅಂಬಲಪಾಡಿ ಸುತ್ತಲಿನ ಎಂಟು ಗ್ರಾಮಗಳಿಗೆ ಸೇರಿದ ಸಾರ್ವಜನಿಕ ದೇವಳವೆಂದು ಮೊದಲಿನಿಂದಲೂ ಅದಕ್ಕೆ ಲಕ್ಷಾಂತರ ಮಂದಿ ಸಾರ್ವಜನಿಕ ಭಕ್ತರಿರುವಾಗ, ಬಲ್ಲಾಳರು ಇದು ತಮ್ಮ ಕುಟುಂಬದ ದೇವಳವೆಂದು-ಖಾಸಗಿ ಮಾಡಬೇಕೆಂದು ಕೋರಿರುವುದು ಸಾರ್ವಜನಿಕರಿಗೆ ಎಸಗಿದ ದ್ರೋಹವೇ ಸರಿ. ಇಂತಹ ವ್ಯಕ್ತಿಗಳು ಒಂದು ದೇವಳದ ಮುಖ್ಯಸ್ಥರಾಗಿರಲು ಅನರ್ಹರು. ಇನ್ನಾದರೂ ಧಾರ್ಮಿಕ ದತ್ತಿ ಇಲಾಖೆ ಈ ದೇವಳಕ್ಕೆ ಕಾನೂನು ಪ್ರಕಾರ ಒಬ್ಬ ಕಾರ್ಯನಿರ್ವಾಹಕ ಅಧಿಕಾರಿ ನೇಮಿಸಿ-ದೇವಳದಲ್ಲಿ ಸೋರಿಕೆಯಾಗುತ್ತಿರುವ ಆದಾಯಕ್ಕೆ ತಡೆ ಒಡ್ಡುವರೇ?

-ಕರುಣಾ ಕೆ ರಾವ್, ಉಡುಪಿ

ಪತ್ರಿಕೆಯಲ್ಲಿ ಪ್ರಕಟವಾದ 'ಅಂಬಲಪಾಡಿ: ಮಹಾಕಾಳಿಗೆ ಬಲ್ಲಾಳರಿಂದ ಮುಕ್ತಿ!' ಲೇಖನವು ಚಾರಿತ್ರಿಕವಾಗಿದ್ದಿತು. ಸರ್ಕಾರದ ಜಮೀನಿನಲ್ಲಿ ಊರ ಸಾರ್ವಜನಿಕರಿಂದ ವಂತಿಗೆ ಸಂಗ್ರಹಿಸಿ ಸ್ಥಾಪಿಸಲ್ಪಟ್ಟ ಶ್ರೀ ಮಹಾಕಾಳಿ ದೇವಸ್ಥಾನವನ್ನು ತನ್ನದನ್ನಾಗಿಸುವ ವಿಜಯ ಬಲ್ಲಾಳರ ದುಷ್ಟ ಬುದ್ಧಿಗೆ ಮಹಾಕಾಳಿಯೇ ಉತ್ತರಿಸುತ್ತಾಳೆ. ಹಣ ಮಾಡುವ ಒಂದೇ ಒಂದು ಉದ್ದೇಶ ವಿಜಯ ಬಲ್ಲಾಳರದು ಎಂಬುದು ಸಾಬೀತಾಗಿದೆ. ದೇವಸ್ಥಾನದ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿಸದೇ 10 ವರ್ಷಕ್ಕೂ ಮೇಲಾಗಿದೆಯೆಂದು ನಂಬಲರ್ಹ ಮೂಲಗಳು ತಿಳಿಸುತ್ತವೆ.

ನಿರಂತರವಾಗಿ ದೇವರ ಹಣವನ್ನು ನುಂಗುತ್ತಿರುವ ಈ ಅಧರ್ಮದರ್ಶಿಯ ಮುಖವಾಡ ಬಯಲಾಗಬೇಕು. ಸರ್ಕಾರ ಕೂಡಲೇ ದೇವಸ್ಥಾನಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಅಲ್ಲಾದ ಎಲ್ಲಾ ಅವ್ಯವಹಾರಗಳನ್ನು ತನಿಖೆಗೊಳಪಡಿಸಬೇಕು. ಭಕ್ತರ ಹಣವನ್ನು ತಿಂದು ತೇಗುತ್ತಿರುವ ದೇವರ ಹೆಸರಲ್ಲಿ ಭಕ್ತರಿಗೆ ಭಯ ಹುಟ್ಟಿಸುತ್ತಿರುವ ವಿಜಯ ಬಲ್ಲಾಳರ ಸಂಪೂರ್ಣ ಕಥೆ ನಿಮ್ಮ ಪತ್ರಿಕೆಯ ಮೂಲಕವೇ ಅನಾವರಣಗೊಳ್ಳಬೇಕಾಗಿದೆ.

-ವಿಜಯಕುಮಾರ, ಕಾರ್ಕಳ

ನಾನು ನಿಮ್ಮ ತಂದೆಯ ಕಾಲದಲ್ಲಿ ಪತ್ರಿಕೆಯ ಕಟ್ಟಾ ಅಭಿಮಾನಿಯಾಗಿದ್ದೆ. ಆದರೆ ಅವರ ನಿಧನದ ನಂತರ ಪತ್ರಿಕೆಯನ್ನು ನಾನು ಎಂದೂ ಓದಿರಲಿಲ್ಲ, ಅದಕ್ಕೆ ಕಾರಣ ಲಂಕೇಶ್ ಅವರು ಇಲ್ಲದೆ ಪತ್ರಿಕೆಯೂ ಚೆನ್ನಾಗಿ ಇರುವುದಿಲ್ಲ ಎಂಬ ನನ್ನ ನಂಬಿಕೆ.

ಆದರೆ ಇತ್ತೀಚೆಗೆ ಆಕಸ್ಮಿಕವಾಗಿ ನಿಮ್ಮ ಪತ್ರಿಕೆಯ ಜುಲೈ 23ರ ಸಂಚಿಕೆಯನ್ನು ನೋಡಿ ಅಚ್ಚರಿಗೊಂಡೆ. ಪತ್ರಿಕೆಯಲ್ಲಿದ್ದ ಲೇಖನಗಳ ಗುಣಮಟ್ಟ ಲಂಕೇಶರ ದಿನಗಳನ್ನು ನೆನಪಿಗೆ ತಂದವು. ಇತ್ತೀಚೆಗೆ ಪತ್ರಿಕೆಗಳ ಮತ್ತು ಪತ್ರಕರ್ತರ ಬರವಣಿಗೆ ಶೈಲಿ ಕುಂದುತ್ತಿರುವಾಗ ನಿಮ್ಮ ಪತ್ರಿಕೆಯ ಬರಹಗಳಲ್ಲಿ ಶೈಲಿ, ಧೈರ್ಯ, ನಿಖರತೆ ಎಲ್ಲವೂ ಇರುವುದು ಶ್ಲಾಘನೀಯ. ಖಂಡಿತವಾಗಿಯೂ ಪತ್ರಿಕೆ ಲಂಕೇಶರು ಬಿಟ್ಟುಹೋಗಿದ್ದ ಶೂನ್ಯವನ್ನು ತುಂಬಿದೆ ಎಂದು ನನಗನ್ನಿಸಿತು.

ಈಗ ಉದ್ಯಮಿಗಳು ಮಾಧ್ಯಮಗಳನ್ನು ಕೊಂಡುಕೊಳ್ಳುತ್ತಿರುವಾಗ ಮತ್ತು ರಾಜಕೀಯ ಹಿತಾಸಕ್ತಿಗೆ ಮಾಧ್ಯಮಗಳು ತುತ್ತಾಗುತ್ತಿರುವಾಗ ನಿಮ್ಮ ಪತ್ರಿಕೆ ಅಧಿಕಾರದಲ್ಲಿರುವ ಪಕ್ಷ ಮತ್ತು ಇತರರ ಬಗ್ಗೆ ದಿಟ್ಟ ನಿಲುವು ಹೊಂದಿರುವುದು ಮೆಚ್ಚುವಂತಹದ್ದು.

ನಮ್ಮ ದೇಶದ ಮತದಾರರು ಮೋದಿಯಂತಹ ವ್ಯಕ್ತಿಯನ್ನು ಅಧಿಕಾರಕ್ಕೆ ಏರಿಸಿರುವುದು ನಾಚಿಕೆಗೇಡಿನ ಸಂಗತಿ. ಮೋದಿಯಿಂದಾಗಲಿ, ಆತನ ಭಂಟರಿಂದಾಗಲಿ ಯಾವುದೇ ಅಭಿವೃದ್ಧಿ ನಿರೀಕ್ಷಿಸುವುದು ಅಸಾಧ್ಯ.

ಮೋದಿ ಅಧಿಕಾರಕ್ಕೆ ಬಂದು ಒಂದು ತಿಂಗಳಾಗಿದೆ. ಆದರೆ ಅಷ್ಟರಲ್ಲೇ ಅವನ ತಂಡ ತನ್ನ ನೀಚ ಪ್ರವೃತ್ತಿಯನ್ನು - ಅನ್ಯಾಯ ಮತ್ತು ಕಾನೂನುಬಾಹಿರ ನಿಲುವನ್ನು - ತೋರಿಸಿದೆ. ಗೋಪಾಲ್ ಸುಬ್ರಹ್ಮಣ್ಯರು ಮತ್ತು ನಿಪೇಂದ್ರ ಮಿಶ್ರಾ ಪ್ರಕರಣಗಳು ನಮ್ಮ ದೇಶ ಎಂತಹ ಭ್ರಷ್ಟಾಧಿಭ್ರಷ್ಟ ದಿನಗಳತ್ತ ಸಾಗಿದೆ ಎಂಬುದನ್ನು ಸ್ಪಷ್ಟಪಡಿಸಿವೆ. ಓರ್ವ ಸರ್ವಾಧಿಕಾರಿ ಎಂತಹ ಅಮಾನವೀಯ ಆಡಳಿತವನ್ನು ನೀಡಬಹುದು ಎಂಬುದಕ್ಕೆ ಮೋದಿ ತಂಡ ಬುನಾದಿ ಹಾಕುತ್ತಿದೆ.

ಆಕಸ್ಮಾತ್ತಾಗಿ ಮತ್ತೊಂದು ಗೋಧ್ರಾ ದುರಂತ ಸಂಭವಿಸಿದರೆ ಈತನನ್ನು ಅಧಿಕಾರಕ್ಕೇರಿಸಿದ ಜನರಿಗೆ ಎಂದೂ ಕ್ಷಮೆ ಎಂಬುದು ಸಿಗುವುದಿಲ್ಲ.

ನೀವು ಮಾಡುತ್ತಿರುವ ದಿಟ್ಟ ಕೆಲಸವನ್ನು ಮುಂದುವರೆಸಿ. ಈ ನಕಲಿ ಸರ್ಕಾರದ ಮುಖವಾಡ ಆದಷ್ಟು ಬೇಗ ಕಳಚಿಬೀಳಲಿ.

-ತರುಣ್ ಮಲ್ಲಪ್ಪಾ, ಬ್ಲಾಕ್‌ಬೆರ್ರಿ ಫೋನ್ ಮೂಲಕ

ಮೋದಿ-ಷಾ ಜೋಡಿ ಚೆನ್ನಾಗಿದೆ. ಹೀನ ರಾಜಕೀಯದಲ್ಲಿ ಇವರಿಬ್ಬರ 'ಟ್ರ್ಯಾಕ್ ರೆಕಾರ್ಡ್' ಎಂದೇ. ಇವರು ಗೋರಿಗಳ ಮೇಲೆ 'ಸ್ಮಾರ್ಟ್ ಸಿಟಿ' ಕಟ್ಟಬಲ್ಲರು. ಹೆಣ್ಣಿನ ದೇಹದ ಮೇಲೆ ಮನುವಿನ ಅಪ್ಪಣೆಗಳನ್ನು ಕೊಡಿಸಬಲ್ಲರು. ದಲಿತರ ರಕ್ತದಲ್ಲಿ 'ಇತಿಹಾಸ' ತಿರುಚಬಲ್ಲರು. ರೈತರಿಗೆ ರೇಷ್ಮೆ ಉರುಲು ಹೆಣೆಯಬಲ್ಲರು. ಭಾರತ ಕಾಣಲಿದೆ ಇರ್ವ ನಾರಿ ಪಡೆಯ ಕೌರ್ಯದ ನಗ್ನ ನೃತ್ಯವನ್ನು. ಮನುಷ್ಯರೆಲ್ಲ ಒಗ್ಗೂಡಲೇ ಬೇಕು.

-ರವಿಕುಮಾರ್, ಹಾಸನ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

ಪ್ರೇಮ್ ಚಿತ್ರದಲ್ಲಿ ಗೇಮ್ ಸ್ವಾಮಿ

ತಾನು ಗುರುರಾಜುಲು ನಾಯ್ಡು ಮೊಮ್ಮಗ ಅಂತ ಹತ್ತು ವರ್ಷಗಳಿಂದ ಭೋಂಗು ಬಿಡುತ್ತಾ ರಾಜಾಜಿನಗರ, ಶಿವನಹಳ್ಳಿ, ಬಸವೇಶ್ವರನಗರ, ಕುರುಬರಹಳ್ಳಿಗಳಲ್ಲಿ ಅಲೆಯುತ್ತಿದ್ದ ಲಫಂಗ ರಿಷಿ ಕಡೆಗೆ ಗುರುರಾಜುಲು ನಾಯ್ಡು ಮನೆಯವರಿಂದಲೇ ಉಗಿಸಿಕೊಂಡಿದ್ದ. ತನಗೆ ಹರಿಕತೆ ಮಾಡಲು ಬರುತ್ತೆ ಅಂತಲೇ ಪರಿಚಯಮಾಡಿ ಕೊಳ್ಳುತ್ತಿದ್ದ ಈತ ಯಾವಾಗಲೂ ಸಿನಿಮಾದವರ ಹಿಂದೆ ಅಂಡಲೆಯುತ್ತಿದ್ದ ಯಾಕೆಂದರೆ ಸಿನಿಮಾಗಳಲ್ಲಿ ನಟಿಸಬೇಕೆಂಬ ಖಯಾಲಿ ಈತನಿಗೆ ಮೊದಲಿನಿಂದಲೂ ಇತ್ತು. ಅಂತಹ ದಿನಗಳು ಬಾರದೆ ಇದ್ದುದ್ದರಿಂದ ಒಂದಷ್ಟು ದಿನ ಯಾರ



ಕಣ್ಣಿಗೂ ಕಾಣದೆ ಮಾಯವಾಗಿಬಿಟ್ಟಿದ್ದ.

ಕೆಲವು ವರ್ಷಗಳ ಹಿಂದೆ ಈತ ದಿಢೀರನೆ ಪ್ರತ್ಯಕ್ಷವಾದದ್ದು 'ಶ್ರೀ ಶ್ರೀ ಶ್ರೀ ರಿಶಿಕುಮಾರ ಸ್ವಾಮಿ' ಎಂಬ ಕಪಟ ಸ್ವಾಮೀಜಿಯ ಅವತಾರದಲ್ಲಿ. ಈ ಅವಿವೇಕಿ ಯಾವಾಗ ಸ್ವಾಮೀಜಿಯ ವೇಷ ಹಾಕಿಕೊಂಡನೋ ಟಿವಿ ಚಾನಲ್ಲಿನವರು ಈತನನ್ನು ತಮ್ಮ ವಾಹಿನಿಯ ಕಾರ್ಯಕ್ರಮಗಳಲ್ಲಿ ಮಾತಾಡಲು ಬಿಟ್ಟುಕೊಂಡರು. ತಲೆಕೆಟ್ಟವನಂತೆ, ಹೆಂಡ ಕುಡಿದವನಂತೆ, ಅವಿವೇಕಿಯಂತೆ ತೀರಾ ಬಾಲಿಶವಾಗಿ ಗಂಟಲು ಹರಿದುಹೋಗುವಂತೆ ಮಾತಾಡುತ್ತಿದ್ದ ಈತ ಹೊರಗಿನಿಂದ ನೋಡುವವರಿಗೆ 'ಒಳ್ಳೆಯವನೇ ಇರಬೇಕಪ್ಪಾ..' ಎನ್ನಿಸುವಂತೆ ಮಾಡಿ ಮಂಕುಬೂದಿ ಎರಚಿದ್ದ.


ಆಮೇಲಿನ ದಿನಗಳಲ್ಲಿ ಈತನ ಕರ್ಮಕಾಂಡಗಳು ಒಂದೊಂದಾಗಿ ಬಯಲಾದದ್ದು, ಜನರ ದೃಷ್ಟಿಯಲ್ಲಿ ಇವನೊಬ್ಬ ಕಾಮಿಡಿ ಕೋತಿಯಾಗಿದ್ದು ಎಲ್ಲರಿಗೂ ತಿಳಿದಿರುವಂಥದ್ದೇ ಬಿಡಿ. 'ಬಿಗ್ ಬಾಸ್' ಎಂಬ ಹುಟ್ಟಾ ಹೈಕಳ ಕಾರ್ಯಕ್ರಮದಲ್ಲಿ ಯಾವಾಗ ಈತನ ಮುಸುಡಿ ಕಾಣಿಸಿಕೊಂಡಿತೋ ಅಲ್ಲಿಗೆ ಈತನ ಬಣ್ಣ ಇನ್ನಷ್ಟು ಬಯಲಾಗುತ್ತಾ ಬಂತು ಎಂಬುದು ಬೇರೆ ಮಾತು.

ಅಂದಹಾಗೆ, ಭಗವಂತನ ಬೆಡ್‌ರೂಮಿನಲ್ಲೇ ಅವತರಿಸಿದವನಂತೆ ನಟಿಸುವ ಈ ಕಮಂಗಿ ಈಗ ಪ್ರೇಮ್ ನಿರ್ದೇಶನದ 'ಡಿಕೆ' ಎಂಬ ಚಿತ್ರದಲ್ಲಿ ನಟಿಸುತ್ತಿದ್ದಾನೆ. ಇದಕ್ಕೂ ಮೊದಲು ಅಲ್ಲೊಂದು ಇಲ್ಲೊಂದು ಸಿನಿಮಾಗಲ್ಲಿ ಸಣ್ಣಪುಟ್ಟ ಪಾತ್ರಗಳನ್ನೂ ಮಾಡಿದ್ದಾನೆ. ಅಂತೂ ತಾನೊಬ್ಬ ನಟನಾಗಬೇಕೆಂದು ಬಯಸಿದ್ದ ಈತ ಕಡೆಗೂ ಆ ದಿಶೆಯಲ್ಲಿ ಸಾಗುತ್ತಿದ್ದಾನೆ ಅನ್ನಿ. ಇಷ್ಟಕ್ಕೂ ಈತ ಹತ್ತು ವರ್ಷದ ಹಿಂದಿನ ಮಾಮೂಲಿ ರಿಷಿ ಆಗಿದ್ದರೆ ಪ್ರೇಮ್ ತಮ್ಮ ಸಿನಿಮಾದಲ್ಲಿ ನಟಿಸಲು ಈತನಿಗೆ ಅವಕಾಶ ಕೊಡುತ್ತಿದ್ದರಾ ಅನ್ನೋದು ಕೂಡ ಕೆಣಕುವ ಪ್ರಶ್ನೆ. ರಿಷಿ ಇನ್ನಾದರೂ ಕಾವಿ ಕಿತ್ತೆಸೆದು, ಅಚ್ಚುಕಟ್ಟಾಗಿ ಪ್ಯಾಂಟು, ಶರ್ಟು ಹಾಕಿಕೊಂಡು ಚಿತ್ರನಟನಾಗಲಿ ಅಲ್ಲವೇ?

ಮತ್ತೊಂದು ಸ್ವಾರಸ್ಯಕರ ಸಂಗತಿಯೆಂದರೆ ಇದೇ 'ಡಿಕೆ'ಯಲ್ಲಿ ಸೆಕ್ಸ್ ಕ್ವೀನ್ ಸನ್ನಿ ಲಿಯೋನ್ ಕೂಡ ನಟಿಸುತ್ತಿದ್ದಾಳೆ!!!



ಟಿಯೆನ್ನೆಸ್ ವಾಸ್ತು ತಜ್ಞರಾದಾಗ



ಕಿರುತೆರೆಯ ಧಾರಾವಾಹಿಗಳಿಗೆ ಹೊಸದೊಂದು ಆಯಾಮ ಒದಗಿಸಿಕೊಟ್ಟ ನಿರ್ದೇಶಕ ಟಿ.ಎನ್.ಸೀತಾರಾಂ ತಮ್ಮ ಧಾರಾವಾಹಿಗಳ ಮೂಲಕ ನಟರಾಗಿಯೂ ಪ್ರಸಿದ್ಧಿ ಪಡೆದವರು. ಬೇರೆಯವರ ಧಾರಾವಾಹಿ, ಸಿನಿಮಾಗಳಲ್ಲಿ ನಟರಾಗಿ ಅಷ್ಟೇನೂ ಕಾಣಿಸಿಕೊಳ್ಳದ ಸೀತಾರಾಂ ಈಗ ಒಂದು ಚಿತ್ರದಲ್ಲಿ ಹೀರೋ ಫಾದರ್ ಆಗಿ ನಟಿಸುತ್ತಿದ್ದಾರೆ. ಆ ಚಿತ್ರದ ಹೆಸರು 'ವಾಸ್ತು ಪ್ರಕಾರ'. ಯೋಗರಾಜ್ ಭಟ್ ನಿರ್ದೇಶನದ ಈ ಚಿತ್ರದಲ್ಲಿ 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ಮೂಲಕ ಹೆಸರು ಮಾಡಿದ ನಟ ರಕ್ಷಿತ್ ಶೆಟ್ಟಿಯ ಅಪ್ಪನ ರೋಲ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇದೇ ಅಕ್ಟೋಬರ್ 2ರಂದು ತೆರೆಗೆ ಬರಲಿರುವ ಈ ಚಿತ್ರದಲ್ಲಿ 'ವಾಸ್ತು ತಜ್ಞ'ನ ಪಾತ್ರದಲ್ಲಿ ಟಿ.ಎನ್.ಸೀತಾರಾಂ ಅವರು ಕಾಣಿಸಿಕೊಳ್ಳುತ್ತಿದ್ದರೆ ಮಗನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವ ರಕ್ಷಿತ್ ಶೆಟ್ಟಿಯದು ಅದನ್ನು ಉಡಾಫೆಯಾಗಿ, ತಮಾಷೆಯಾಗಿ ಸ್ವೀಕರಿಸುವ ಪಾತ್ರವಂತೆ. ಹಾಗೆ ನೋಡಿದರೆ ಸೀತಾರಾಮ್ ಅವರು ನಿರ್ವಹಿಸುತ್ತಿರುವ ಈ ಪಾತ್ರವನ್ನು ಬ್ರಹ್ಮಾಂಡ ಖ್ಯಾತಿಯ ನರೇಂದ್ರ ಬಾಬು ಎನ್ನುವ ಆಸಾಮಿ ಮಾಡಬೇಕಿತ್ತಂತೆ. ಈಗ ಸೀತಾರಾಂ ಮಾಡುತ್ತಿದ್ದಾರೆ. ಒಳ್ಳೆಯ ಪೋಷಕ ನಟರಾಗುವ ಎಲ್ಲಾ ಲಕ್ಷಣಗಳೂ ಇರುವಂತಹ ಸೀತಾರಾಂ ಅವರು ಇನ್ನಷ್ಟು ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿ ಅಲ್ಲವೇ?




ಜಗ್ಗೇಶ್ ಈಗ ಮೇಲ್ಕೋಟೆ ಮಂ

ಮಗನಿಗೊಂದು ಸಿನಿಮಾ ಮಾಡುವ ಆಶಯ ಹೊತ್ತು ಆಕ್ಷನ್ ಕಟ್ ಹ... ಜಗ್ಗೇಶ್ ಪ್ರಥಮ ಚುಂಬನಂ ದಂತಭಗ್ನಂ ಎಂಬಂತೆ ಸೋತಿದ್ದು ನಿ... ಗೊತ್ತಿರುವಂಥದ್ದೇ. ಇಂಥ ಜಗ್ಗೇಶ್ ಇದೀಗ ನಿರ್ದೇಶಕರಾಗಿ ಎರಡನೇ ಪ... 'ಮೇಲ್ಕೋಟೆ ಮ... ಮಾಡುವ ಹೋರಾಟಕ್ಕೆ ಸ್ಕೆಚ್ ಹಾಕಿದ್ದಾರೆ. ಆ ಚಿತ್ರದ ಹೆಸರು 'ಮೇಲ್ಕೋಟೆ ಮ... ಸ್ವತಃ ಜಗ್ಗೇಶ್ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ತಾವೇ ಹೀ... ಇದೊಂದು ಪಕ್ಕಾ ಕಾಮಿಡಿ ಚಿತ್ರವಾಗಿದ್ದು ಅ... ಮೊದಲ ವಾರದಲ್ಲಿ ಚಿತ್ರೀಕರಣವಾಗಲಿದ... ಚಿತ್ರದ ಮೂಲಕ ಆಂದ್ರಿತಾ ರೇ ಮ... ಬಾರಿಗೆ ಜಗ್ಗೇಶ್ ಜೊತೆ ... ಹಂಚಿಕೊಳ್ಳುತ್ತಿದ್ದಾರೆ. ಉಳಿ... ಜಗ್ಗೇಶ್ ಸದ್ಯಕ್ಕೆ ಯೋಗರಾಜ ... 'ವಾಸ್ತು ಪ್ರಕಾರ'ದಲ್ಲಿ ಬ್ಯುಸಿ ಇರುವ ಕಾರಣದಿಂದ ಆ ಚಿತ್ರ ಮುಗಿದ ಕೂಡಲೇ ತಮ್ಮ ಕನಸಿನ 'ಮೇಲ್ಕೋಟೆ ಮಂಜ'ನನ್ನು ಕೈಗೆತ್ತಿಕೊಳ್ಳಲಿದ್ದಾರೆ. ಲೋ ಬಜೆಟ್ ಸಿನಿಮಾ 'ಎದ್ದೇಳು ಮಂಜುನಾಥ' ಸುಮಾರಾಗಿ ಓಡಿದ ನಂತರ 'ಮಂಜ' ಎಂಬ ಹೆಸರಿಗೆ ಎಲ್ಲಿಲ್ಲದ ಬೇಡಿಕೆ ಬಂದಿದ್ದು 'ಕಳ್ ಮಂಜ' ಸೇರಿದಂತೆ ಅನೇಕ ಚಿತ್ರಗಳು ಮಂಜನ ಹೆಸರಿನಲ್ಲಿ ಬಂದವು. ಈಗ ಜಗ್ಗೇಶ್ ಕೂಡ 'ಮೇಲ್ಕೋಟೆ ... ಆಗಲಿದ್ದಾರೆ. ಈ ಬಾರಿಯಾದರೂ ಜಗ್ಗೇಶ್ ನಿರ್ದೇಶ... ಗೆಲ್ತಾರಾ ನೋಡಬೇಕು.



ನಮಸ್ತೇ...ನಿಖಿತಾ ಮೇಡಂ

ಶ್ರೀನಗರ ಕಿಟ್ಟಿ-ರಾಗಿಣಿ ದ್ವಿವೇದಿ-ನಿ... ಪಟೇಲ್ ಅಭಿನಯದ 'ನಮಸ್ತೇ ಮೇಡಂ' ಚಿ... ನಿಖಿತಾ ತುಕ್ರಾಲ್ ಕೂಡ ನಟಿಸುತ್ತಿರುವ ಸುದ್ದಿ ಹೊರಬಿದ್ದಿದೆ. ಅತಿಥಿ ನಟಿಯ ಪಾತ್ರದಲ್ಲಿ ನಿಖಿತಾ ನಟಿಸುತ್ತಿದ್ದು ಈಕೆ ಚಿತ್ರಧ ಮೊದಲರ್ಧದಲ್ಲಿ ಕಾಣಿಸಿಕೊಳ್ಳಲಿದ್ದು ಯಾವ ಬಗೆಯ ಪಾತ್ರ ಎಂಬುದು ಮಾತ್ರ ಇನ್ನೂ ಗುಟ್ಟಾಗಿಯೇ ಉಳಿದಿದೆ. ನಿಖಿತಾಳ ಪಾತ್ರದ ಗುಟ್ಟು ಬಿಟ್ಟು ಕೊಡಲು ರವಿ ಗರಣಿ ತಯಾರಿಲ್ಲವಂತೆ. ಅಂದಹಾಗೆ ನಿಖಿತಾ ಭಾಗದ ಚಿತ್ರೀ... ಈಗಾಗಲೇ ಮುಗಿದಿದೆಯಂತೆ. ಇಷ್ಟಕ್ಕೂ ನಿ... ರಾಗಿಣಿ ಹಾಗೂ ನಿಕಿಷಾ ಎಂಬ ಈ ಮೂರು ... ಯರ ಪೈಕಿ ಮೇಡಂ ಯಾರು ಎಂಬುದೇ ಕುತ...



ಶರಣ್ ಹೊಸಚಿತ್ರ ಶುರು

'ರಾಜ ರಾಜೇಂದ್ರ' ಶರಣ್ ನಟಿಸುತ್ತಿರುವ ... ಚಿತ್ರ. ರವಿಶಂಕರ್, ಸಾಧುಕೋಕಿಲ, ತಬಲಾ ನಾಣಿ, ಸು... ಪ್ರಸಾದ್, ಕುರಿ ಪ್ರತಾಪ್, ಶ್ರೀನಿವಾಸ್ ಮೂರ್ತಿ ಇನ್ನಿತರರು ನಟಿಸು... ಈ ಚಿತ್ರದಲ್ಲಿ ಶರಣ್ ಜೋಡಿಯಾಗಿ ಇಷಿತಾ ದತ್ತ ಎಂಬಾಕೆ ನಟಿಸು... ಈಕೆ ತನುಶ್ರೀ ದತ್ತಾಳ ಸಹೋದರಿ. ಈ ಮೊದಲು '... ಸಿನಿಮಾ ನಿರ್ಮಿಸಿದ್ದ ಉದಯ್ ಕೆ ಮೆಹತಾ ಈ ಚಿ... ನಿರ್ಮಾಣ ಮಾಡುತ್ತಿದ್ದು ಪೊನ್ ಕುಮಾರನ್ ಎಂಬು... ನಿರ್ದೇಶಕ. ಉಳಿದಂತೆ ಪನೀರ್ ಸೆಲ್ವಂ ಎಂಬು... ಕ್ಯಾಮೆರಾಮ್ಯಾನ್, ಜೋನಿ ಹರ್ಷ ಎಂಬುವವರು ಸಂ... ಜವಾಬ್ದಾರಿ ಹೊತ್ತಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com